ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಸೆಪ್ಟಂಬರ್-೨೦೧೧ ಸಂಚಿಕೆ-೨



ಉದ್ಯೋಗ ಮತ್ತು ಶಿಕ್ಷಣ ಜೊತೆಜೊತೆಯಲ್ಲಿ

ಜನಪದ ವಿಚಾರದಲ್ಲಿ

ಸೆಪ್ಟಂಬರ್ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ - ೨೦೧೧
ಸಂಪುಟ - ೧೨
ಸಂಚಿಕೆ - ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಹೊಸ ಹಾದಿ

ಹೊಸ ಹಾದಿಯನು ಹಿಡಿದು
ನಡೆಯಣ್ಣ, ಮುಂದೆ!
ಹೊಸ ಜೀವ, ಹೊಸ ಭಾವ,
ಹೊಸವೇಗದಿಂದೆ.
ಜಗಕೊಂದು ಯುಗಕೊಂದು
ಹೊಸ ಹೆಸರು ಬೇಕು;
ನಗೆಗೊಂದು, ಬಗೆಗೊಂದು,
ಹೊಸ ಕುಸುರು ಬೇಕು;
ಹೊಸತನವೆ ಮನುಜತೆಯ
ಮೈಸಿರಿಯ ಲಾಸ್ಯ!

ಹಿಂದಿನೊಳ್ಳಿತೊ ಕೆಡುಕೊ -
ಅದು ಭೂತ ವೃತ್ತ;
ಇಂದಿಗದು ಮುಂದಿಗದು
ಬರಿಯ ಸ್ಮೃತಿ ಮಾತ್ರ!
ಹಳೆಹಾದಿ ನಡೆಗಲಿವ
ವರೆಗೆಮಗೆ ಸಾಕು;
ಬಲಿವುದಕೆ, ನಲಿವುದಕೆ
ಹೊಸಹಾದಿ ಬೇಕು!

ಎಲೆ ಪೌರುಷ ಧ್ವಜನೆ!
ಹಿಂದೆಗೆಯ ಬೇಡ;
ಚಲಬಲದ ಸವ್ಯ ಸಾಚಿತ್ವವಿರೆ ಮೂಢ!
ಗೆಲವರಿದೆ?
ನುಗ್ಗಿನಡೆ, ಹಿಗ್ಗಿನಡೆ, ಮುಂದೆ;
ತಿಳಿವುಕಡಲಿನ ಗಡಿಗೆ
ನಡೆವ ಹುರುಪಿಂದೆ.

ಅಂಜದಿರು ಗೆಳೆಯ!
ಹೊಸಹಾದಿಯನು ಹಿಡಿಯೆ;
ಮಂಜುತರ ಸೃಷ್ಟಿಗಾನದಲಿ
ಮೈ ಮರೆಯೆ:
ಎಂಜಲಾಗದ ಮಧುರ
ಮಧುರಸವ ಸವಿಯೆ;
ರಂಜಿಸುವ ಕಾಡು ಮೇಡುಗಳನಂಡಲೆಯೆ!

- ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ತಿನ್ನುವ ಅಹಾರ ವಿಷ, ಉಸಿರಾಡುವ ಗಾಳಿ ವಿಷ, ಕುಡಿಯುವ ನೀರು ವಿಷ, ಹಾಕಿಕೊಳ್ಳುವ ಬಟ್ಟೆ ವಿಷ, ತಾಯಿಯ ಎದೆಹಾಲು ವಿಷ.... ಗಾಬರಿ ಆಗುತ್ತಿದೆಯೇ! ನಾವೆಲ್ಲ ವಿಷ ವರ್ತುಲದಲ್ಲಿ ಜೀವನ ಮಾಡುತ್ತಿದ್ದೇವೆ. ಎಂಡೋಸಲ್ಫಾನ್ ವಿಷದ ಆಪತ್ತುಗಳು ವಿಪರೀತ ಮಟ್ಟಕ್ಕೆ ತಲುಪಿದೆ. ಆದರೆ ಇತ್ತ ಸರ್ಕಾರಗಳು ಕುಂಭಕರ್ಣನಂತೆ ನಿದ್ದೆ ಮಾಡುತ್ತಿವೆ. ಕೀಟನಾಶಕಗಳ ಬಳಕೆಯಿಂದ ವಿಷವು ಆಹಾರದ ಸರಪಳಿಯಲ್ಲಿ ಸೇರುತ್ತಿದೆ. ನಾಶಕಗಳ ಆವೃತ್ತಿಯಲ್ಲಿ 'ಕಳೆನಾಶಕ'ವೂ ಸೇರುತ್ತಿದೆ. ಮೇಲುನೋಟಕ್ಕೆ ಕಳೆನಾಶಕಗಳು ಅಷ್ಟೊಂದು ಅಪಾಯಕಾರಿಯಲ್ಲ. ಆಳವಾಗಿ ಅದರ ಸುತ್ತ ನೋಡಿದಲ್ಲಿ ಭೀಕರ ಸ್ವರೂಪ ಕಾಣುತ್ತದೆ. ಕಳೆನಾಶಕ ಬಳಸಿದಲ್ಲಿ ವಿನಾಶ ಕಟ್ಟಿಟ್ಟಬುತ್ತಿ ಎಂಬುದಕ್ಕೆ ವಿಯಟ್ನಾಂ ಯುದ್ಧವೇ ಜೀವಂತ ಸಾಕ್ಷಿ.

ವಿಯಟ್ನಾಂ ದೇಶದಲ್ಲಿ ಗೆರಿಲ್ಲಾ ಹಾಗೂ ಅಮೇರಿಕಾ ಪಡೆಗಳ ನಡುವೆ ಕದನ ನಡೆಯುತ್ತಿದ್ದ ಕಾಲ. ವಿಯಟ್ನಾಂ ಒಂದು ಚಿಕ್ಕ ಮತ್ತು ಸ್ವಾವಲಂಬಿ ದೇಶ. ಅಮೇರಿಕದ ಎದಿರು ಬಹಳ ದುರ್ಬಲ ದೇಶ. ಸಂಖ್ಯಾ ಮತ್ತು ಶಸ್ತ್ರಾಸ್ತ್ರದಲ್ಲಿ ವಿಯಟ್ನಾಂ ಅಮೇರಿಕದ ಸರಿಸಾಟಿಯಲ್ಲ. ಆದರೆ ಗೆರಿಲ್ಲಾಗಳಿಗೆ ಅವರ ಅರಣ್ಯವೇ ದೊಡ್ಡ ಅನುಕೂಲ. ಚಿರಪರಿಚಿತವಾದ ಕಾಡುಗಳಲ್ಲಿ ಹಗಲಿರುಳು ಕುಳಿತು, ಬೆಳಕಿಲ್ಲದಾಗ ಚಂಗನೆ ಎಗರಿ ಅಮೇರಿಕಾ ಪಡೆಯನ್ನು ನುಚ್ಚುನೂರು ಮಾಡುತ್ತಿತ್ತು. ಘೋರ ಕಾಡುಗಳಲ್ಲಿ ಗೆರಿಲ್ಲಾಗಳನ್ನು ಪತ್ತೆ ಹಚ್ಚುವುದರಲ್ಲಿ ಅಮೇರಿಕಾದವರಿಗೆ ದೊಡ್ಡ ತಲೆನೋವು ಅಯಿತು. ಅಗ 'ಪೆಂಟಾಗನ್ ವಿಜ್ಞಾನಿಗಳು' ಅಮೇರಿಕಾ ಪಡೆಯ ನೆರವಿಗೆ ಬಂದರು. ಸತತ ಪ್ರಯತ್ನಗಳಿಂದ ಕಾರ್ಕೋಟಕ ವಿಷ ಕಂಡುಹಿಡಿದರು. ಗೆರಿಲ್ಲಾಗಳು ಅಡಗಿ ಕುಳಿತ ಕಾಡಿಗೆ 'ಏಜೆಂಟ್ ಆರೇಂಟ್' ಎಂಬ ಕಳೆನಾಶಕವನ್ನು ಸುರಿದರು. ಇದರಿಂದ ಹಸಿರಾಗಿದ್ದ ಎಲೆಗಳು ತಪತಪನೆ ಬೀಳತೊಡಗಿದವು. ಕಾಡು ಹಸಿರು ಎಲೆಗಳನ್ನು ಉದುರಿಸಿ ಸಂಪೂರ್ಣ ಬರಡಾಯಿತು. ಅನಂತರದ ದಿನಗಳಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಬಳಸಿ, ಪತ್ತೆಹಚ್ಚಿ, ಗೆರಿಲ್ಲಾ ಪಡೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡರು.

ಈ ಕೀಟನಾಶಕದಲ್ಲಿ 'ಏಜೆಂಟ್ ಆರೇಂಟ್' ಎಂಬ ರಾಸಾಯನಿಕವನ್ನು ತಯಾರಿಸಲಾಯಿತು. ಇದು ೨,೪ ಡಿ ಹಾಗೂ ೨,೪,೫ ಡಿ ಯ ಜೊತೆಗೆ 'ಡೈ ಆಕ್ಸಿನ್' ಎಂಬ ವಿಷವನ್ನು ಸೇರಿಸಿದ ಮಿಶ್ರಣ. ದೊಡ್ಡ-ದೊಡ್ಡ ಮರಗಳು ಎಲೆ ಉದುರಿಸಿಕೊಂಡು ಮಾನವನ ಕ್ರೌರ್ಯಕ್ಕೆ ಮೂಕ ಸಾಕ್ಷಿಗಳಾದವು. ಆದರೆ ಕಳೆನಾಶಕ ಹುಟ್ಟುಹಾಕಿದ ಆರೋಗ್ಯ ಸಮಸ್ಯೆಗಳು ಮಾತ್ರ ಲೆಕ್ಕವಿಲ್ಲದಷ್ಟು. ಲಕ್ಷಾಂತರ ಕ್ಯಾನ್ಸರ್ ರೋಗಿಗಳು, ಅಂಗವಿಕಲರು, ಶ್ವಾಸಕೋಶದ ರೋಗಿಗಳು ವಿಯಟ್ನಾಂ ದೇಶದಲ್ಲಿ ಹುಟ್ಟಿಕೊಂಡರು. ಆದರೆ ಅಮೇರಿಕಾ ಇದನ್ನು ಒಪ್ಪಲಿಲ್ಲ. ೩೦ ವರ್ಷಗಳ

ತರುವಾಯ ಆ ಯುದ್ಧದಲ್ಲಿ ಭಾಗವಹಿಸಿದ್ದ ಅಮೇರಿಕಾ ಸೈನಿಕರಲ್ಲಿ ಕ್ಯಾನ್ಸರ್ ರೋಗದ ಚಿನ್ಹೆಗಳು ಕಾಣಿಸಿದವು. ಆಗ ಅಮೇರಿಕಾ ವಿಧಿಯಿಲ್ಲದೆ ಒಪ್ಪಿಕೊಂಡಿತು. ಅದೇ ರಾಸಾಯನಿಕ ವಸ್ತುವಾದ 'ಏಜೆಂಟ್ ಆರೇಂಟ್' ಕಳೆನಾಶಕದಲ್ಲಿ ಬಳಸುತ್ತಾರೆ. ನಾವು ಇದೇ ಅಂಶವನ್ನು ಅತೀ ಹೆಚ್ಚಾಗಿ ಕೃಷಿ ಭೂಮಿಯಲ್ಲಿ ಬಳಸುತ್ತಿದ್ದೇವೆ. ಅವುಗಳಲ್ಲಿ ಮಾರುಕಟ್ಟೆಯಲ್ಲಿ ಈಗ ಲಭ್ಯವಿರುವ 'ರೌಂಡಪ್ ರೆಡಿ' ಕಳೆನಾಶಕ ಪ್ರಮುಖ. ರೌಂಡಪ್ ರೆಡಿಯನ್ನು ಅತಿ ಹೆಚ್ಚಾಗಿ ಮತ್ತು ನಿರಂತರವಾಗಿ ಬಳಸಿದರೆ 'ಪರ್ಕಿನ್‌ಸನ್' ರೋಗ ಬರುತ್ತದೆ ಎಂದು ವಿಜ್ಞಾನ ಹೇಳುತ್ತದೆ.

ಈ ಭಯಾನಕ ವಿಷವನ್ನು ರೈತರು ಹೇರಳವಾಗಿ ಕೃಷಿ ಭೂಮಿಗೆ ಬಳಸತೊಡಗಿದ್ದಾರೆ. ಆದರೆ ನಮ್ಮಲ್ಲಿ ಅನೇಕ ರೀತಿಯ ಕಳೆನಿವಾರಕ ಕೃಷಿ ಪದ್ಧತಿಗಳಿವೆ. ಅವುಗಳಲ್ಲಿ ಮುಖ್ಯವಾಗಿ 'ಕಾಟಿಯಾನ' ಎಂಬ ಭತ್ತದ ತಳಿ, ಈ ಭತ್ತವನ್ನು ಬೆಳೆದರೆ ಕಳೆ ತಂತಾನೆ ನಿವಾರಣೆ ಹೊಂದುತ್ತದೆ. ಕಾಟಿಯಾನ ಒಂದು ಕಳೆ ನಿವಾರಕ ಭತ್ತದ ತಳಿ. ಇದು ೧೬೦ ದಿನದ ಬೆಳೆ ಮತ್ತು ಸುಮಾರು ಆರು ಅಡಿ ಎತ್ತರದವರೆಗೂ ಬೆಳೆಯುತ್ತದೆ. ಈ ನಾಟಿ ಭತ್ತದ ತಳಿ ಎರಡು ವರ್ಷಕ್ಕೊಮ್ಮೆ ಬೆಳೆದರೆ ಸಾಕು. ಸಮಗ್ರವಾಗಿ ಕಳೆ ನಿಯಂತ್ರಿಸಬಹುದು.

ಎರಡನೆಯದು ಒಣ/ಹಸಿರು ಮುಚ್ಚಿಗೆಯಿಂದ ಕಳೆ ನಿಯಂತ್ರಿಸಬಹುದು. ಇದು ಸ್ವಲ್ಪ ಕಷ್ಟವಾದರೂ ಕಳೆಯನ್ನು ಯಾವುದೇ ವಿಷ ಬಳಸದೆ ನಿಯಂತ್ರಿಸಬಹುದು. ಇದರಿಂದ ಭೂಮಿಯ ಫಲವತ್ತತೆಯನ್ನು ಸಹ ಕಾಪಾಡಿಕೊಳ್ಳಬಹುದು.

ಮೂರನೆಯದು 'ಇಂಗು' ಬೆಳೆದು ಅದರ ಗಿಡವನ್ನು ಪೂರ್ತಿಯಾಗಿ ಭೂಮಿಯಲ್ಲೆ ಇರುವ ಹಾಗೆ ನೋಡಿಕೊಂಡರೆ ಕಳೆ ನಿಯಂತ್ರಿಸಬಹುದು. ಇಂಗು ಬೆಳೆದ ಹೊಲದಲ್ಲಿ ಇತರೆ ಕಳೆ ಕಡಿಮೆ ಬೆಳೆಯುತ್ತದೆ.

ವಿಷವನ್ನು ಧಿಕ್ಕರಿಸಿ, ಪುಕ್ಕಟೆ ಕೊಟ್ಟರೂ ಕಳೆನಾಶಕ ಬಳಸಬೇಡಿ. ಇದರಿಂದ ದೊಡ್ಡ ದೊಡ್ಡ ರಾಸಾಯನಿಕ ಕಂಪನಿಗಳಿಗೆ ಲಾಭ ಮತ್ತು ರೈತರಿಗೆ ಖರ್ಚು, ಪರಿಹಾರ ಶೂನ್ಯ. 'ವಿಷಮುಕ್ತ ಕೃಷಿ' ಪದ್ಧತಿಯತ್ತ ಹೆಜ್ಜೆ ಹಾಕೋಣ. ವಿಷಮುಕ್ತ ಪರಿಸರ ಬೆಳೆಸೋಣ, ಭೂಮಿಯನ್ನು ವಿಷಮುಕ್ತಗೊಳಿಸೋಣ.

– *ಮಂಜುನಾಥ ಹೊಳಲು*

* * *

ಉದ್ಯೋಗ ಮತ್ತು ಶಿಕ್ಷಣ ಜೊತೆಜೊತೆಯಲ್ಲಿ!

– ಸುರೇಂದ್ರ ಕೌಲಗಿ

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂಸಮಾಃ

- *ಈಶಾವಾಸ್ಯೋಪನಿಷತ್*

ಉದ್ಯೋಗ ಮತ್ತು ಶಿಕ್ಷಣ ಜೊತೆಜೊತೆಯಲ್ಲಿ ಇರುವುದಾದರೆ, ನಡೆಯುವುದಾದರೆ ಅದಕ್ಕಿಂತ ಶ್ರೇಷ್ಠವಿಚಾರವಾಗಲಿ, ಪ್ರಯೋಗವಾಗಲಿ ಬೇರೊಂದು ಇರಲಾರದು. ಹಾಗೆ ನೋಡಿದರೆ ಇಂದಿನ ಎಲ್ಲ ಜಾಗತಿಕ ಸಮಸ್ಯೆಗಳಿಗೆ ಮೂಲ ಕಾರಣ ಶಿಕ್ಷಣದೊಂದಿಗೆ ಉದ್ಯೋಗದ ಸರಿಯಾದ ಜೋಡಣೆಯಾಗದಿರುವುದು. ಉದ್ಯೋಗದಲ್ಲಿ ತೊಡಗಿರುವ ಮನುಷ್ಯನ ಮನಸ್ಸು, ದೇಹ ಮತ್ತು ಆತ್ಮ ಈ ಮೂರರ ಮಿಲನವಾಗಿರುತ್ತದೆ. ಮನುಷ್ಯ ಕೇವಲ ಶರೀರವಲ್ಲ, ಕೇವಲ ಬುದ್ಧಿಯಲ್ಲ, ಕೇವಲ ಆತ್ಮವಲ್ಲ. ಈ ಮೂರರ ಸಮಾನ ವಿಕಾಸದಿಂದ ಮನುಷ್ಯನ ಮನುಷ್ಯತ್ವದ ವಿಕಾಸ ಸಾಧ್ಯವಾಗುತ್ತದೆ. ಈ ವಿಕಾಸಕ್ಕಾಗಿಯೇ ಉದ್ಯೋಗ ಮತ್ತು ಶಿಕ್ಷಣ ಜೊತೆಜೊತೆಯಲ್ಲಿ ಸಾಗಬೇಕು ಮತ್ತು ಒಂದಕ್ಕೊಂದು ಪೂರಕವಾಗಿರಬೇಕಾದುದು ತುಂಬ ಅಗತ್ಯವೂ ಆಗಿದೆ, ಅನಿವಾರ್ಯವೂ ಆಗಿದೆ. ಸಮಾಜ ವರ್ಗರಹಿತ, ಶೋಷಣಮುಕ್ತ ಮತ್ತು ಅಹಿಂಸಾತ್ಮಕವಾಗಿರಬೇಕೆಂಬ ಕಲ್ಪನೆ ಅಂದರೆ ಸರ್ವೋದಯ ವಿಚಾರಾಧಾರಿತ ಸಮಾಜ ಆಗಬೇಕಿದ್ದರೆ ಶಿಕ್ಷಣವನ್ನು ಉದ್ಯೋಗದ ಜೊತೆಗೂ, ಉದ್ಯೋಗವನ್ನು ಶಿಕ್ಷಣದ ಜೊತೆಗೂ ತಳಕು ಹಾಕುವುದು ಜೀವನಧರ್ಮವೇ ಆಗುತ್ತದೆ; ಜೀವನದ ಸಾರ್ಥಕ್ಯದ ಮಾರ್ಗವಾಗುತ್ತದೆ. ಅಂತಿಮವಾಗಿ ಮುಕ್ತಿಯ ದಾರಿಯೂ ಆಗುತ್ತದೆ!

ಯಾವುದು ಮನುಷ್ಯನ ಶಾರೀರಿಕ, ಮಾನಸಿಕ ಸ್ಥಿತಿಯನ್ನು ಎತ್ತರಕ್ಕೆ ಒಯ್ಯುತ್ತದೋ ಅದು ಉದ್ಯೋಗ. ಉತ್+ಯೋಗ = ಉದ್ಯೋಗ. ಇಂಥ ಉದ್ಯೋಗದಲ್ಲಿಯ ಸೊಗಸೇನೆಂದರೆ ಉದ್ಯೋಗ ಮಾಡುವ ಕೈಗಳೇ ಆಲೋಚನೆಯನ್ನೂ ಮಾಡುತ್ತವೆ. ಕೈಗಳಲ್ಲಿರುವ ಸ್ಪರ್ಶಜ್ಞಾನದ ಪೂರ್ಣಪ್ರಮಾಣದ ಉಪಯೋಗವಾಗುತ್ತದೆ. ಈ ಸ್ಪರ್ಶಜ್ಞಾನವೇ ಮೆದುಳನ್ನು ಚಿಂತನೆಗೆ ಪ್ರೇರೇಪಿಸುತ್ತದೆ. ಒಳ್ಳೆಯ ಮತ್ತು ಕೆಟ್ಟುದರಲ್ಲಿರುವ ತಾರತಮ್ಯ ತಿಳುವಳಿಕೆಯನ್ನು ಮಾನವೀಯತೆಯ ಹಿತದ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸುವಂತೆ ಮಾಡುತ್ತದೆ.

ಶಿಕ್ಷಣ ಮತ್ತು ಉದ್ಯೋಗವನ್ನು ಜೋಡಿಸಬೇಕೆಂದರೆ ಅವುಗಳಲ್ಲಿ ಸಮರಸತೆಯಿದ್ದರೆ ಮಾತ್ರ ಸಾಧ್ಯ, ತಾಳಮೇಳವಿದ್ದರೆ ಮಾತ್ರ ಸಾಧ್ಯ. ಶಿಕ್ಷಣ ಪೂರ್ವಕ್ಕೂ, ಉದ್ಯೋಗ ಪಶ್ಚಿಮಕ್ಕೂ ಮುಖಮಾಡಿಕೊಂಡು ನಿಂತರೆ ಅವೆರಡನ್ನು ಜೊತೆಮಾಡಲು ಸಾಧ್ಯವೇ? ಬಲಾತ್ಕಾರವಾಗಿಯೇನಾದರೂ ಜೋಡಿಸಲು ಪ್ರಯತ್ನಿಸಿದಲ್ಲಿ ಅವುಗಳ ಮಧ್ಯವಿರಸವುಂಟಾಗಿ, ಅಂತಿಮವಾಗಿ ವ್ಯಕ್ತಿಯ ಮರಣವೇ

ಆದೀತು. ಇಂಥ ದುರಂತಕ್ಕೆ ಬದಲಾಗಿ ಅವೆರಡಲ್ಲಿ ಸಮರಸತೆಯುಂಟಾಗಿ ಜೀವನರೂಪಗೊಳ್ಳುವಂತೆ ಮಾಡುವುದೇ ಬುದ್ಧಿವಂತಿಕೆ. ಈಗ ಅಂಥ ಕೆಲಸವಾಗಬೇಕಿದೆ. ಶಿಕ್ಷಣ ಗುರಿಯಾದರೆ, ಉದ್ಯೋಗ ಮಾಧ್ಯಮವಾಗಬೇಕು; ಉದ್ಯೋಗ ಗುರಿಯಾದರೆ ಶಿಕ್ಷಣ ಮಾಧ್ಯಮವಾಗಬೇಕು. ಮೂಲತಃ ಶಿಕ್ಷಣ ಜೀವನ್ಮುಖಿಯಾಗಿದೆ; ಉದ್ಯೋಗ ಹಣಮುಖಿಯಾಗಿದೆ. ಅಂದರೆ ಶಿಕ್ಷಣ ಯಾವ ದಿಕ್ಕಿನತ್ತ ನೋಡುತ್ತಿದೆಯೋ ಅದಕ್ಕೆ ವಿರುದ್ಧ ದಿಕ್ಕಿನತ್ತ ಉದ್ಯೋಗ ನೋಡುತ್ತಿದೆ. ಯಾವ ದಿಕ್ಕಿನತ್ತ ಶಿಕ್ಷಣ ಹೆಜ್ಜೆ ಹಾಕುತ್ತಿದೆಯೋ ಅದಕ್ಕೆ ವಿರುದ್ಧ ದಿಕ್ಕಿನತ್ತ ಉದ್ಯೋಗ ಚಲಿಸುತ್ತಿದೆ.

ಜೀವನದಲ್ಲಿ ಶಿಕ್ಷಣ ಮೌಲ್ಯ ಬಯಸುತ್ತದೆ. ಆದರೆ ಉದ್ಯೋಗ ಮೌಲ್ಯಗಳ ಸಮಾಧಿಯ ಮೇಲೆ ಐಶಾರಾಮಿ ಜೀವನದ ಸೌಧವನ್ನು ಕಟ್ಟಲೆಳಿಸುತ್ತದೆ.

ಉದ್ಯೋಗ ಮತ್ತು ಶಿಕ್ಷಣದ ತಳಹದಿಯಲ್ಲಿ ಇರುವ ಈ ವೈರುಧ್ಯದ ಕಾರಣದಿಂದ ಏನೆಲ್ಲ ಅನಾಹುತಗಳು ಸಂಭವಿಸುತ್ತಿವೆ ಎಂಬುದನ್ನು ಇಂದು ನಾವು ನಮ್ಮ ಸುತ್ತಲೂ ಕಾಣಬಹುದು. ಇನ್ನೊಂದರ್ಥದಲ್ಲಿ ಅನಾಹುತಗಳ ಮಧ್ಯೆಯೇ ನಮ್ಮ ಜೀವನರಥ ಸಾಗಿದೆ.

ಉದ್ಯೋಗ ಮತ್ತು ಶಿಕ್ಷಣದ ಸಂಬಂಧ ಕರುಳಬಳ್ಳಿಯ ಸಂಬಂಧವೆಂಬ ಮಾತು ಇಂದು ನಿನ್ನೆಯದಲ್ಲ. ಋಷಿಗಳು ಯಾವಾಗ ವೇದ ಮತ್ತು ಉಪನಿಷತ್ತುಗಳನ್ನು ಸೃಷ್ಟಿಸಿದರೋ ಆಗಲೇ ಶಿಕ್ಷಣ ಮತ್ತು ಉದ್ಯೋಗದ ಅಂತರಾತ್ಮಗಳ ಸಂಬಂಧದ ಬಗ್ಗೆ ಆಲೋಚಿಸಿದ್ದರು. ಅದನ್ನು ಅವರು ಕರ್ಮಯೋಗ, ಧ್ಯಾನಯೋಗ ಮತ್ತು ಭಕ್ತಿಯೋಗಗಳೆಂಬ ಪರಿಭಾಷೆಯಲ್ಲಿ, ಅಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಹೇಳಿದ್ದರು. ಋಷಿಗಳು ಗುದ್ದಲಿ ಹಿಡಿದು ಕೆಲಸಮಾಡಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸಿದ ಉಲ್ಲೇಖ ವೇದಗಳಲ್ಲಿ ಇದೆ. ಪ್ರಾಚೀನ ಸಾಹಿತ್ಯದಲ್ಲಿ ಶಿಕ್ಷಣದ ಅನೇಕ ಪದ್ಧತಿಗಳಲ್ಲಿ 'ಸಮವಾಯ ಪದ್ಧತಿ' ಎಂಬ ಒಂದು ಪದ್ಧತಿಯ ಪ್ರಸ್ತಾಪ ಬರುತ್ತದೆ. ಅಂದರೆ ಮಕ್ಕಳ ಶಿಕ್ಷಣವೆಲ್ಲವೂ ಒಂದು ಮೂಲೋದ್ಯೋಗದ ಮೇಲೆ ನಿಲ್ಲಬೇಕು. ಉದ್ಯೋಗದಿಂದ ಶಿಕ್ಷಣಕ್ಕೆ ಬಿಸಿಸಿಗಬೇಕು. ಶಿಕ್ಷಣದಿಂದ ಉದ್ಯೋಗಗಕ್ಕೆ ಬೆಳಕು ಸಿಗಬೇಕು. ಈ ಮಾತನ್ನು ಒಂದು ಸುಂದರ ದೃಷ್ಟಾಂತದಿಂದ ತಿಳಿಸಿ ಹೇಳಲಾಗಿದೆ:– ಗಡಿಗೆ ಮತ್ತು ಮಣ್ಣು ಇವು ಒಂದೇ ಪದಾರ್ಥವೇ ಅಥವಾ ಎರಡು ಪದಾರ್ಥಗಳೇ? ಎರಡು ಅನ್ನುತ್ತೀರೋ, ನಮ್ಮ ಮಣ್ಣನ್ನು ನಮಗೆ ಕೊಡಿ, ನಿಮ್ಮ ಗಡಿಗೆಯನ್ನು ನೀವು ತೆಗೆದುಕೊಂಡು ಹೋಗಿ. ಗಡಿಗೆ ಮತ್ತು ಮಣ್ಣು ಒಂದೇ ಅನ್ನುತ್ತೀರೋ, ಅಲ್ಲಿ ಮಣ್ಣಿನ ರಾಶಿಯೇ ಬಿದ್ದಿದೆ, ನೀರು ತುಂಬಿಕೊಳ್ಳಿ. ಮಣ್ಣು–ಗಡಿಗೆಗಳ ಈ ಸಂಬಂಧವನ್ನು 'ಸಮವಾಯ' ಅನ್ನುತ್ತಾರೆ. ಈ ತತ್ವದ ಹಿನ್ನೆಲೆಯಲ್ಲಿ ಇಂದಿನ ಶಿಕ್ಷಣ ಪದ್ಧತಿಯನ್ನು ಅವಲೋಕಿಸಬೇಕಿದೆ.

ಇಂದಿನ ಶಿಕ್ಷಣ ಜೀವನ ಮೌಲ್ಯಾಧಾರಿತವಾಗಿರದೆ, ಹಣಮುಖಿ ಉದ್ಯೋಗ ಸೃಷ್ಟಿಗಳಿಗೆ ಕಾರಣವಾಗುತ್ತಿದೆ. ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ಕಾನೂನು ಶಿಕ್ಷಣ ಮುಂತಾದವುಗಳು ಹಣಸಂಪಾದನೆಯ ಉದ್ದೇಶ್ಯಕ್ಕೇ ರಚಿತವಾದ ಪಾಠಕ್ರಮವನ್ನು, ಶಿಸ್ತನ್ನು ಹೊಂದಿವೆ. ಇವೆಲ್ಲವೂ ಹಣಸಂಪಾದನೆಗೆ ದಾರಿಯಾದ ವೃತ್ತಿಗಳಾಗಿವೆ. ಸಮವಾಯ ಶಿಕ್ಷಣ ಪದ್ಧತಿಯ ಅರ್ಥದಲ್ಲಿ ಇಂದಿನ ಶಿಕ್ಷಣ ಮಣ್ಣು ಸದೃಶವಾಗಿದೆ,

ಉಪಯುಕ್ತಕರವಾದ ಗಡಿಗೆಯನ್ನು ಸೃಷ್ಟಿಸುವ ಉದ್ಯೋಗ ಅದರ ಜೊತೆಯಲ್ಲಿ ಇಲ್ಲವಾಗಿದೆ.

ಇಂದಿನ ಪರಿಭಾಷೆಯಲ್ಲಿ ಉದ್ಯೋಗವೆಂದರೆ ಶರೀರಶ್ರಮವಿಲ್ಲದ ಬಿಳಿ ದಿರಿಸಿನ (White-color) ಉದ್ಯೋಗ. ಅಂದರೆ ಬುದ್ಧಿಜೀವಿಗಳದೇ ಒಂದು ವಿಭಾಗ, ಶ್ರಮಜೀವಿಗಳದೇ ಒಂದು ವಿಭಾಗ. ಹೀಗೆ ಎರಡು ಪ್ರಕಾರದ ವರ್ಗಗಳುಳ್ಳ ಸಮಾಜವನ್ನು ನಿರ್ಮಿಸುವುದೇ ಆಗಿದೆ.

ಶಿಕ್ಷಣದ ಹರಹು ಮಗುವಿನ ಗರ್ಭಾವಸ್ಥೆಯಿಂದಲೇ ಪ್ರಾರಂಭವಾಗಿ ಜೀವನದ ಅಂತ್ಯದವರೆಗೂ ಹರಡಿದೆ. ತಾಯಿಯಾದವಳ ಮನಸ್ಸು-ಬುದ್ಧಿ-ವಿಚಾರ ಇತ್ಯಾದಿಗಳು ಸಕಾರಾತ್ಮಕವಾಗಿಯೂ, ಸುಸಂಸ್ಕಾರವುಳ್ಳದ್ದಾಗಿಯೂ ಇದ್ದರೆ ಮತ್ತು ತಾಯಿ ದೈಹಿಕವಾಗಿ ಕ್ರಿಯಾಶೀಲವಾಗಿದ್ದರೆ ಜನ್ಮಪಡೆದ ಮಗುವು ಕೂಡ ಇದೇ ಗುಣಗಳನ್ನು ಪಡೆದುಕೊಳ್ಳುತ್ತದೆ. ದೊಡ್ಡವನಾದಂತೆ ಉದ್ಯೋಗಶೀಲನಾಗುತ್ತಾನೆ. ಆದ್ದರಿಂದಲೇ ಯಾರ ಮನೆಯಲ್ಲಿ ಉದ್ಯೋಗದ ವಾತಾವರಣವಿರುವುದಿಲ್ಲವೋ ಆ ಮನೆಗೆ ಗೆಜ್ಜಲು ಹತ್ತಿದಂತೆ ಎಂಬುದಾಗಿ ಸಂತ ವಿನೋಬಾ ಹೇಳುತ್ತಿದ್ದರು. ಈಗ ಉದ್ಯೋಗದ ಪರಿಸ್ಥಿತಿ ಮನೆಗಳಲ್ಲಿ ಇಲ್ಲವಾಗಿದೆ. ಗರ್ಭಿಣಿ ಸ್ತ್ರೀಯರು ದೂರದರ್ಶನ ನೋಡುತ್ತಾರೆ. ಅಲ್ಲಿ ಬಿತ್ತರಿಸಲಾಗುವ ಹಿಂಸಾ ಪ್ರಧಾನ-ಜಗಳಪ್ರಧಾನ ಚಿತ್ರಗಳನ್ನು ನೋಡುವುದರಿಂದ ಮಕ್ಕಳ ಮೇಲೆ ದುಷ್ಪರಿಣಾಮವೇ ಬೀಳುತ್ತದೆ. ಮನೆಯಲ್ಲಿ ಮಾಡಬಹುದಾದ ಶಾರೀರಿಕ ಉದ್ಯೋಗಗಳು ಇಲ್ಲವಾಗಿರುವುದರಿಂದ ಮಕ್ಕಳಿಗೆ ಶಾರೀರಿಕ ಪರಿಶ್ರಮಾಧಾರಿತ ಉದ್ಯೋಗದ ಅನುಭವವೇ ಇಲ್ಲದಂತಾಗುತ್ತಿದೆ.

ಇಂದಿನ ಪರಿಸ್ಥಿತಿಯಲ್ಲಿ ಮನೆಯಲ್ಲಿ ಯಾವುದೇ ಪ್ರಕಾರದ ಉದ್ಯೋಗದ ವಾತಾವರಣವಿಲ್ಲ, ಶಾಲಾ-ಕಾಲೇಜುಗಳಲ್ಲಿಯೂ ಉದ್ಯೋಗದ ವಾತಾವರಣವಿಲ್ಲ. ಇನ್ನು ಹೊಟ್ಟೆಪಾಡಿನ ಕೆಲಸವೂ ಬುದ್ಧಿಯಾಶ್ರಿತವಾಗಿದೆಯೇ ಹೊರತು ಆತ್ಮ, ಬುದ್ಧಿ ಮತ್ತು ಶರೀರಗಳ ಸಂಯೋಜನೆಯುಳ್ಳ ಉದ್ಯೋಗವಲ್ಲ. ಕೈಗಾರಿಕಾ ಕ್ರಾಂತಿ ಮನುಷ್ಯನನ್ನು ಯಂತ್ರದ ಭಾಗವನ್ನಾಗಿ ಮಾಡಿತು. ಅವನು ತನ್ನ ವ್ಯಕ್ತಿತ್ವವನ್ನು, ಕ್ರಿಯಾಶೀಲತೆಯನ್ನು ಕಳೆದುಕೊಂಡಿದ್ದಾನೆ. ತನ್ನ ಅಸ್ಮಿತೆಯನ್ನೇ ಕಳೆದುಕೊಂಡಿದ್ದಾನೆ. ಅವನ ಜೀವನ ಶುಷ್ಕವಾಗಿದೆ. ಶಿಕ್ಷಣದ ಜೊತೆ-ಜೊತೆಯಲ್ಲಿ ಉದ್ಯೋಗದ ಕೊಂಡಿ ಕಳಚಿಹೋಗಿರುವುದರಿಂದಲೇ ಇಂದು ಸಮಾಜದಲ್ಲಿ ಅಸಮಾನತೆ, ಹಿಂಸೆ, ಭ್ರಷ್ಟಾಚಾರ, ವಾಣಿಜ್ಯೀಕರಣ ಸ್ಥಾಪಿತವಾಗಿವೆ.

ಇಂದಿನ ಶಿಕ್ಷಣಕ್ಕೆ ಯಾವುದೇ ಸಾಮಾಜಿಕ ಗುರಿಯಿಲ್ಲ. ಶಿಕ್ಷಣವನ್ನು ಪಡೆಯುವ ವ್ಯಕ್ತಿ ತಾನು ಯಾವ ಪ್ರಕಾರದ ಸಮಾಜ ವ್ಯವಸ್ಥೆಯಲ್ಲಿ ಇರಬಯಸುತ್ತಾನೆಂಬುದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದಿಲ್ಲ. ಅವನು ಎಷ್ಟು ಪ್ರಜ್ಞಾಶೂನ್ಯನಾಗಿದ್ದಾನೆಂದರೆ ತನ್ನ ಸುತ್ತಲಿನ ಸಮಾಜ ಸ್ವಾರ್ಥಿಗಳಿಂದ ಕೂಡಿದ್ದರೂ ಅಂಥ ಸಮಾಜದಲ್ಲಿಯೇ ಇರಬಯಸುತ್ತಾನೆ; ಭ್ರಷ್ಟ-ದುಷ್ಟರಿಂದ ಕೂಡಿದ್ದರೂ ಅಂಥ ಸಮಾಜದಲ್ಲಿಯೇ ಇರಬಯಸುತ್ತಾನೆ. ಸಮಾಜ ವ್ಯವಸ್ಥೆಯನ್ನು ಬದಲಾಯಿಸ ಬೇಕೆಂಬ ಇಚ್ಛೆಯನ್ನೇ ಕಳೆದುಕೊಂಡಿದ್ದಾನೆ. ಸಮಾಜದಲ್ಲಿ ಎಂಥ ಪರಿಸ್ಥಿತಿ ಇರುತ್ತದೋ ಅದಕ್ಕೆ ತಕ್ಕಂತೆ ತನ್ನನ್ನು ಹೊಂದಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾನೆ. ಏಕೆಂದರೆ ಅವನು ಪಡೆದ ಶಿಕ್ಷಣ ಪ್ರೊ॥ ರಾಬರ್ಟ್

ಹಚಿನ್ಸ್ ಎಂಬ ಶಿಕ್ಷಣ ತಜ್ಞನೇ ಹೇಳಿರುವಂತೆ ತಾತ್ಕಾಲಿಕ (ad-hoc) ಆದುದು. ತಾತ್ಕಾಲಿಕವಾದುದು ಪರಿಸ್ಥಿತಿಯ ವಶವಾಗಿರುತ್ತದೆಯೇ ಹೊರತು ಪರಿಸ್ಥಿತಿಯನ್ನು ನಿಯಂತ್ರಿಸಲಾರದು. ಸಾಮಾಜಿಕ ಮೌಲ್ಯವಿಲ್ಲದ, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಪೂರ್ಣ ಕಲ್ಪನೆಯಿಲ್ಲದ ತಾತ್ಕಾಲಿಕ ಶಿಕ್ಷಣ ಪಡೆದ ವ್ಯಕ್ತಿಗಳೇ ರಾಷ್ಟ್ರ ಜೀವನದ ಪ್ರಮುಖ ಸ್ಥಾನಗಳಲ್ಲಿದ್ದುಕೊಂಡು ಇಂದು ಅಧಿಕಾರ ನಡೆಸುತ್ತಿರುವುದರಿಂದ ಪಂಚವಾರ್ಷಿಕ ಯೋಜನೆಗಳು ಸಮಾಜವನ್ನು ತಲೆಕೆಳಗಾದ ಪಿರಮಿಡ್ (inverted pyramid) ರೀತಿಯಲ್ಲಿ ನಿರ್ಮಿಸುತ್ತಿವೆಯೇ ಹೊರತು ಸಾಗರಾಂತಿಕ ವರ್ತುಲ (oceanic circle) ರೀತಿಯಲ್ಲಿ ನಿರ್ಮಿಸಲಾಗುತ್ತಿಲ್ಲ. ಇದರ ಪರಿಣಾಮವೇ ಹಳ್ಳಿಗಳ ವಿನಾಶ, ಹಳ್ಳಿಗರ ವಲಸೆ, ನಾಲ್ಕು ದಿಕ್ಕುಗಳಿಗೂ ಚಾಚಿ ಬೆಳೆಯುತ್ತಿರುವ ನಗರ, ಜನದಟ್ಟಣೆ, ಸುಗಮ ಓಡಾಟಕ್ಕೆ ಅಡ್ಡಿ ಆತಂಕಗಳು, ದೇಶೀಯ ಭಾಷೆಗಳನ್ನು ಇಂಗ್ಲಿಷ್ ಭಾಷೆಯೆಂಬ ಶೂಲಕ್ಕೆ ಮೊಳೆ ಹೊಡೆದು ಸಾಯಿಸುತ್ತಿರುವುದು, ವಿವೇಚನೆಯಿಲ್ಲದ ವೈಜ್ಞಾನಿಕ ಸಂಶೋಧನೆಗಳು, ತಾಂತ್ರಿಕತೆಯ ಉಪಯೋಗಗಳು, ಪರಿಸರದ ವಿನಾಶ. ಭೂಮಿಯ ಮೇಲಿನ ಸಮಸ್ಯೆಗಳನ್ನು ಬಿಡಿಸಲು ಅಸಮರ್ಥವಾಗಿ ಮತ್ತು ಹೆದರಿಕೊಂಡು ಮಹಾಭಾರತ ಕಥೆಯ ಉತ್ತರಕುಮಾರನಂತೆ ಆಕಾಶಯಾನ, ಚಂದ್ರಯಾನ, ಮಂಗಳಯಾನ, ಗುರುಯಾನ, ಶುಕ್ರಗ್ರಹಯಾನ ಮುಂತಾದ ಯಾನಗಳ ಮತ್ತಿಗೆ ಒಳಗಾಗಿ ಕಿಂಕರ್ತವ್ಯ ಮೂಢನಾಗುತ್ತಿರುವುದು. ಬಾಹ್ಯಾಕಾಶ ಯಾನಗಳು ತಾತ್ಕಾಲಿಕ ಶಿಕ್ಷಣದಿಂದ ಮನುಷ್ಯ ಪಡೆದಿರುವ ಅಫೀಮು-ಮಾದಕವಸ್ತು. ಮಾದಕ ವಸ್ತು ಸೇವನೆಯಿಂದ ಬಿಡುಗಡೆಗೊಳ್ಳುವುದು ಕಷ್ಟಸಾಧ್ಯ. ಈ ಪರಿಸ್ಥಿತಿಗೆ ಕಾರಣ ಪೂರ್ಣದೃಷ್ಟಿಯಿಲ್ಲದ, ತಾತ್ಕಾಲಿಕ ಪ್ರಯೋಜನದ ದೃಷ್ಟಿಯುಳ್ಳ ಶಿಕ್ಷಣ.

ಇಂದಿನ ಶಿಕ್ಷಣ ತುಂಬ ಔಪಚಾರಿಕವಾದುದು ಆಗಿದೆ. ಅಂದರೆ ಕೇವಲ ಜೀವನ ನಿಷ್ಠೆಯುಳ್ಳದ್ದಾಗಿದೆ. ಹೇಗೆ ಹೋರಾಟ ಮಾಡಿ ಧನಬಲದಿಂದ ಬದುಕಬೇಕೆಂಬುದನ್ನು ಕಲಿಸುತ್ತದೆಯೇ ಹೊರತು, ಅದರ ಮೂಲ ಉದ್ದೇಶ್ಯವೇನು, ಗುರಿಯೇನು ಎಂಬುದನ್ನು ತಿಳಿಸುವುದಿಲ್ಲ. ಅದು ಬಹುಮಟ್ಟಿಗೆ ತಾಮಸಿಕ ಮತ್ತು ರಾಜಸಿಕ ಗುಣಗಳಿಂದ ಕೂಡಿದೆ. ಆದ್ದರಿಂದ ಇಂದು ಆಧುನಿಕ ಜೀವನನಿಷ್ಠ ಶಿಕ್ಷಣ ಪಡೆದವರು ಶರೀರ ಶ್ರಮದಿಂದ ದೂರವಿದ್ದಾರೆ. ಅದರ ಬಗ್ಗೆ ಅಗೌರವವಿದೆ, ತಿರಸ್ಕಾರವಿದೆ. ಸುಲಭವಾಗಿ ಮತ್ತು ಪರೋಕ್ಷ ಶ್ರಮದಿಂದ ಧನಸಂಪಾದನೆ ಹೇಗೆ ಮಾಡಬೇಕೆಂಬುದರ ಬಗ್ಗೆ ಆಸಕ್ತಿವುಳ್ಳವರಾಗಿದ್ದಾರೆ. ಹಣದ ಬಗ್ಗೆ ಇರುವ ಆಸಕ್ತಿಯೇ ಪರಿಸರ ವಿನಾಶಕ್ಕೆ ಕಾರಣವಾಗಿದೆ; ಅತ್ಯಂತ ವಿನಾಶಕಾರಿ ಶಸ್ತ್ರಾಸ್ತ್ರಗಳ ತಯಾರಿಕೆಗೂ ಕಾರಣವಾಗಿದೆ. ಇಂಥ ಕೇವಲ ಜೀವನನಿಷ್ಠ ಶಿಕ್ಷಣಪದ್ಧತಿ ವ್ಯಕ್ತಿ ಮತ್ತು ಸಮಷ್ಟಿಯ ಹಿತವನ್ನು ಗುರಿಯನ್ನಾಗಿಟ್ಟುಕೊಂಡ ವಿದ್ಯೆಯಾಗಿ ಪರಿವರ್ತಿತಗೊಳ್ಳಬೇಕಾದರೆ, ಸಾತ್ವಿಕಶಕ್ತಿಯಾಗಿ ಹೊರಹೊಮ್ಮಬೇಕಾದರೆ ಪ್ರಚಲಿತ ಔಪಚಾರಿಕ ಶಿಕ್ಷಣ ಉತ್ಪಾದಕ ಪರಿಶ್ರಮದ ಉದ್ಯೋಗದೊಂದಿಗೆ ಸಂಲಗ್ನಗೊಳ್ಳಬೇಕಾದುದು ಅಗತ್ಯ. ಆಗ ಇಂದಿನ ಔಪಚಾರಿಕ ಶಿಕ್ಷಣ ಪಡೆದ ವ್ಯಕ್ತಿಗಳೂ ಬಲಯುತರಾಗುತ್ತಾರೆ. ಬಲಯುತರಾಗುವುದರ ಪರಿಣಾಮವನ್ನು ಛಾಂದೋಗ್ಯಪನಿಷತ್ ಹೀಗೆ ವಿವರಿಸಿದೆ:- ಮನುಷ್ಯ ಬಲಶಾಲಿಯಾದಾಗ ಅವನು ಎದ್ದು ನಿಲ್ಲುತ್ತಾನೆ; ಎದ್ದು ನಿಂತಾದ ಮೇಲೆ ಗುರುವಿನ ಸೇವೆ ಮಾಡುತ್ತಾನೆ;ನಂತರ ಗುರುವಿನ ನಿಕಟದಲ್ಲಿ ಕುಳಿತುಕೊಳ್ಳುತ್ತಾನೆ;

ಆಗ ಅವನು ಗುರುವಿನ ಜೀವನವನ್ನು ಗಮನವಿಟ್ಟು ನೋಡುತ್ತಾನೆ, ಅವನ ವ್ಯಾಖ್ಯಾನ ಕೇಳುತ್ತಾನೆ, ಅದನ್ನು ಮನನ ಮಾಡುತ್ತಾನೆ, ತಿಳಿದುಕೊಳ್ಳುತ್ತಾನೆ ಮತ್ತು ಅದಕ್ಕನುಸಾರ ಆಚರಣೆಮಾಡುತ್ತಾನೆ. ಕೊನೆಯಲ್ಲಿ ಅವನಿಗೆ ವಿಜ್ಞಾನ ಅಂದರೆ ಅಪರೋಕ್ಷ ಅನುಭೂತಿಯ ಲಾಭವಾಗುತ್ತದೆ, ವಿದ್ಯೆ ದೊರೆಯುತ್ತದೆ. ಇದು ಉದ್ಯೋಗದಿಂದಾಗುವ ಶ್ರೇಷ್ಠ ಪರಿಣಾಮ. ಇಂದು ನಿರುದ್ಯೋಗ ಆಧಾರಿತ ಶಿಕ್ಷಣ ಇರುವುದರಿಂದ ಶಾಲಾ-ಕಾಲೇಜ್-ವಿಶ್ವವಿದ್ಯಾನಿಲಯಗಳಿಂದ ಹೊರಬರುವ ಯುವಕರು 'ದಾರಿತಪ್ಪಿದವರಂತೆ' ಕಾಣುತ್ತಾರೆ ಮತ್ತು ಅದರಂತೆ ವರ್ತಿಸುತ್ತಾರೆ.

ಇಂಥ ದುಃಸ್ಥಿತಿ ಭಾರತಕ್ಕೊದಗಬಾರದೆಂದೆ ರಾಷ್ಟ್ರಪಿತಾ ಮಹತ್ಮಾ ಗಾಂಧೀಯವರು ೧೯೩೭ರಲ್ಲಿಯೇ ಅಂದರೆ ಸ್ವಾತಂತ್ರ್ಯ ಬರುವುದಕ್ಕೂ ಹತ್ತು ವರ್ಷಗಳ ಮುನ್ನವೇ 'ಹೊಸ ಶಿಕ್ಷಣ' ಅಥವಾ 'ಜೀವನ ಶಿಕ್ಷಣ'ವೆಂಬ ವಿಶಿಷ್ಟವಾದ ಶಿಕ್ಷಣ ಪದ್ಧತಿಯನ್ನು ದೇಶದ ಮುಂದೆಯಿಟ್ಟರು. ಈ ಶಿಕ್ಷಣದ ವಿಶೇಷವೇನೆಂದರೆ ಇದು ಪೂರ್ಣತಃ ಭಾರತೀಯತೆಯ ಗುಣಧರ್ಮಗಳಿಂದ ಕೂಡಿದುದಾಗಿದೆ. ಇದಕ್ಕಿಂತ ಮುಖ್ಯವಾಗಿ ಮೆಕಾಲೆ ಶಿಕ್ಷಣ ಪದ್ಧತಿಯಿಂದ ಏನೆಲ್ಲ ಅನಾಹುತಗಳು ಸಂಭವಿಸಬಹುದೋ ಅದಕ್ಕೆ ಬಲವಾದ ತಡೆಗೋಡೆಯನ್ನು ನಿರ್ಮಿಸುವಂಥದ್ದಾಗಿದೆ. ಗಾಂಧೀಜಿಯವರೇ ಸ್ವತಃ ಹೇಳುವಂತೆ 'ಹೊಸ ಶಿಕ್ಷಣ' ತಾವು ದೇಶಕ್ಕೆ ಕೊಟ್ಟ ಅಂತಿಮ ಮತ್ತು ಸರ್ವೋತ್ತಮ ಕಾಣಿಕೆಯಾಗಿದೆ. ಈ ಶಿಕ್ಷಣದ ಮೂಲಕ ಗಾಂಧೀಜಿ ವ್ಯಕ್ತಿಯ ವಿಕಾಸ, ಸಾಮಾಜಿಕ ಸಂದರ್ಭದಲ್ಲಿ ಅದೊಂದು ಅಹಿಂಸಾ ಕ್ರಾಂತಿಯ ವಾಹಕವಾಗಿದೆ. ತನ್ಮೂಲಕ 'ರಾಮರಾಜ್ಯ' ಅಥವಾ 'ಗ್ರಾಮರಾಜ್ಯ'ದ ತಮ್ಮ ಕನಸನ್ನು ನನಸನ್ನಾಗಿ ಗಾಂಧೀ ಮಾಡಬಯಸಿದ್ದರು. ಈ 'ಹೊಸ ಶಿಕ್ಷಣ' ಸಂಪೂರ್ಣವಾಗಿ ಉದ್ಯೋಗದೊಂದಗೆ ಜೊತೆಜೊತೆಯಾಗಿ ನಡೆಯುವಂಥಾದ್ದಾಗಿದೆ.

ಶಿಶುವಿಹಾರದಿಂದ ಪ್ರಾರಂಭಿಸಿ ಪಿ.ಎಚ್.ಡಿ ವರೆಗಿನ ಎಲ್ಲ ಶಿಕ್ಷಣವೂ ದೇಹಶ್ರಮಾಧಾರಿತ ಉತ್ಪಾದಕ ಉದ್ಯೋಗದೊಂದಿಗೆ ಜೊತೆ-ಜೊತೆಯಾಗಿ ನಡೆದರೆ ಮೇಲೆ ಪಟ್ಟಿಮಾಡಲಾದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಅಥವಾ ಅಂಥ ಸಮಸ್ಯೆಗಳೇ ಹುಟ್ಟದ ಸಮಾಜವ್ಯವಸ್ಥೆಯನ್ನು ನಿರ್ಮಿಸಬಹುದಾಗಿದೆ. ಉತ್ಪಾದಕ ಶರೀರಶ್ರಮವಿಲ್ಲದೆ ಊಟ ಮಾಡುವುದು ಕಳ್ಳತನವೆಂದು ಗೀತೆ ಸಾರಿದೆ. ಪರಿಶ್ರಮವನ್ನರಿಯದ ಜೀವನ ಅಸಹಜ ಜೀವನ. "ಈ ಅಸಹಜ ಜೀವನ ಸಹಜವಾದಷ್ಟೂ ಸಹಜ ಪ್ರಪಂಚವು ಅಸಹಜವಾಗುತ್ತ ಹೋಗುತ್ತದೆ. ಗಿಡ, ಮರ, ಬಳ್ಳಿ, ಹಕ್ಕಿ, ಋತುಗಳು, ಮಳೆ, ಗಾಳಿ, ಬಿಸಿಲು ಎಲ್ಲವೂ ಅಪರಿಚಿತವಾಗುತ್ತ ಹೋಗುತ್ತದೆ, ಮಾತ್ರವಲ್ಲ ಕಿರಿಕಿರಿಯ ಸಂಗತಿಗಳಾಗುತ್ತ ಹೋಗುತ್ತದೆ." ಎಂಬುದಾಗಿ ರಂಗಕರ್ಮಿ ಮತ್ತು ಸಾಮಾಜಿಕ ಕಾರ್ಯಕರ್ತರಾದ ಪ್ರಸನ್ನರವರು ಹೇಳುತ್ತಾರೆ. ಅವರು ಮುಂದುವರಿದು ಹೇಳುವುದೇನೆಂದರೆ "ಅಸಹಜ ಬದುಕಿಗೆ ಅಪಾರವಾದ ಆಕರ್ಷಣೆಯಿದೆ, ಪತಂಗಕ್ಕೆ ದೀಪದ ಆಕರ್ಷಣೆಯಿರುವಂತೆ ಅದು. ಮೀನಿಗೆ ಹಾರುವ ಆಕರ್ಷಣೆಯಾದರೆ ಏನಾದೀತು, ಯೋಚಿಸಿ? ಇಲಿಗೆ ಆನೆಯಾಗುವ ಆಸೆಯಾದರೆ ಏನಾದೀತು, ಯೋಚಿಸಿ? ಅಸಹಜ ಬದುಕಿನ ಆಕರ್ಷಣೆಯೆಂಬುದು ಸಾವಿಗೆ ಆಹ್ವಾನ! ಅದು ಸೃಷ್ಟಿಸಿರುವ ವಿವಿಧ ಪ್ರಕಾರದ ರೋಗಗಳನ್ನು ವಿಜ್ಞಾನದ ಮೂಲಕ ಪರಿಹರಿಸಿಕೊಳ್ಳುತ್ತೇವೆ ಎಂದು ಯಾರಾದರೂ ನಂಬಿದ್ದರೆ ಅದು

ಮೂರ್ಖತನವೇ ಸರಿ. ಮಾನವರು ದೈಹಿಕ ಶ್ರಮದ ದುಡಿಮೆಯ ಸುತ್ತಲೇ ನಮ್ಮ ಧಾರ್ಮಿಕತೆ, ನೈತಿಕತೆ, ಸಾಮಾಜಿಕತೆ ಎಲ್ಲವನ್ನೂ ರೂಪಿಸಿಕೊಳ್ಳಬೇಕು. ಆಗ ಮಾತ್ರ ಮನುಕುಲ ಉಳಿದೀತು."

ಇಂದು ಶಿಕ್ಷಣದ ಜೊತೆಯಲ್ಲಿ ಶರೀರಶ್ರಮಾಧಾರಿತ ಉದ್ಯೋಗ ಮಾಯವಾಗಿರುವುದಕ್ಕೆ ಅಥವಾ ಅವರೆಡನ್ನು ಜೋಡಿಸಲು ಸಾಧ್ಯವಾಗದೇ ಇರುವುದಕ್ಕೆ ಮೂಲ ಕಾರಣ ಇಂಗ್ಲಿಷ್ ಭಾಷೆಗೆ ಶಿಕ್ಷಣ ಕ್ಷೇತ್ರದಲ್ಲಿ ದೊರೆತಿರುವ ಪ್ರಾಧಾನ್ಯತೆ. ತಮ್ಮ ತಮ್ಮ ಮಾತೃಭಾಷೆಯೆನ್ನಿ, ನೆಲದ ಭಾಷೆಯೆನ್ನಿ ಅಥವಾ ಪರಿಸರದ ಭಾಷೆಯೆನ್ನಿ ಅದನ್ನು ಇಟ್ಟುಕೊಂಡಿರುವವರೆಗೆ ತಕ್ಕಮಟ್ಟಿಗಾದರೂ ಶಿಕ್ಷಣದ ಜೊತೆ ಉದ್ಯೋಗವಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿಯ ಜನಸಂಖ್ಯೆಯಲ್ಲಿ ಇನ್ನೂ ತೊಂಭತ್ತರಷ್ಟು ಜನರು ತಮ್ಮ ಮಾತೃಭಾಷೆಯಲ್ಲಿಯೇ ವ್ಯವಹರಿಸುತ್ತಾರೆ. ಮತ್ತು ಅವರು ಕೃಷಿ, ನೇಕಾರಿಕೆ ಮತ್ತು ಇನ್ನಿತರ ಶರೀರಶ್ರಮ ಆಧಾರಿತ ಉದ್ಯೋಗದಲ್ಲಿ ತೊಡಗಿರುತ್ತಾರೆ. ಆದರೆ ಮುಂದೆ ಅವರೇ ಇಂಗ್ಲಿಷ್ ಕಲಿತ ತಕ್ಷಣ ಶರೀರಶ್ರಮದ ಬಗ್ಗೆ ತಾತ್ಸಾರಭಾವನೆ ತಾಳುತ್ತಾರೆ. ಬಿಳಿದಿರಿಸಿನ ಉದ್ಯೋಗ ಬಯಸುತ್ತಾರೆ. ಅವಕಾಶ ಸಿಕ್ಕಾಗಲೆಲ್ಲ ಶ್ರಮಜೀವಿಗಳ ಮೇಲೆ ಸವಾರಿ ಮಾಡುತ್ತಾರೆ. ಇಂಗ್ಲಿಷ್ ಭಾಷೆಯ ಮೂಲಕ ಪಡೆದ ಶಿಕ್ಷಣ ಕಾಮಧೇನು ಇದ್ದಂತೆ ಎಂದು ಜನ ಭಾವಿಸಿದ್ದಾರೆ. ಕೇಳಿದಾಕ್ಷಣ ಕೊಡುವ ಶಕ್ತಿ ಕಾಮಧೇನುವಿಗಿದೆ. ಶರೀರಶ್ರಮ ಮಾಡಬೇಕಾಗಿಲ್ಲ. ಅದರಂತೆಯೆ ಇಂಗ್ಲಿಷ್ ಭಾಷೆಯ ಶಿಕ್ಷಣವೆಂದು ನಮ್ಮ ತಂದೆ-ತಾಯಂದಿರು, ವಿದ್ಯಾರ್ಥಿಗಳು, ಬಡವರೆಂದು ಮತ್ತು ಹಿಂದುಳಿದವರೆಂದು ಭಾವಿಸಿಕೊಳ್ಳುವ ಜನರು ತಿಳಿದಿದ್ದಾರೆ. ಆದ್ದರಿಂದ ಇಂದು ಎಲ್ಲೆಂದರಲ್ಲಿ ಇಂಗ್ಲಿಷ್ ಕಲಿಸುವ ಶಾಲೆಗಳು ಹುಟ್ಟುತ್ತಿವೆ, ಪ್ರಾದೇಶಿಕ ಭಾಷಾ ಶಾಲೆಗಳು ಮುಚ್ಚುತ್ತಿವೆ. ಇದು ಇಪ್ಪತ್ತೊಂದನೆ ಶತಮಾನದಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ದುರಂತ. ಇದನ್ನು ಮನಗಂಡೇ ಗಾಂಧೀಜಿಯವರು ಎರಡು ಶತಮಾನಗಳ ಹಿಂದೆಯೇ ೧೯೦೯ರಲ್ಲಿ ತಮ್ಮ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಇಂಗ್ಲಿಷ್ ಭಾಷೆ ಭಾರತೀಯರನ್ನು ದಾಸ್ಯ ಮನೋಭಾವಕ್ಕೆ ಕಟ್ಟಿಹಾಕುತ್ತದೆಂದು ಹೇಳಿದ್ದರು. ದೇಶ ರಾಜಕೀಯವಾಗಿ ಸ್ವತಂತ್ರವಾಗಿದ್ದರೂ ಮನೋವೃತ್ತಿಯಿಂದ ಅನೇಕ ಬಗೆಯಲ್ಲಿ ಪರರಾಷ್ಟ್ರಗಳ ದಾಸವಾಗಿದೆ. ತನ್ನತನವನ್ನು ಕಳೆದುಕೊಂಡಿದೆ.

ಈಗ ದೇಶದಲ್ಲೆಲ್ಲ ಹುಟ್ಟುಕೊಳ್ಳುತ್ತಿರುವ International Schools, Public School ಎಂಬ ಹಣೆಪಟ್ಟಿಯೊಂದಿಗೆ ಪ್ರಾರಂಭವಾಗಿರುವ ಶಾಲೆಗಳು ಹಾಗೂ ಏಕಶಿಸ್ತಿನ ವಿದೇಶಿ ಮೂಲದ ವಿಶ್ವವಿದ್ಯಾಲಯಗಳು ಇಂಗ್ಲಿಷ್ ಭಾಷೆಯ ಮೂಲಕ ಭಾರತೀಯರನ್ನು ಬೇರೆ ರಾಷ್ಟ್ರಗಳ ಗುಲಾಮರನ್ನಾಗಿ ಮಾಡುತ್ತಿವೆ. ಈ ಯಾವ ಶಿಕ್ಷಣ ಸಂಸ್ಥೆಯಲ್ಲೂ ಶಿಕ್ಷಣದೊಂದಿಗೆ ಪರಿಶ್ರಮಾಧಾರಿತ ಉದ್ಯೋಗವಿಲ್ಲ. ಇಂಗ್ಲಿಷ್ ಭಾಷೆ ಕಾಮಧೇನು ಎಂದು ಬಿಂಬಿಸುತ್ತ ಭಾರತೀಯ ಜನಸಮುದಾಯವನ್ನು ಶರೀರಶ್ರಮದಿಂದ ವಿಮುಖಮಾಡಿಬಿಟ್ಟಿದೆ.

ವಿನೋಬಾರ ಮಾತಿನಲ್ಲಿ ಹೇಳುವುದಾದರೆ, "ಕೆಲವರ ಬಳಿ ಕೇವಲ ಜ್ಞಾನ, ಮತ್ತೆ ಕೆಲವರ ಬಳಿ ಕೇವಲ ಕರ್ಮ ಇರುವಂತಾದರೆ ರಾಹು-ಕೇತುಗಳ ಸಮಾಜವಾದೀತು. ರಾಹುವೆಂದರೆ ಕೇವಲ ತಲೆಯೇ ತಲೆ, ಅದಕ್ಕೆ ಮುಂಡ

ಇಲ್ಲ. ಕೇತು ಎಂದರೆ ಕೇವಲ ಮುಂಡ, ಕೆಳಗಿನ ಭಾಗ ಮಾತ್ರ, ರುಂಡವಿಲ್ಲ. ಹೀಗಾದರೆ ಏನಾದೀತು?" ಸಮಾಜದ ಭವಿಷ್ಯ ಊಹಿಸಲಾರದಷ್ಟು ಕರಾಳವಾದೀತು. ಅಂಥ ಕರಾಳ ಭವಿಷ್ಯವನ್ನು ತಪ್ಪಿಸುವುದಕ್ಕಾಗಿಯೇ ಉದ್ಯೋಗ ಮತ್ತು ಶಿಕ್ಷಣ ಜೊತೆಜೊತೆಯಲಿ ಸಾಗಬೇಕಾದುದು ತುರ್ತು ಅಗತ್ಯವಾಗಿದೆ.

* * *

ಸನ್ಮಾನ್ಯರಿಂದ...

ಜನಪದ ವಿಚಾರ ಒಳ್ಳೊಳ್ಳೆಯ ವೈಚಾರಿಕ ಲೇಖನಗಳನ್ನು ಹೊತ್ತು ತರುತ್ತಿದೆ. 'ಮೀರಾಬೆಹನ್ ದೃಷ್ಟಿಯಲ್ಲಿ ಹಿಮಾಲಯ' ಬಹಳ ಮೆಚ್ಚುಗೆಯಾಯಿತು. ಮೀರಾಬೆಹನ್ ಒಬ್ಬ ಮಹಿಳೆಯಾಗಿ ಮಹಾತ್ಮಾಗಾಂಧೀಯವರ ತತ್ವಗಳಿಂದ ಪ್ರಭಾವಿತಳಾಗಿ ಭಾರತಕ್ಕೆ ಬಂದು ನಮ್ಮ ನೆಲದ ಸೇವೆ ಮಾಡಿದ್ದು ಅತ್ಯಂತ ರೋಮಾಂಚಕ ವಿಷಯ. ಪರಿಸರ ವಿಷಯದಲ್ಲಿ ಅವರಿಗಿದ್ದ ಕಾಳಜಿ ಅದರಲ್ಲೂ ಹಿಮಾಲಯದ ಬಗೆಗಿದ್ದ ಅವರ ಪ್ರೀತಿ, ಪರ್ವತಗಳು ಬೋಳಾಗುವುದರಿಂದ ಅಲ್ಲಿಯ ಹಳ್ಳಿಗಳ ಮೇಲಾಗುವ ಪರಿಣಾಮಗಳು, ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುವುದರಿಂದಾಗುವ ಲಾಭಗಳು, ಕಾಡಿನ ರಕ್ಷಣೆ, ಗೋವುಗಳ ಕ್ಷೇಮಚಿಂತನೆ, ತಮ್ಮ ದೇಶಕ್ಕೆ ಹಿಂತಿರುಗಿದ ನಂತರವೂ ಪರಿಸರದ ಬಗ್ಗೆ ಮತ್ತು ಗಾಂಧೀ ವಿಚಾರಗಳ ಬಗ್ಗೆ ಬರವಣಿಗೆಯನ್ನು ಮುಂದುವರಿಸಿದ್ದು ಇವೆಲ್ಲವನ್ನೂ ಓದಿದಾಗ ಮೀರಾಬೆಹನ್‌ರ ಭಾರತದ ಮೇಲಿನ ಭಾವನಾತ್ಮಕ ಸಂಬಂಧದ ಬಗ್ಗೆ ಮೈ ಪುಳಕಿತವಾಗುತ್ತದೆ. – ***ಜೆ.ವೈದೇಹಿ, ಮೈಸೂರು***

"ಭಾಗವತ ದೃಷ್ಟಿ"ಯಲ್ಲಿ ಕೃಷ್ಣ ಸತ್ತ ದಿನವೇ ಕಲಿಯುಗ ಹುಟ್ಟಿತು ಎಂಬುದನ್ನು ಹೀಗೆ ಅರ್ಥೈಸಬೇಕು, 'ಕೃಷ್ಣ' ಎಂದರೆ ವ್ಯಕ್ತಿಯಲ್ಲ! ಮಹಾನ್ ವಿವೇಚನಾ ಶಕ್ತಿ. ಆ ಶಕ್ತಿ (ಆತ್ಮಬಲ) ಉಡುಗಿದ ಮರುಕ್ಷಣಕ್ಕೆ ಕಲಿಯುಗ (ವಿವೇಕ ಶೂನ್ಯ ಬುದ್ಧಿ) ಉದ್ಭವಿಸಿ, ಸರ್ವನಾಶದತ್ತ ಸೆಳೆದು ಬಿಡುತ್ತದೆ. ಈ ಸಂಚಿಕೆಯಿಂದ ಶ್ರೀಮತಿ ಮೀರಾಬೆಹನ್‌ರ ವಿಚಾರ ಹೆಚ್ಚಾಗಿ ತಿಳಿಯಿತು. ಧನ್ಯವಾದಗಳು. ನಾನು ಆಕೆಯನ್ನು ಮಹಾತ್ಮಾ ಗಾಂಧೀಜಿಯವರು 'ಹರಿಜನೋದ್ಧಾರ' ಕಾರ್ಯಪ್ರಚಾರಕ್ಕಾಗಿ ಮೈಸೂರಿಗೆ ಬಂದಾಗ ಕಂಡಿದ್ದೆ. ಶುಭ್ರ ಖಾದಿಯನ್ನುಟ್ಟು ಹೆಗಲಿಗೊಂದು ಜೋಳಿಗೆ ನೇತುಬಿಟ್ಟು ಮಹಿಳೆಯರು ಉದಾರವಾಗಿ ಕೊಡುತ್ತಿದ್ದ ಚಿನ್ನ-ಬೆಳ್ಳಿ ಇತ್ಯಾದಿ ಕಾಣಿಕೆಗಳನ್ನು ಜೋಳಿಗೆಯಲ್ಲಿ ಹಾಕುತ್ತಾ ಪಾದರಸದಂತೆ ನೆರೆದ ಜನರ ಮಧ್ಯೆ ಓಡಾಡುತ್ತಿದ್ದರು. ವಿದೇಶಿಯಾದರೂ ಮಹಾ ತ್ಯಾಗ ಶೀಲೆ. ಅಂತೆಯೇ ಮಾರ್ಗದರ್ಶಿ ಕೂಡ. – ***ಶಾರದಾ ಜಡೆ, ಸಾಂಗಲಿ***

ಆಧುನಿಕ ಶಿಕ್ಷಣ ಬೇರನ್ನು ಬಿಟ್ಟು ಕೊಂಬೆ ಹಿಡಿಯುತ್ತಿದೆ!

– ವಿನೋಬಾ

(ಸೆಪ್ಟಂಬರ್ ೧೧ ಆಚಾರ್ಯ ವಿನೋಬಾ ಭಾವೆಯವರ ೧೧೯ನೇ ವರ್ಷದ ಜನ್ಮ ದಿನಾಚರಣೆ, ಇವರೊಬ್ಬ ಶಿಕ್ಷಣ ತಜ್ಞರು. ಈ ನಿಮಿತ್ತ ಅವರ ಶೈಕ್ಷಣಿಕ ವಿಚಾರಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ. - ಸಂ)

ಜನತಾ ಶಿಕ್ಷಣದ ಬಗ್ಗೆ ವಿಚಾರಮಾಡುವಾಗ ಬೇರನ್ನು ಬಿಟ್ಟು ಕೊಂಬೆಗಳನ್ನು ನಾವು ಹಿಡಿಯಬಾರದು. ಪ್ರೌಢಶಿಕ್ಷಣದ ವೆಚ್ಚ ಎಷ್ಟು ಆದೀತು, ಅದರಲ್ಲಿ ಏನೇನು ಕಷ್ಟ ಇದೆ ಮುಂತಾದ ವಿಷಯ ಒಂದು ಸರಕಾರಿ ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ಅದನ್ನು ಓದಿದ ಮೇಲೆ ನನ್ನ ವಿಚಾರ ಮತ್ತಷ್ಟು ದೃಢವಾಯಿತು. ಪ್ರೌಢಶಿಕ್ಷಣ ಎಂಬ ಹೆಸರು ಸೊಗಸಾಗಿದೆ. ನಮಗೆ ಅಂದವಾದ ಹೆಸರು ಇಲ್ಲದೆ ಸಮಾಧಾನವಾಗದು. ಆದರೆ ಆ ಹೆಸರಿನಲ್ಲಿ ನಾವು ಮಾಡುತ್ತಿರುವ ಕೆಲಸ ಬರೀ ಅಕ್ಷರಪ್ರಚಾರ.

ಅಕ್ಷರ ಪ್ರಚಾರದ ಬಗ್ಗೆ ಯೋಚಿಸಿದಾಗ ನನಗೆ ಚಿಕ್ಕಂದಿನ ಸಂಗತಿಯೊಂದರ ನೆನಪಾಗುತ್ತದೆ. ಬ್ರಾಹ್ಮಣ ಕುಟುಂಬದ ರೀತಿಯಂತೆ ನನಗೆ ಎಳೆತನದಲ್ಲಿ ಸಂಧ್ಯಾವಂದನೆಯನ್ನು ಕಲಿಸಿದರು. ಒಂದು ವಾರದಲ್ಲಿ ಅದೆಲ್ಲವೂ ನನಗೆ ಬಾಯಿಪಾಠವಾಯಿತು. ಈ ಮಾತನ್ನು ಎಲ್ಲರಿಗೂ ಹೇಳಿ ಹೇಳಿ ನಮ್ಮ ತಾಯಿ ನನ್ನನ್ನು ಹೊಗಳುತ್ತಿದ್ದರು. ಒಂದು ದಿನ, ನಾನು "ನನ್ನ ಕಂಠಪಾಠ ಶಕ್ತಿಯನ್ನು ನೀನು ಎಲ್ಲರಿದಿರಿಗೂ ಹೇಳಿ ಹೊಗಳುತ್ತಿದ್ದೀಯೆ, ಒಂದು ವಾರದಲ್ಲಿ ಸಂಧ್ಯಾವಂದನೆ ಕಲಿತೆ; ಆದರೆ ಒಂದೇ ದಿನದಲ್ಲಿ ಮರೆತೂ ಬಿಟ್ಟೆ" ಎಂದೆ. ವರ್ಡ್ಸ್‌ವರ್ತ್ ಹೇಳಿದಂತೆ "ಗಳಿಸುತ್ತಾ ಕಳೆಯುತ್ತಾ ನಾವು ಮಾಡುವುದು ನಮ್ಮ ಶಕ್ತಿ ಕ್ಷಯ."

ಹಾಗೆ ಈ ಸಾಕ್ಷರ ಪ್ರಚಾರ, ಶಕ್ತಿಕ್ಷಯದ ಕೆಲಸ ಆಗಬಾರದು ಎಂದು ಗಮನಿಸಿದರೆ ನಾವು ಏಕಾಗ್ರತೆಯಿಂದ ಸಾರ್ಥಕ ಪ್ರಸಾರ ನಡೆಸಬೇಕು. ಅದನ್ನು ಕಡಿಮೆ ವೆಚ್ಚದಿಂದ ಸಾಧಿಸಬೇಕಾದರೆ ನಮ್ಮ ಶ್ರವಣ ಸಾಧನವನ್ನು ಬಳಸಬೇಕು.

ನಮ್ಮ ಹಿರಿಯರು ಇದನ್ನು ಅರಿತಿದ್ದರು. ಸರ್ವೋತ್ತಮ ವಿಚಾರವನ್ನು ಸದಾ ಕೇಳುತ್ತಿರಬೇಕು. ಕಂಠಪಾಠ ಮಾಡಬೇಕು. ನವವಿಧ ಭಕ್ತಿಯ ಮೊಟ್ಟಮೊದಲಿನ ಮೂರು ಹಂತ, "ಶ್ರವಣಂ, ಕೀರ್ತನಂ, ಸ್ಮರಣಂ". ಇದಕ್ಕೆ ಸೀಮೆಯೆಣ್ಣೆಯೂ ಬೇಡ, ಸೀಮೆಸುಣ್ಣವೂ ಬೇಡ. ಸರಕಾರದ ವರದಿಯಲ್ಲಿ ಎಣ್ಣೆಯ ಅಭಾವವನ್ನು

ಚರ್ಚಿಸಿದ್ದಾರೆ. ನಮ್ಮದು ಬಡದೇಶ ನಿಜ, ಆದರೆ ಕಲ್ಪನೆಗೂ ದಾರಿದ್ರ್ಯವೇ?

ಶೃತಿ, ಸ್ಮೃತಿ, ಕೃತಿ–ಇದು ನಮ್ಮ ಸಂಕ್ಷಿಪ್ತ ಶಿಕ್ಷಣ ಶಾಸ್ತ್ರ. ಸಾವಿರಾರು ವರ್ಷಗಳ ಅನುಭವದಿಂದ ಸ್ಥಿರವಾದ ಸೂತ್ರ. ದೇಶದ ಜನ ಪ್ರತಿಯೊಬ್ಬರೂ ಜ್ಞಾನಿಯಾಗಬೇಕು ಎಂಬ ವಿಚಾರ ಈ ದೇಶಕ್ಕೆ ಹೊಸದೇನಲ್ಲ. ಉಪನಿಷತ್ತಿನಲ್ಲಿ ಅಶ್ವಪತಿರಾಜ ತನ್ನ ರಾಜ್ಯದ ಗೌರವವನ್ನು ತನ್ನ ಬಾಯಿಂದಲೇ ಹೇಳುತ್ತಾನೆ. 'ನನ್ನ ರಾಜ್ಯದಲ್ಲಿ ಕಳ್ಳರಿಲ್ಲ, ಕೃಪಣರಿಲ್ಲ, ಕುಡುಕರಿಲ್ಲ, ಅಜ್ಞಾನಿಗಳಿಲ್ಲ, ಅಕರ್ಮಣ್ಯರಿಲ್ಲ, ಕೆಟ್ಟ ನುಡಿ ಆಡುವ ಗಂಡಸಿಲ್ಲ, ಅಂತಹ ಹೆಂಗಸಂತೂ ಇಲ್ಲವೇ ಇಲ್ಲ.'

ಕಳ್ಳರು, ಕೃಪಣರು, ಈಗ ಹೆಚ್ಚಾಗಿದ್ದಾರೆ. ಅವರ ಬಗ್ಗೆ ಈಗ ಚರ್ಚೆ ಬೇಕಿಲ್ಲ. ಕುಡಿತದ ಬಗ್ಗೆ ಇಂಗ್ಲೀಷರು ಹೇಳಿದರು--ಶಿಕ್ಷಣ ಬೇಕಾದರೆ ಕುಡಿತ ನಿಲ್ಲಿಸಬಾರದು. ಹಾಗೆ ನಾವು ಹೇಳದಿರಬಹುದು. ನೇರವಾಗಿ ಹೇಳದಿದ್ದರೂ ಬಳಸಿಕೊಂಡು ಅದನ್ನೇ ಹೇಳುತ್ತಿದ್ದವೇ. ಪಾನ ನಿರೋಧ ಮಾಡೋಣ. ಆದರೆ ಸ್ವಲ್ಪ ಸ್ವಲ್ಪವಾಗಿ ಮಾಡೋಣ, ಒಂದೇ ಸಲ ಮಾಡಿದರೆ ಕಂದಾಯಕ್ಕೆ ಲೋಪ ಬರುತ್ತದೆ. ದುಡ್ಡಿಗೆ ಸೊನ್ನೆ ಬಿದ್ದರೆ ಎಲ್ಲಕ್ಕೂ ಸೊನ್ನೆಯೆ. ಅಕ್ಷರ ಪ್ರಚಾರಕ್ಕೂ ಸೊನ್ನೆ ಬೀಳುತ್ತದೆ ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿದೆಯೇ?

ವಯಸ್ಕರ ಶಿಕ್ಷಣದ ಹೆಸರಿನಲ್ಲಿ ಅಕ್ಷರ ಪ್ರಚಾರ ಮಾಡೋಣ. ಪಾನ ನಿರೋಧದ ಮಾತು ಆಡದಿರೋಣ ಎನ್ನುತ್ತಾರೆ. ಇದಕ್ಕಿಂತ ನಮ್ಮ ದೇಶ ಅಕ್ಷರ ಕಲಿಯದೆ ಇದ್ದರೂ ಚಿಂತೆಯಿಲ್ಲ, ವ್ಯಸನ ಮುಕ್ತಿಯನ್ನು ಕಲಿಯಲಿ ಎಂದೇನು.

ನನ್ನ ರಾಜ್ಯದಲ್ಲಿ ಯಾರೂ ಅಜ್ಞಾನಿಗಳಿಲ್ಲ ಎಂದು ಅಶ್ವಪತಿ ರಾಜ ಹೇಳಿದಾಗ ಏನು ಅದರರ್ಥ? ಕಳ್ಳತನ, ಕಾರ್ಪಣ್ಯ, ಕುಡುಕತನ, ಮೈಗಳ್ಳತನ, ದುರಾಚಾರ ಸಲ್ಲದ್ದು ಎಂದು ಪ್ರತಿಯೊಬ್ಬ ನಾಗರೀಕನೂ ಚೆನ್ನಾಗಿ ಅರಿತಿದ್ದಾನೆ ಎಂದಲ್ಲವೆ? ಇದಕ್ಕೂ ಓದು ಬರೆಹಕ್ಕೂ ಏನು ಸಂಬಂಧ? ಓದು ಕಲಿತ ಜನ ಈಗ ಈ ಕೆಟ್ಟ ಚಟಗಳಲ್ಲಿ ಪ್ರವೀಣರಾಗಿ ಕಾಣುತ್ತಾರೆ. ಇಂಥ ವರ್ಗಕ್ಕೆ ಎಲ್ಲರನ್ನೂ ಸೇರಿಸಿಬಿಡೋಣವೇ?

ಓದಿನಿಂದ ಈ ದುರ್ನಡತೆ ಬರುತ್ತದೆ ಎಂದಲ್ಲ ಅರ್ಥ. ಈ ಓದು ಬರೆಹದ ವಿಷಯದಲ್ಲಿ ಇಷ್ಟು ಅತ್ಯಧಿಕ ಆಸಕ್ತಿ ನಮಗೆ ಬೇಡಿ ಎಂದು ಹೇಳಬೇಕಾಗಿದೆ. ಜನತಾ ಶಿಕ್ಷಣದ ಮುಖ್ಯ ಉದ್ದೇಶ್ಯ, ಕಾರ್ಯಕ್ರಮಗಳ ಬಗ್ಗೆ ಸರಿಯಾದ ರೀತಿಯಲ್ಲಿ ಯೋಚಿಸೋಣ. ಅಕ್ಷರ ಸಂಸ್ಕಾರ ಯಾವ ರೀತಿ ಆಗಬೇಕು ಎಂದು ಬಯಸುತ್ತೇವೊ ಅದರಂತೆ ಮಕ್ಕಳಿಗೆ ಕಲಿಸೋಣ. ಮುಖ್ಯವಾಗಿ, ಮಕ್ಕಳ ಮೂಲ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡೋಣ.

* * *

ಬದಲಾವಣೆ ತರುವುದೇ ತಾರುಣ್ಯದ ಸಂಕೇತ

– ದಾದಾ ಧರ್ಮಾಧಿಕಾರಿ

ಕ್ರಾಂತಿವಾದಿ ಯುವಕರೇ, ನಮ್ಮ ಉಪದೇಶ ಮಾನ್ಯ ಮಾಡಬೇಡಿ, ನಮ್ಮ ಅಭಿಪ್ರಾಯವನ್ನು ಸ್ವೀಕರಿಸಬೇಡಿ. ನೀವು ನಮ್ಮ ಪ್ರಕಾರದ ಜೀವನ ನಡೆಸಬೇಕಾಗಿಲ್ಲ. ಗತಕಾಲದ ತಲೆಮಾರಿನ 'ಕಾರ್ಬನ್ ಕಾಪಿ' ನೀವಾಗಬೇಡಿ ಎಂಬುದೇ ನಿಮಗೆ ಹೇಳುವ ಮೊದಲ ಮಾತು. ನನ್ನ ತಲೆಮಾರಿನ ಮತ್ತು ನಿಮ್ಮ ತಂದೆಯ ತಲೆಮಾರಿನವರಂತೆ ಆಗುವುದಕ್ಕಾಗಿ ನಿಮ್ಮ ಜನ್ಮವಾಗಿಲ್ಲ. ನಿಮ್ಮ ಜೀವನ ಸ್ವತಂತ್ರವಾಗಿದೆ. ಒಂದು ಹೊಸ ಜಗತ್ತನ್ನು ಸೃಷ್ಟಿಸುವ ಉತ್ಸಾಹ ನಿಮ್ಮಲ್ಲಿರಬೇಕಾಗಿದೆ. ನಿಮ್ಮೀ ಉತ್ಸಾಹ ನಿಮ್ಮದೇ ಪರಿಶ್ರಮದಿಂದ ಸಿದ್ಧವಾಗಲೆಂಬ ಆಶೀರ್ವಾದ, ಶುಭಕಾಮನೆ ನನ್ನ ತಲೆಮಾರಿನ ಜನರದು. ನಿಮ್ಮ ಚರಣಗಳಲ್ಲಿ ಅದು ಅರ್ಪಿತವಾಗಲಿ.

ಮೊದಲು ಏನು ಆಗಿಲ್ಲವೊ ಅದು ಈಗ ಆಗಲಾರದೆಂದು ಯಾರು ಹೇಳುತ್ತಾರೋ ಅವನು ವೃದ್ಧ. ಇಂದಿನವರೆಗೆ ಏನು ಆಗಿಲ್ಲವೋ ಅದು ನಾಳೆ ಆಗಿಯೇ ತೀರುವುದು ಎಂಬುದಾಗಿ ಯಾರು ಹೇಳುತ್ತಾರೋ ಅವನು ಯುವಕ. ಜಗತ್ತಿನಲ್ಲಿ ಎಂದೂ ಬಡತನ–ಶ್ರೀಮಂತಿಕೆ ಅಳಿಸಿಹೋಗಿಲ್ಲ, ರಾಮರಾಜ್ಯದಲ್ಲೂ ಶ್ರೀಮಂತಿಕೆ–ಬಡತನ ಇದ್ದವು, ಸತ್ಯಯುಗದಲ್ಲೂ ಇದ್ದವು, ಮಹಾಭಾರತ ಮತ್ತು ರಾಮಾಯಣ ಕಾಲದಲ್ಲೂ ಇದ್ದವು, ಶಿವಾಜಿಯ ಕಾಲದಲ್ಲೂ ಇದ್ದವು, ಆದ್ದರಿಂದ ಶ್ರೀಮಂತಿಕೆ–ಬಡತನ ಎಂದೂ ಅಳಿಸಿ ಹೋಗಲಾರವು ಎಂದು ಯಾರು ಹೇಳುತ್ತಾರೋ ಅವರು ವೃದ್ಧ. ಮಾರ್ಕ್ಸ್ ಏನು ಹೇಳಿದ? ಈ ದಿನದವರೆಗೆ ಶ್ರೀಮಂತಿಕೆ–ಬಡತನ ಅಳಿಸಿಹೋಗಿಲ್ಲ, ಆದ್ದರಿಂದ ನಾಳೆ ಅದು ಅಳಿಸಿ ಹೋಗುವುದು, ಪೂರ್ಣವಾಗಿ ಮುಕ್ತಾಯವಾಗುವುದು. ಆಗಲೇ ಅವನು ಕ್ರಾಂತಿಕಾರಿ ಎಂದು ಸಿದ್ಧನಾದ 'ಕತ್ತಿ' ಇಲ್ಲದೆ ಇಂದಿನವರೆಗೆ ಕ್ರಾಂತಿಯಾಗಿಲ್ಲವಾದ್ದರಿಂದ ಭವಿಷ್ಯದಲ್ಲೂ ಆಗಲೂ ಸಾಧ್ಯವಿಲ್ಲ ಎಂದು ಹೇಳುವವನು ವೃದ್ಧ.

ಸ್ವರಾಜ್ಯದ ಮೊದಲಿನ ಮಾತು. ನಾನೊಂದು ಕಾಲೇಜಿಗೆ ಹೋಗಿದ್ದೆ. ಅಲ್ಲಿ ಒಬ್ಬ ಹುಡುಗ ನನಗೆ ಪ್ರಶ್ನೆ ಕೇಳಿದ, "ಈ ದಿನದವರೆಗೆ ಯಾರಿಗೇ ಆಗಲಿ ಕತ್ತಿಯಿಲ್ಲದೆ ರಾಜ್ಯ ದೊರೆತಿದೆಯೇ?"

ನಾನೆಂದೆ "ಇಲ್ಲ".

"ಹಾಗಾದರೆ ನೀವೇಕೆ ಭಾಷಣ ಮಾಡುತ್ತೀರಿ?"

"ಕತ್ತಿಯಿಲ್ಲದೆ ರಾಜ್ಯ ಸಿಗುತ್ತದೆಂದು ನನಗೆನಿಸುವುದರಿಂದ ಭಾಷಣ ಮಾಡುತ್ತೇನೆ."

"ಹೀಗೆ ಅನಿಸುವುದಕ್ಕೆ ಕಾರಣವೇನು?"

"ಕಾರಣವೇನೆಂದರೆ, ನೀನು ಈಗ ಹುಟ್ಟಿದ್ದೀಯೆ. ಇಪ್ಪತ್ತು ವರ್ಷಗಳ ಮೊದಲು

ನೀನಿರಲಿಲ್ಲ. ಗೌತಮಬುದ್ಧನಾಗಿಹೋದ, ರಾಮನಾಗಿಹೋದ, ಕೃಷ್ಣನಾಗಿಹೋದ, ಪ್ರತಾಪನಾಗಿಹೋದ, ಶಿವಾಜಿಯಾದ ಆದರೆ ನೀ ಇರಲಿಲ್ಲ. ನಿನ್ನ ಜನ್ಮವೇ ಇತಿಹಾಸದ ಅಭೂತಪೂರ್ವ ಘಟನೆ. ಆದ್ದರಿಂದ ಬುದ್ಧ, ಏಸು, ಶಿವಾಜಿ, ಮಹಾವೀರ, ಸೀಸರ್, ಗಾಂಧೀ, ತಿಲಕ್, ಮುಂತಾದವರ ಕಾಲದಲ್ಲಿ ಏನಾಗಲಿಲ್ಲವೋ ಅದು ನಿನ್ನ ಕಾಲದಲ್ಲಿ ಆಗುವುದಿದೆ. ಇತಿಹಾಸದಲ್ಲಿ ನಿನ್ನೆ ಏನು ಆಗಲಿಲ್ಲವೊ ಅದು ಇಂದು ಆಗುವುದಿದೆ. ಆದ್ದರಿಂದ ಇತಿಹಾಸವನ್ನು ಬರೆಯಲಾಗುತ್ತದೆ."

ಇತಿಹಾಸವೇನು? ಶಿವಾಜಿ ಹುಟ್ಟಿದ, ವಿವಾಹವಾದ, ಸತ್ತ. ಸಂಭಾಜಿಯದು ಕೂಡ ಇದೇ ಇತಿಹಾಸವೇ? ಹೀಗೆ ಇತಿಹಾಸವಿರಲು ಸಾಧ್ಯವೇ? ಪತ್ರಿಕೆಗಳು ಈ ಪ್ರಕಾರ ಬರಲಾರಂಭಿಸಿದರೆ ನೀನು ದುಡ್ಡು ಕೊಟ್ಟು ಖರೀದಿಸುವೆಯಾ? ನಿನ್ನೆ ಏನಾಗಲಿಲ್ಲವೋ ಅದು ಇಂದಾಗುತ್ತದೆ. ಅದ್ದರಿಂದ ಇತಿಹಾಸವನ್ನು ಬರೆಯಲಾಗುತ್ತದೆ. ಇತಿಹಾಸವನ್ನು ರಚಿಸದಿರುವುದು ತಾರುಣ್ಯದ ವಿರೋಧ, ಇದು ತಾರುಣ್ಯದ ಅಗೌರವ.

ಈ ತಾರುಣ್ಯದ ಗೌರವದ ಬಗ್ಗೆ ಒಂದು ಕಥೆಯ ರೂಪದಲ್ಲಿ ಹೇಳಲಿಚ್ಛಿಸುತ್ತೇನೆ. ನನ್ನಂಥ ಒಬ್ಬ ಮುದುಕ ತನ್ನ ಮೊಮ್ಮಗಗನ್ನು ಕರೆದುಕೊಂಡು ತೋಟದಲ್ಲಿ ತಿರುಗಾಡಲು ಹೊರಟ. ಈಗ ವೃದ್ಧರ ಒಂದು ಲಕ್ಷಣ ನಿಮಗೆ ಹೇಳುತ್ತೇನೆ. ವೃದ್ಧರು ಯಾವಾಗಲೂ ದೂರುತ್ತಲೇ ಇರುತ್ತಾರೆ. ಶರೀರದಲ್ಲಿ ಶಕ್ತಿ ಇರುವುದಿಲ್ಲ. ವಾಸನೆಗಳು ಕ್ಷೀಣವಾಗಿರುವುದಿಲ್ಲ. ವಾಸನೆಗಳು ಬಹಳಷ್ಟಿದ್ದು ಶರೀರದಲ್ಲಿ ಶಕ್ತಿ ಇಲ್ಲದೆ ಹೋದರೆ ಮನುಷ್ಯ ಜಗತ್ತಿನ ಬಗ್ಗೆ ಯಾವಾಗಲೂ ಗೊಣಗಾಡುತ್ತಿರುತ್ತಾನೆ. ಸದಾ ಒಂದಿಲ್ಲ ಒಂದು ದೂರು ಹೇಳುತ್ತಿರುತ್ತಾನೆ. ಅಜ್ಜ ಮತ್ತು ಮೊಮ್ಮಗ ಇಬ್ಬರು ಹೊರಟಿದ್ದರು. ದಾರಿಯಲ್ಲಿ ಮೊಟ್ಟ ಮೊದಲು ಒಂದು ದೊಡ್ಡ ಹುಣಸೇಮರ ಸಿಕ್ಕಿತು. ಮೊದಲೇ ಆ ವೃದ್ಧ ಸೋತಿದ್ದ. ಇಡೀ ಸಂಸಾರದ ಬಗ್ಗೆ ಬೇಸತ್ತಿದ್ದ. ಜೀವನದಿಂದ ಸುಸ್ತಾಗಿದ್ದ. ಅವನೆಂದ, "ಎಲ್ಲ ಜನರು ದೇವರನ್ನು ಬಹಳ ಹೊಗಳುತ್ತಾರೆ." ಆದರೆ ಅವನು ಈ ಸಂಸಾರವನ್ನು ಯಾವ ರೀತಿ ರಚಿಸಿದ್ದಾನೆ? ಹುಣಸೆ ಇಷ್ಟೊಂದು ಗಟ್ಟಿಮುಟ್ಟಾದ ಮರ. ಆದರೆ ಇದರ ಎಲೆಗಳು ಬಹಳ ಚಿಕ್ಕ ಹಾಗೂ ಹಣ್ಣು ಕೂಡ ಬಹಳಷ್ಟು ಚಿಕ್ಕ! ವಾಹ್, ಎಷ್ಟೊಂದು ಸೆನ್ಸ್ ಆಫ್ ಪ್ರಪೋರ್ಷನ್ ಇದೆ? ಪ್ರಮಾಣ ಬದ್ಧತೆ, 'ಸಿಮಿಟ್ರಿ' ಇದೆಲ್ಲವೂ ಬಹುಶಃ ಅವನಿಗೆ ಗೊತ್ತಿಲ್ಲ! ಅಯ್ಯೋ ಸ್ವಂತ ಬುದ್ಧಿ ಇಲ್ಲದಿದ್ದರೆ ನನ್ನಂಥ ಯಾರಾದರೂ ಅನುಭವಸ್ಥರನ್ನು ಕೇಳಬಹುದಾಗಿತ್ತಲ್ಲವೇ? ಈ ರೀತಿ ಕಣ್ಣಿಗೆ ಏನೆಲ್ಲಾ ಕಾಣುತ್ತಿತ್ತೋ ಅದರ ಬಗ್ಗೆ ಒಂದಿಲ್ಲ ಒಂದು ಟೀಕೆ ಮಾಡುತ್ತಾ ಹೋಗುತ್ತಿದ್ದ. ಈ ಟಿಪ್ಪಣಿಯ ಮಾತು ನಡೆದೇಯಿತ್ತು. ಕೊನೆಯಲ್ಲಿ ಗುಲಾಬಿಯ ಪಾತಿಬಂತು. ಗುಲಾಬಿಯ ಸುಂದರವಾದ ಹೂಗಳು ಅರಳಿದ್ದವು. ವೃದ್ಧ ಅಂದ ಇದಂತೂ ವಿಚಿತ್ರವೇ ಆಯಿತು! ಆ ದಡ್ಡ, ಗುಲಾಬಿಯಂಥ ಕೋಮಲವಾದ ಹೂಗಳಿಗೆ ಕೂಡ ಮುಳ್ಳು ಹಚ್ಚಿದ್ದಾನೆ. ಇದೆಂಥ ಅರಸಿಕತೆ? ಅವನೊಂದಿಗೆ ನಡೆಯುತ್ತಿದ್ದ ಮಗುವಿಗೆ ಪ್ರತಿಯೊಂದು

ವಸ್ತುವಿನಲ್ಲಿ ಹೊಸತನ ಕಾಣುತ್ತಿತ್ತು. ಪ್ರತಿಯೊಂದು ವಸ್ತುವನ್ನು ನೋಡಿ ಆತ ಆಶ್ಚರ್ಯಪಡುತ್ತಿದ್ದ. ಅವನಿಗೆ ಬಹಳ ಆನಂದವಾಗುತ್ತಿತ್ತು. ಟೀಕೆ ಟಿಪ್ಪಣಿಗಾಗಿ ಅವನ ಮನಸ್ಸಿನಲ್ಲಿ ಅವಕಾಶವೇ ಇರಲಿಲ್ಲ. ಆ ಮೊಮ್ಮಗ ಅಂದ, "ನಿಮ್ಮ ಕಣ್ಣಿನಲ್ಲಿ ಮತ್ತು ನನ್ನ ಕಣ್ಣಿನಲ್ಲಿ ಬಹಳ ಅಂತರವಿದೆ. ನಿಮ್ಮ ಕಣ್ಣುಗಳಿಗೆ ವಯಸ್ಸಾಗಿದೆ. ನನ್ನ ಕಣ್ಣುಗಳು ಗಟ್ಟಿಯಿವೆ. ಭಗವಂತ ಕೊಟ್ಟ ದಿವ್ಯ ಕಣ್ಣುಗಳು. ನಿಮಗೆ ಗುಲಾಬಿ ಮುಳ್ಳುಗಳಿಂದ ಸುತ್ತುವರಿದಂತೆ ಕಾಣುತ್ತದೆ. ಆದರೆ ನನಗೆ ಧನ್ಯತೆಯ ಅನುಭವವಾಗುತ್ತಿದೆ. ಏಕೆಂದರೆ ಮುಳ್ಳುಗಳಲ್ಲಿ ಗುಲಾಬಿ ಅರಳುತ್ತಿದೆ." ಹೀಗಿದೆ ಸಂಸಾರ. ಯಾವ ದೇಶದಲ್ಲಿ ರಾಷ್ಟ್ರೀಯತೆ ಇಲ್ಲವೋ, ಯಾವ ದೇಶದ ಜನರು ಉದ್ದ ಉದ್ದ ನೆಪಗಳ ಕಾರಣದಿಂದ ಆಲಸಿಗಳಾಗಿದ್ದಾರೋ, ಹತಾಶಬುದ್ಧಿ-ಹತವೀರ್ಯವಾಗಿದ್ದರೆ ಅಂಥ ದೇಶದ ಜನರ ಪುರುಷಾರ್ಥದಿಂದ ಜನತೆಯ ಪರಾಕ್ರಮದ ಮೂಲಕ ನಿರ್ಮಾಣ ಮಾಡುವುದಾಗಿದೆ. ಪ್ರಯತ್ನ ಪೂರ್ವಕವಾಗಿ ಇಂಥ ಸಮಾಜವನ್ನು ರಚಿಸಬೇಕಿದೆ. ಇದು ಸಾಧ್ಯವೆಂಬ ವಿಶ್ವಾಸ ಯಾರ ಅಂತಃಕರಣದಲ್ಲಿದೆಯೋ ಅವನು ತರುಣ. ತಾರುಣ್ಯ ಸದಾ ಪ್ರಯತ್ನಶೀಲವಾಗಿರುತ್ತದೆ. ತಾರುಣ್ಯದ ಪದಕೋಶದಲ್ಲಿ ಪರಾಭವ ಎಂಬ ಶಬ್ದವೇ ಇಲ್ಲ. ಅಸಫಲತೆಯಿದೆ, ಪರಾಭವವಿಲ್ಲ. ಅಸಫಲತೆ ಲಜ್ಜಾಸ್ಪದವಲ್ಲ. ಒಳ್ಳೆ ಒಳ್ಳೆಯ ಜನರೂ ಕೂಡ ಅಸಫಲರಾಗಿದ್ದಾರೆ. ಅಸಫಲತೆಯಿಂದ ಮನುಷ್ಯನಿಗೆ ಹಾನಿಯಾಗಿಲ್ಲ. ಕೆಲಸಕ್ಕೆ ಬಾರದವನೆಂಬ ಕಾರಣದಿಂದಾಗಿ ನಿರಾಶರಾಗಬೇಕಾದ ಅವಶ್ಯಕತೆಯಿಲ್ಲ. ಪರಾಭೂತರಾಗಬೇಕಿಲ್ಲ. ಅಸಫಲತೆಯಿಂದ ಉತ್ಸಾಹ ಹೆಚ್ಚಾಗಬೇಕು. ಅಸಫಲತೆಯಿಂದ ದುಃಖಿಯಾಗುವ ಕಾರಣವಿಲ್ಲ. ಕ್ರಾಂತಿವಾದಿ ಯುವಕರೇ, ಇಂಥ ಯೌವನ ಈಶ್ವರನ ಕೃಪೆಯಿಂದ ನಿಮಗೆ ದೊರಕಿದೆ.

ತಾರುಣ್ಯದ ಪದಕೋಶದಲ್ಲಿ ಪರಾಭವ ಇಲ್ಲ. ಅಸಫಲತೆ ಇದ್ದರೂ ಇರಬಹುದು. ಇದರ ಅರ್ಥವೇನು? ಇತಿಹಾಸದಲ್ಲಿ ಮತ್ತು ಒಟ್ಟು ಕ್ರಾಂತಿ ತತ್ವಜ್ಞಾನದಲ್ಲಿ ಹಾಗೂ ತಂತ್ರದಲ್ಲಿ ಎರಡು ಮಾತುಗಳು ತುಂಬ ಮಹತ್ವದ್ದು. ಬಹು ಸಂಖ್ಯಾತ ಜನರು ಯಾವುದನ್ನು ಮಾನ್ಯ ಮಾಡುತ್ತಾರೋ ಅದು ಸಫಲಕ್ರಾಂತಿ ಎಂಬುದು ಚೆನ್ನವೇ? ಇದೊಂದು ಪ್ರಶ್ನೆ. ಮೊದಲು ನಾನು ಈ ಪ್ರಶ್ನೆಯನ್ನು ಗಾಂಧೀಜಿಯವರ ಭೂಮಿಕೆಯಲ್ಲಿ ಕೇಳುತ್ತಿದ್ದೆ. ಈಗ ಕ್ರಾಂತಿಕಾರಿಗಳ ಭೂಮಿಕೆಯಿಂದ ಕೇಳುತ್ತೇನೆ. ಏಕೆಂದರೆ ಇಂಥ ಒಂದು ವಿಚಾರ ಅಥವಾ ತತ್ವಜ್ಞಾನ ಬಹುಸಂಖ್ಯಾತ ಜನರಿಗೆ ಮಾನ್ಯವಾಗದೇ ಇರುವುದರಿಂದ ಅದರ ಪರಾಭವವಾಯಿತೆಂದು ತಿಳಿಯಬಹುದೇ? ಇದು ತುಂಬಾ ಮಹತ್ವದ ಪ್ರಶ್ನೆ. ಆ ವಿಚಾರದ ಕ್ಷೇತ್ರ ವಿಶಾಲವಾಗಲಿಲ್ಲ ಅಥವಾ ಜೀವನದ ಅನೇಕ ಕ್ಷೇತ್ರಗಳ ಒಳಗೆ ಪ್ರವೇಶವಾಗಲಿಲ್ಲ ಎಂಬ ಕಾರಣಕ್ಕಾಗಿ ಅದನ್ನು ತಪ್ಪೆಂದು ತಿಳಿಯಬೇಕೆ? ಏಕೆಂದರೆ ಗಾಂಧೀಜಿಯವರ ಕಾರ್ಯಕ್ರಮಗಳ ಅನುಕರಣೆಯನ್ನು ಜನರು ಮಾಡಿದರು. ದೊಡ್ಡ ಸಂಖ್ಯೆಯಲ್ಲೇ ಮಾಡಿದರು. ಆದರೂ ಕೂಡ ಈ ಕಾರ್ಯಕ್ರಮಗಳ ಹಿಂದೆ ಇದ್ದಂಥ ಕ್ರಾಂತಿಯ ವಿಚಾರವಾಗಲೀ, ಕ್ರಾಂತಿಗಾಗಿ ಇದ್ದಂಥ ಪ್ರೇರಣೆಯಾಗಲಿ ಜನರು ಸ್ವೀಕರಿಸಲಿಲ್ಲ. ಈ ಅರ್ಥದಲ್ಲಿ

ಗಾಂಧೀಜಿ ಅಸಫಲರಾದರು. ಆದರೆ ಇದನ್ನು ನಾನು ಪರಾಭವವೆಂದು ಮಾನ್ಯ ಮಾಡುವುದಿಲ್ಲ. ಬಹುಮತವೆಂಬುದು ಸರಿ-ತಪ್ಪುಗಳ ನಿರ್ಣಯದ ಸಾಧನವಲ್ಲ. ಈ ವಿಚಾರವನ್ನು ಇನ್ನೂ ರಾಜನೀತಿ ಕ್ಷೇತ್ರದಲ್ಲಿ ಕೂಡ ಮಾಡಬೇಕಾಗುವುದು. ನಾಥ್ ಪೈ ಅವರು ಒಂದು ಮಸೂದೆ ಮಂಡಿಸಿದ್ದರು. ಮೂಲಭೂತ ಹಕ್ಕುಗಳು ಅಬಾಧಿತವಾಗಿರತಕ್ಕದ್ದು ಅಥವಾ ಅದರಲ್ಲಿ ಪರಿವರ್ತನೆ ಮಾಡುವುದು ಸಂಸತ್ ಕೈನಲ್ಲಿ ಇರಬೇಕು ಎಂಬುದಾಗಿತ್ತು. ಈ ಪ್ರಶ್ನೆ ತಾತ್ವಿಕ, ಆಕಾಡೆಮಿಕ್ ಇದೆ. ಏಕೆಂದರೆ ಸಂಸತ್ ಮಹಿಳೆಯನ್ನು ಪುರುಷನನ್ನಾಗಿ ಮಾಡಲಾರದು ಮತ್ತು ಪುರುಷನನ್ನು ಸ್ತ್ರೀಯನ್ನಾಗಿ ಮಾಡಲಾರದು. ಇದರ ಹೊರತಾಗಿ ಸಂಸತ್ 'ಸುಪ್ರೀಂ' ಇದೆ. ಅದು ಏನುಬೇಕಾದರೂ ಮಾಡಬಹುದು. ಇದು ವಸ್ತು ಸ್ಥಿತಿ ಹೀಗೆ ಇರಬೇಕೆ ಎಂಬ ಪ್ರಶ್ನೆ.

ದಕ್ಷಿಣ ಆಫ್ರಿಕಾದಲ್ಲಿ ಇರುವ ಬಿಳಿ ಜನರು ಅಲ್ಲಿಯ ಪಾರ್ಲಿಮೆಂಟ್‌ನಲ್ಲಿ ಬಹುಮತದಿಂದ ತೀರ್ಮಾನಿಸಿ ಇಲ್ಲಿ ಕರಿಜನರಿಗೆ ಪ್ರವೇಶವಿಲ್ಲವೆಂದು ಮಾಡಿದರೆ ಇದು ಉಚಿತವಾಗುವುದೇ?

ನನ್ನ ಕ್ರಾಂತಿಯ ಪ್ರಕ್ರಿಯೆಯಲ್ಲಿ 'ಚಾರಿತ್ರ'ಕ್ಕೆ ಸ್ಥಾನವಿದೆ. ಬಂಗಾಲದಲ್ಲಿ ಮತ್ತು ಬೇರೆಡೆಯಲ್ಲಿ ಶ್ರೀಮಂತ ಕಮ್ಯೂನಿಸ್ಟರಿದ್ದಾರೆ ಮತ್ತು ಸಮಾಜವಾದಿ ಶ್ರೀಮಂತರು ಇದ್ದಾರೆ. ಆಗ ಗಾಂಧೀಯವರು 'ಇವರು ಎಂಥ ಸಮಾಜವಾದಿಗಳು? ಇವರ ಬಳಿ ಸಂಪತ್ತು ಇದೆ. ಇವರ ಬಳಿ ಸ್ವಾಮಿತ್ವ ಇದೆ.' ಆಗ ಓರ್ವ ಸಮಾಜವಾದಿ ಹೀಗೆ ಹೇಳಿದ, 'ನಾನು ಸಂಪತ್ತನ್ನು ಬಿಟ್ಟುಕೊಟ್ಟರೆ ಅದರಿಂದ ಏನಾಗುವುದು? ಅಷ್ಟರಿಂದಲೇ ಸಮಾಜವಾದ ಆಗುವುದಿಲ್ಲ. ನಾನು ಗೌತಮಬುದ್ಧನಾಗುವುದರಿಂದ ಸಮಾಜವಾದ ಆಗುವುದೇ?

ಜೆ.ಪಿ.ಯವರು ಸಮಾಜವಾದಿಯಾಗಿದ್ದಾಗಿನ ಮಾತು. ವ್ಯಕ್ತಿಗತ ಆಚರಣೆಗೆ ಸ್ಥಾನವಿಲ್ಲ. ಅದಕ್ಕೆ ಯಾವ ಮಹತ್ವವಿಲ್ಲ ಎಂಬುದಾಗಿ ಬರೆದಿದ್ದರು. ಗಾಂಧೀಜಿ ಹೇಳಿದರು, 'ನನ್ನ ಸಮಾಜವಾದ ವ್ಯಕ್ತಿಗತ ಆಚರಣೆಯಿಂದ ಪ್ರಾರಂಭವಾಗುತ್ತದೆ'. ಗಾಂಧೀಯವರಿಗೆ ಲೋಕಾತ್ಮವನ್ನು ಜಾಗೃತಮಾಡಬೇಕಿತ್ತು. ಇದು ಮನುಷ್ಯನ ಆತ್ಮ. ನನಗಿಂತಲೂ ಯಾರು ಹೆಚ್ಚು ದುಃಖದಲ್ಲಿದ್ದಾರೋ ಅವನು ನನ್ನ ನಮನಕ್ಕೆ ಬರಬೇಕು. ಅವರ ಪ್ರಕ್ರಿಯೆಯಲ್ಲಿ ವೈಜ್ಞಾನಿಕ ಚಾರಿತ್ರ್ಯದ ಪ್ರೇರಣೆಯಿತ್ತು.

ಲೋಕತಂತ್ರದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಅಪಾಯವಿದೆ. ಅಂದರೆ ಪಾರ್ಲಿಮೆಂಟಿನ ನಿರ್ಣಯ ಅಂತಿಮ ಮತ್ತು ಸಂಯಕ್. ಪಾರ್ಲಿಮೆಂಟಿನ ಸರ್ವಾನುಮತಿ ಕೂಡ ಅನ್ಯಾಯ ಮೂಲಕವಾಗಿದ್ದರೆ ಅದು ಕೂಡ ಪ್ರಮಾಣವಲ್ಲ. ಇದು ಗಾಂಧೀಜಿಯವರ ಸತ್ಯಾಗ್ರಹ ದರ್ಶನ. ಜಾನ್ ಸ್ಟುವರ್ಟ್ ಮಿಲ್‌ನ ಸ್ವಾತಂತ್ರ್ಯ ಸಂಬಂಧದ ತತ್ವಜ್ಞಾನ ಕೂಡ ಇದೇ ಆಗಿದೆ. ಇಡೀ ಸಂಸಾರ ಒಟ್ಟಿಗೆ ಸೇರಿದರೂ ಕೂಡ ಓರ್ವ ವ್ಯಕ್ತಿಯನ್ನು ಒತ್ತೆ ಹಿಡಿಯುವ ಅಧಿಕಾರ ಸಂಸಾರಕ್ಕಿಲ್ಲ.

ಮಾಲೀಕತ್ವದ ಸಮಾವೇಶ ನಮ್ಮ ಸಂವಿಧಾನದಲ್ಲಿ ಕೊಡಲಾದ ಮೂಲಭೂತ ಹಕ್ಕುಗಳಲ್ಲಿ ಇದೆ. ಅದು ಅವಾಂಛಿತ ಹಾಗಿದ್ದರೆ ಅದನ್ನು ತೆಗೆದು

ಹಾಕುವುದು ಅಗತ್ಯ. 'ಕಿರಪಾಣ'ವನ್ನು ಇಟ್ಟುಕೊಳ್ಳುವುದು ಕೂಡ ಮೂಲಭೂತ ಅಧಿಕಾರಗಳಲ್ಲಿ ಇದೆ. 'ಕಿರಪಾಣ'ವನ್ನು ಇಟ್ಟುಕೊಳ್ಳುವ ಅಧಿಕಾರ ಸಿಖ್ಖರಿಗಿದೆ. ಇಂಥ ಕೆಲ ನಿಯಮಗಳನ್ನು ತೆಗೆದುಹಾಕುವ ಅಧಿಕಾರ ಪಾರ್ಲಿಮೆಂಟಿಗೆ ಇರಬೇಕು ಎಂದು ಹೇಳುವುದು ಬೇರೆ ಮಾತು. ಆದರೆ ಯಾವುದೇ ಪ್ರಕಾರದ ಮೂಲಭೂತ ಅಧಿಕಾರವನ್ನು ತೆಗೆದುಹಾಕುವ ಅಧಿಕಾರ ಪಾರ್ಲಿಮೆಂಟಿಗೆ ಇರಬೇಕು–ಈ ಪ್ರತಿಪಾದನೆ ತಪ್ಪು. ಸ್ವಾಮಿತ್ವ ಮತ್ತು ಸಂಪತ್ತಿನ ಅಧಿಕಾರ ಸಾರ್ವತ್ರಿಕವಾಗಿ ಇರುವಂಥದ್ದಲ್ಲ. ಅದರಲ್ಲಿ ವಿಷಮತೆಯ ಬೀಜಗಳಿವೆ. ಅದನ್ನು ಮೂಲಭೂತ ಹಕ್ಕುಗಳಲ್ಲಿ ಸಮಾವಿಷ್ಟ ಮಾಡುವುದೇ ಅವಿವೇಕವಾಗಿತ್ತು.

ಲೋಕಾಭಿಪ್ರಾಯ ಯಾವ ಹಂತದವರೆಗೆ ಸಮೀಚೀನ ಅಥವಾ ಶುದ್ಧವಾಗಿರಬಲ್ಲದು ಎಂಬ ಪ್ರಶ್ನೆ ಕೂಡ ಇದೆ. ಮೈಜನಿಯ ಪ್ರಕಾರ 'ಜನತೆಯ ಧ್ವನಿ–ಈಶ್ವರನ ಧ್ವನಿ' ಇದು ನಿಜವೇ? ಹಾಗಿದ್ದಲ್ಲಿ ಪಾರ್ಲಿಮೆಂಟಿನ ನಿರ್ಣಯವನ್ನು ಭಗವಂತನ ನಿರ್ಣಯವೆಂದೇ ತಿಳಿಯಲಾಗುವುದೆ?

ಲೋಕಮತವು ಎರಡು ಪ್ರಕಾರದಿರುತ್ತದೆ. ಔಪಚಾರಿಕ ಮತ್ತು ವಾಸ್ತವಿಕ. ಪಾರ್ಲಿಮೆಂಟ್‌ನಲ್ಲಿ ಪ್ರಕಟವಾಗುವ ಲೋಕಮತ ಅದು ಯಾವಾಗಲೂ ವಾಸ್ತವಿಕವಾಗಿ ಇರುವುದಿಲ್ಲ. ಹಾಗಿದ್ದರೂ ಬ್ರಿಟಿಷ್ ಪಾರ್ಲಿಮೆಂಟ್‌ನ ಬಗ್ಗೆ ಹೀಗೆ ಹೇಳಲಾಗಿದೆ... ಪುರುಷನನ್ನು ಸ್ತ್ರೀಯನ್ನಾಗಿ ಸ್ತ್ರೀಯನ್ನು ಪುರುಷನನ್ನಾಗಿ ಮಾಡಲು ಸಾಧ್ಯವಿಲ್ಲವೆಂಬುದನ್ನು ಬಿಟ್ಟರೆ ಉಳಿದೆಲ್ಲವನ್ನು ಮಾಡುವ ಸಾಮರ್ಥ್ಯ ಪಾರ್ಲಿಮೆಂಟಿಗಿದೆ. ಇದು ಸಂವೈಧಾನಿಕ ತತ್ವ. ಇದರಲ್ಲಿ ಪಾರ್ಲಿಮೆಂಟರಿ ಸರ್ವಾಧಿಕಾರತ್ವದ ಬೀಜ ಅಡಗಿದೆ. ಮುಂದೆ ಯಾವುದಾದರೂ ಒಂದು ದಿನ ಪ್ರತಿನಿಧಿ ಸಭೆ ಕಪ್ಪು ಜನರು ಬಿಳಿಯರ ಮಧ್ಯೆ ಕುಳಿತುಕೊಳ್ಳತಕ್ಕದ್ದಲ್ಲ ಅಥವಾ ಅಸ್ಪೃಶ್ಯರು ಬ್ರಾಹ್ಮಣರನ್ನು ಮುಟ್ಟುತಕ್ಕದ್ದಲ್ಲ ಎಂಬುದಾಗಿ ಸರ್ವಸಮ್ಮತಿಯಿಂದ ನಿರ್ಣಯ ಮಾಡಿದರೆ ಇದನ್ನು ಶುದ್ಧ ಮತ್ತು ಸರ್ವಹಿತಕಾರಿಯೆಂದು ಮಾನ್ಯ ಮಾಡಬಹುದೇ? ಪ್ರಾತಿನಿಧಿಕ ಅಥವಾ ಪ್ರತ್ಯಕ್ಷ ಲೋಕತಂತ್ರದಲ್ಲಿ ಕೂಡ ಔಪಚಾರಿಕ ಲೋಕಮತದ ಮರ್ಯಾದೆ ಇದೆ. ವಾಸ್ತವಿಕ ಲೋಕಮತದ ಗುರುತೇನು? ನಮಗಾಗಿ ಬೇರೆಯವರಿಂದ ಯಾವ ಅಪೇಕ್ಷೆಯನ್ನು ಇಟ್ಟುಕೊಂಡಿರುತ್ತೇವೋ ಅದೇ ವಾಸ್ತವಿಕವಾದ ನಮ್ಮ ಆತ್ಮದ ಧ್ವನಿ. ಇದೇ ಪ್ರತಿಯೊಬ್ಬರ ಒಳಗೆ ಕುಳಿತಿರುವ ಪರಮಾತ್ಮನ ಸಂಕೇತ. ಇದೇ ಲೋಕಾತ್ಮನ ಒಪ್ಪಂದ. ಗಾಂಧಿಯ ಅನೇಕ ಮಾತುಗಳು ಬಹು ಅಸಂಖ್ಯ ನಾಗರೀಕರಿಗೆ ಒಪ್ಪಿಗೆ ಇರಲಿಲ್ಲ. ಆದರೆ ಅವರ ಅಂತರಾತ್ಮ ಅವುಗಳನ್ನು ಅಸ್ವೀಕೃತಗೊಳಿಸದೆ ಇರುವುದಿಲ್ಲ. ಮನುಷ್ಯನ ಸಂಬಂಧದಲ್ಲಿ ಇದರ ಹೆಸರೇ ಭಗವಂತನ ಅಧಿಷ್ಠಾನ.

– ಅನು: ಸು.ಕೌ

* * *

ಒಡೆದ ಹಾಲಾದ ಶಿಕ್ಷಣ

ಏಕಶಿಸ್ತೀಯ ವಿಶ್ವವಿದ್ಯಾಲಯ ಪ್ರಜಾಸತ್ತೆಗೆ ವಿರುದ್ಧ

ದೇಶದ ಎಲ್ಲೆಡೆ ಏಕಶಿಸ್ತೀಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಂತೂ ಸ್ಥಿತಿ ಬಹಳ ಕೆಟ್ಟದಾಗಿದೆ. ಈ ಏಕಶಿಸ್ತೀಯ ವಿಶ್ವವಿದ್ಯಾಲಯಗಳು 'ವಿಶ್ವವಿದ್ಯಾಲಯ' ಎಂಬ ಪರಿಕಲ್ಪನೆಗೇ ವಿರುದ್ಧವಾಗಿವೆ.

ಈ ಬಗೆಯ ಏಕಶಿಸ್ತೀಯ ವಿಶ್ವವಿದ್ಯಾಲಯಗಳಿಗೂ, ನಿರ್ದಿಷ್ಟ ವಿಷಯಗಳಲ್ಲಿ ಅಥವಾ ಉಪ ವಿಷಯದಲ್ಲಿ ಪಾಂಡಿತ್ಯ ಸಾಧಿಸುವುದಕ್ಕೂ ಸಂಬಂಧವಿಲ್ಲ. ಸಮಕಾಲೀನ ಅಧ್ಯಯನ ಮಾದರಿಯಲ್ಲಿ ವಿಷಯ ತಜ್ಞತೆ ಎಂಬುದು ಬಹುಶಿಸ್ತೀಯ ವಾತಾವರಣದಲ್ಲಿ ಹುಟ್ಟಿಕೊಳ್ಳುತ್ತಿದೆ. ಹಾಗೆ ನೋಡಿದರೆ ಎಲ್ಲಾ ವಿಷಯಗಳ ಕುರಿತ ಸಂಶೋಧನೆಗಳೂ ಇತರ ಅಧ್ಯಯನ ಶಿಸ್ತುಗಳಲ್ಲಿರುವ ಜ್ಞಾನವನ್ನು ತನ್ನೊಳಕ್ಕೆ ತೆಗೆದುಕೊಳ್ಳುವುದರ ಮೂಲಕವೇ ವಿಸ್ತಾರಗೊಳ್ಳುವುದು.

ಒಂದೇ ವಿಷಯಕ್ಕೆ ಸೀಮಿತವಾಗಿರುವ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಒತ್ತು ನೀಡುವುದು ಆಯಾ ವಿಷಯಗಳ ಅಧ್ಯಯನ ಕ್ಷೇತ್ರಕ್ಕೆ ಜಡತ್ವ ಬಾಧಿಸುವಂತೆ ಮಾಡುತ್ತದೆಯಷ್ಟೇ ಅಲ್ಲದೆ ಸಂಶೋಧನೆಗಳ ಗುಣಮಟ್ಟ ಕುಸಿಯಲು ಕಾರಣವಾಗುತ್ತದೆ.

ನಿರ್ದಿಷ್ಟ ವಿಷಯಗಳ ಕುರಿತ ಸಂಶೋಧನೆಗೆಂದೇ ಮೀಸಲಾದ ಸಂಸ್ಥೆಗಳೇ ಬಹುಶಿಸ್ತೀಯ ಸಂಶೋಧನಾ ಸಂಸ್ಥೆಗಳಾಗುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸರ್ಕಾರ 'ವಿಷಯ ವಿದ್ಯಾಲಯ'ಗಳ ಸ್ಥಾಪನೆಗೆ ಮುಂದಾಗುವುದರ ಮೂಲಕ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಬಹುದೊಡ್ಡ ಅನ್ಯಾಯ ಮಾಡುತ್ತಿದೆ.

ಜಾನಪದ, ಅರೆವೈದ್ಯಕೀಯ, ಆಯುರ್ವೇದ, ಸಂವಹನ... ಹೀಗೆ ಉದ್ದೇಶಿತ ವಿಶ್ವವಿದ್ಯಾಲಯಗಳ ಪಟ್ಟಿಯನ್ನು ನೋಡುತ್ತಿದ್ದರೆ ಮುಂದೊಂದು ದಿನ ಹೊಲಿಗೆ ಮತ್ತು ಅಡುಗೆಗೂ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರ ಮುಂದಾಗಬಹುದೇನೋ...?

ಈ ಬಗೆಯ ವಿಷಯ ವಿದ್ಯಾಲಯಗಳ ಸ್ಥಾಪನೆಯ 'ಸರ್ಕಾರೀ ಉತ್ಸಾಹ'ಕ್ಕೆ ತಡೆಯೊಡ್ಡಲು 'ವಿಶ್ವವಿದ್ಯಾಲಯ ಧನ ಸಹಾಯ ಆಯೋಗ' (ಯುಜಿಸಿ) ಮಧ್ಯ ಪ್ರವೇಶಿಸಬೇಕು. ಯಾವ ವಿಶ್ವವಿದ್ಯಾಲಯವೂ 'ಯುಜಿಸಿ'ಯ ಮಾನ್ಯತೆ ಇಲ್ಲದೆ ಯಾವುದೇ ವಿಷಯಗಳನ್ನು ಬೋಧಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, 'ಯುಜಿಸಿ'ಯ ನಿಯಮಗಳೇ ಹೇಳುವಂತೆ ಒಂದೇ ವಿಷಯಕ್ಕೆ ಸೀಮಿತವಾಗಿರುವ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಒಪ್ಪಿಗೆ ನೀಡಲು ಸಾಧ್ಯವಿಲ್ಲ.

'ಯುಜಿಸಿ' ಕಾಯ್ದೆಯ '೨ಬಿ' ಮತ್ತು '೧೨ಬಿ' ಖಂಡಿಕೆಗಳು ಈ ವಿಷಯವನ್ನು ಸ್ಪಷ್ಟವಾಗಿ ಹೇಳಿವೆ. ಇತ್ತೀಚಿನ ಯಶ್‌ಪಾಲ್ ಸಮಿತಿ ವರದಿ ಕೂಡಾ

ಈ 'ವಿಷಯ ವಿದ್ಯಾಲಯ'ಗಳ ಕುರಿತಂತೆ ಕಠಿಣ ನಿಲುವನ್ನೇ ತಳೆದಿದೆ. ಇಂಥವುಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಕೂಡದು ಎಂದು ಸರ್ಕಾರಕ್ಕೆ ಸಲಹೆ ಮಾಡಿದೆ. ಈ ವರದಿಯ ಶಿಫಾರಸುಗಳನ್ನು ಕೇಂದ್ರ ಸರ್ಕಾರವೂ ಅನುಮೋದಿಸಿದೆ.

ವಿಶ್ವವಿದ್ಯಾಲಯ ಎಂಬ ಪರಿಕಲ್ಪನೆಗೇ ವಿರುದ್ಧವಾಗಿರುವ ಈ 'ವಿಷಯ ವಿದ್ಯಾಲಯ'ಗಳು ವಿಶ್ವವಿದ್ಯಾಲಯಗಳನ್ನು ಕೇವಲ 'ತರಬೇತಿ ಸಂಸ್ಥೆ'ಗಳಾಗಿ ಪರಿವರ್ತಿಸಿಬಿಡುತ್ತವೆ. ಅಂದರೆ ವಿಶ್ವವಿದ್ಯಾಲಯಗಳು ವಿಶಾಲ ಮನೋಭಾವದ ಪಾಂಡಿತ್ಯವುಳ್ಳ ನಾಗರಿಕರನ್ನು ಸೃಷ್ಟಿಸುವ ಕೆಲಸವನ್ನೂ ನಿಲ್ಲಿಸಿಬಿಡುತ್ತವೆ.

ಇದು ಕರ್ನಾಟಕದ ಆಡಳಿತಾರೂಢ ಬಿಜೆಪಿ ಸರ್ಕಾರದ ಕಾರ್ಯಸೂಚಿಗೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಏಕೆಂದರೆ ಅದಕ್ಕೆ ಬೇಕಿರುವುದು ತನ್ನ ಗೊಡ್ಡು ಚಿಂತನೆಗಳನ್ನು ಪ್ರಶ್ನಿಸದ ನಾಗರಿಕ ಸಮಾಜ. ಈ ವಿಷಯ ವಿದ್ಯಾಲಯಗಳು ಸೃಷ್ಟಿಸುವ ಸಮಾಜವೂ ಅಂಥದ್ದೇ. ಹಾಗೆಯೇ ಒಂದೇ ವಿಷಯಕ್ಕೆ ಸೀಮಿತವಾಗಿ 'ತಜ್ಞತೆ'ಗೆ ಒತ್ತು ನೀಡುವ ಕ್ರಿಯೆಯಲ್ಲಿ ನಮ್ಮ ಕಾಲದ ಅಗತ್ಯವಾದ ಎಲ್ಲರನ್ನೂ ಒಳಗೊಳ್ಳುವ ಉನ್ನತ ಶಿಕ್ಷಣವಲ್ಲ.

ಇದು ವಿಶೇಷಾತಿ ವಿಶೇಷ ತಜ್ಞತೆಯ ಹೆಸರಿನಲ್ಲಿ ಬಡವರನ್ನು ಉನ್ನತ ಶಿಕ್ಷಣದಿಂದ ಹೊರಗಿಡುವ ಕ್ರಿಯೆಯೂ ಆಗಿಬಿಡುತ್ತದೆ. ಆದ್ದರಿಂದ ವಿಷಯ ವಿದ್ಯಾಲಯಗಳ ಸ್ಥಾಪನೆ ಒಂದು ಅಪ್ರಜಾಸತ್ತಾತ್ಮಕ ನೀತಿ.

– ಡಾ.ಕೆ.ಎನ್.ಪಣಿಕ್ಕರ್
ಕೇರಳ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರು

ಒಂದು ರೋಗ!

ವಿಷಯಕ್ಕೊಂದು ವಿಶ್ವವಿದ್ಯಾಲಯ ಸ್ಥಾಪಿಸುವುದು ನಮ್ಮ ಶಿಕ್ಷಣ ಕ್ಷೇತ್ರವನ್ನು ಬಾಧಿಸುತ್ತಿರುವ ಮಾರಕ ರೋಗ. ಇದನ್ನು ನೋಡುತ್ತಿದ್ದರೆ ನಾವು ನಮ್ಮ ದೇಶಕ್ಕೆ ಶಾಶ್ವತ ದ್ವಿತೀಯ ಸ್ಥಾನವನ್ನು ಪಡೆಯಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇವೆಯೇ ಎಂಬ ಸಂಶಯ ಬರುತ್ತದೆ.

ನಮಗೆ ಚಿಂತನೆ ಮತ್ತು ಆಲೋಚನೆಗಳಲ್ಲಿ ಯಾವತ್ತೂ ಮುಂಚೂಣಿಯಲ್ಲಿರಲು ಸಾಧ್ಯವಿಲ್ಲ ಎಂದು ನಾವೇ ನಿರ್ಧರಿಸಿಬಿಟ್ಟಿದ್ದೇವೆ. ಜೊತೆಗೆ ಶಿಕ್ಷಣವನ್ನು ಒಂದು ಲಾಭದಾಯಕ ಉದ್ಯಮವೆಂದು ಭಾವಿಸುವವರಿಗೆ ಈ 'ವಿಷಯ ವಿದ್ಯಾಲಯ'ಗಳು ಗಳಿಕೆಯ ಮಾರ್ಗವೂ ಆಗಿಬಿಟ್ಟಿದೆ.

ನಮಗೆ ಪಾಲಿಟೆಕ್ನಿಕ್‌ಗಳಿಂದ ಆರಂಭಿಸಿ ಎಲ್ಲಾ ಬಗೆಯ ತರಬೇತಿ ಸಂಸ್ಥೆಗಳ ಅಗತ್ಯವಿದೆ. ಆದರೆ ಇವೆಲ್ಲವೂ ಒಂದು ಶೈಕ್ಷಣಿಕ ವ್ಯವಸ್ಥೆಯ ಒಳಗಿರಬೇಕು.

ಸಂಸ್ಕೃತ, ಕೃಷಿ, ವೈದ್ಯಕೀಯ ಮತ್ತು ಬಡಗಿಯ ಕೆಲಸವನ್ನು ಒಂದೇ ವಿಶ್ವವಿದ್ಯಾಲಯದಲ್ಲಿ ಕಲಿಯಲು ಅಡ್ಡಿಯಾಗುವಂಥದ್ದೇನಿದೆ? ಹಾಗೆ ನೋಡಿದರೆ ನಾವು ಶಿಕ್ಷಣ ಪಡೆಯಬೇಕಾದ ವಾತಾವರಣವೇ ಇದು. ಆಗಲೇ ಹೊಸ

ಜ್ಞಾನಸೃಷ್ಟಿ ಸಾಧ್ಯವಾಗುವುದು. ಇಂಥದ್ದೊಂದು ವಾತಾವರಣವನ್ನು ಕಲ್ಪಿಸುವುದೇ ವಿಶ್ವವಿದ್ಯಾಲಯದ ಉದ್ದೇಶ. ಆಗ ಮಾತ್ರ ಅದು ವಿಶ್ವವಿದ್ಯಾಲಯವೆಂದು ಕರೆಯಿಸಿಕೊಳ್ಳುವ ಅರ್ಹತೆ ಪಡೆಯುತ್ತದೆ.

ಜ್ಞಾನವನ್ನು ಸಮಗ್ರವಾಗಿ ನೀಡುವ ವಿಶ್ವವಿದ್ಯಾಲಯಗಳ ಪರಂಪರೆಯಿಂದ ದೂರವಾಗಿ ಕೆಲಕಾಲವಾಯಿತು. ಈಗ ಅವುಗಳ ಮಟ್ಟ ಮತ್ತಷ್ಟು ಕೆಳಕ್ಕಿಳಿದಿದೆ ಎಂಬುದಕ್ಕೆ ಸಾಕ್ಷಿಯಾಗಿ 'ವಿಷಯ ವಿದ್ಯಾಲಯ'ಗಳ ಸ್ಥಾಪನೆಯಾಗುತ್ತಿದೆ. ಒಬ್ಬ ತಜ್ಞನಾಗುವುದು ಮಹತ್ವದ ಸಂಗತಿ, ಹಾಗೆಂದು ಕೇವಲ ತಜ್ಞನಾಗಿಬಿಡುವುದರಲ್ಲಿ ಅರ್ಥವಿಲ್ಲ. ನಮ್ಮ ಅಧ್ಯಯನದ ಹರಹು ಮತ್ತೊಂದು ಶಿಸ್ತಿನ ಅಂಚನ್ನು ತಲುಪಿದಾಗ ಸೃಜನಶೀಲತೆಯ ಅವಕಾಶ ತೆರೆದುಕೊಳ್ಳುತ್ತದೆ– ಹೊಸತು ಹುಟ್ಟಿಕೊಳ್ಳುವುದೇ ಇಂಥ ಸಂದರ್ಭದಲ್ಲಿ.

ನಾನು ಉನ್ನತ ಶಿಕ್ಷಣದ ಸುಧಾರಣೆಗಾಗಿ ಕೇಂದ್ರ ಸರ್ಕಾರ ರೂಪಿಸಿದ್ದ ಸಮಿತಿಯೊಂದರ ನೇತೃತ್ವ ವಹಿಸಿದ್ದೆ. ನಮ್ಮ ವರದಿಯಲ್ಲಿ ಐಐಟಿ ಮತ್ತು ಐಐಎಂಗಳೂ ಕೂಡಾ ಮಾನವಿಕ ಮತ್ತು ವಿಜ್ಞಾನ ವಿಷಯಗಳನ್ನು ತಮ್ಮ ತೆಕ್ಕೆಯೊಳಕ್ಕೆ ತೆಗೆದುಕೊಂಡು ವಿಶ್ವದ ಮಹಾ ವಿಶ್ವವಿದ್ಯಾಲಯಗಳಾಗುವ ಹಾದಿಯಲ್ಲಿ ಸಾಗಬೇಕು ಎಂದು ಶಿಫಾರಸು ಮಾಡಿದ್ದೆವು.

ಇದೇನೂ ಹೊಸ ವಿಚಾರವಲ್ಲ. ಇಂದು ನಾವು ಬಹಳ ಮಹತ್ವದ ವಿಶ್ವವಿದ್ಯಾಲಯಗಳು ಎಂದು ಗುರುತಿಸುವ ಸಂಸ್ಥೆಗಳೆಲ್ಲಾ ಬೆಳೆದದ್ದೇ ಹೀಗೆ. ಹಾರ್ವರ್ಡ್, ಎಂಐಟಿಯಂಥ ಸಂಸ್ಥೆಗಳ ವಿಷಯದಲ್ಲೂ ಇದು ನಿಜ.

ತಜ್ಞತೆಯ ಹೆಸರಿನಲ್ಲಿ ವಿಶ್ವವಿದ್ಯಾಲಯಗಳ ಅಧ್ಯಯನ ವ್ಯಾಪ್ತಿಯನ್ನು ಕುಗ್ಗಿಸುವುದು ಶಿಕ್ಷಣ ಕ್ಷೇತ್ರವನ್ನೇ ಕುಗ್ಗಿಸುವುದಕ್ಕೆ ಸಮಾನ. ಅಷ್ಟೇ ಅಲ್ಲ ಅಧ್ಯಯನ ಮಾದರಿಗಳನ್ನು ಅಪ್ರಸ್ತುತವಾಗಿಸುವ ಕ್ರಿಯೆ. ಇದೊಂದು ಅಪರಾಧ. ಬದುಕು ಯಾವುದೋ ಒಂದು ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿ ಉಳಿದಿರುವುದಿಲ್ಲ ಎಂಬುದನ್ನು ನಾವು ಮರೆಯಬಾರದು. ಮಕ್ಕಳನ್ನು ನಾವು ಅಧ್ಯಯನ ಶಿಸ್ತುಗಳೆಂಬ ಜೈಲುಗಳಿಗೆ ಸೇರಿಸುವ ಮೊದಲು ಅವರು ಕಲಿಯುವ ವಿಧಾನವನ್ನು ನೋಡಿದರೆ ನಮಗಿದು ಅರ್ಥವಾಗುತ್ತದೆ.

– ***ಪ್ರೊ.ಯಶ್‌ಪಾಲ್***
ವಿಜ್ಞಾನಿ, ಶಿಕ್ಷಣತಜ್ಞ

ಸೀಮಿತಗೊಂಡರೆ ಅದು ವಿಶ್ವವಿದ್ಯಾಲಯವೇ ಅಲ್ಲ

ವಿಶ್ವವಿದ್ಯಾಲಯಗಳ ಉದ್ದೇಶ ಮತ್ತು ಗುರಿಯ ಬಗ್ಗೆ ಬಹಳ ಚಿಂತನಾರ್ಹ ಮಾತುಗಳನ್ನಾಡಿದ್ದು ಕಾರ್ಡಿನಲ್ ನ್ಯೂಮನ್ (೧೮೦೧–೧೮೯೦). ಅವನ ದೃಷ್ಟಿಯಲ್ಲಿ ವಿಶ್ವವಿದ್ಯಾಲಯಗಳು ಮುಖ್ಯವಾಗಿ ಮಾಡಬೇಕಾಗಿರುವುದು ಜ್ಞಾನದ ಪ್ರಸರಣ. ಅವು 'ಸಾಕ್ಷರ ಸದ್ಗೃಹಸ್ಥ'ರನ್ನು ಸೃಷ್ಟಿಸಬೇಕು ಎಂದ. ಅವನ ಮಾತಿನ

ಬಗ್ಗೆ ಬಹಳ ಚರ್ಚೆಗಳು ಆ ಕಾಲದಲ್ಲೇ ನಡೆದವು.

ಸಂಶೋಧನೆಯ ಕೆಲಸ ಯಾರದ್ದೆಂಬ ಪ್ರಶ್ನೆಯನ್ನು ಆ ಕಾಲದಲ್ಲಿಯೇ ಹಲವರು ಕೇಳಿದರು. ಆಗ ಅವನು ಇದು ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕರ ಕೆಲಸವಾಗಬೇಕಾಗಿಲ್ಲ. ಅವರು ಮುಖ್ಯವಾಗಿ ಮಾಡಬೇಕಿರುವುದು ಒಳ್ಳೆಯ ಜ್ಞಾನ ಪ್ರಸರಣೆ ಎಂದ.

ವಿಶ್ವವಿದ್ಯಾಲಯವೊಂದು ಜ್ಞಾನವನ್ನು ಹಂಚುವ ಕೆಲಸ ಮಾಡಬೇಕಿದ್ದರೆ ಅದು ಜ್ಞಾನದ ಕೇಂದ್ರವಾಗಬೇಕೇ ಹೊರತು ಒಂದು ವಿಷಯಕ್ಕೆ ಸೀಮಿತಗೊಳ್ಳಬಾರದು. ಆದ್ದರಿಂದ ಕಲೆ, ವಿಜ್ಞಾನ, ಮಾನವಿಕಗಳೆಲ್ಲದರ ಬೋಧನೆ ಮತ್ತು ಸಂಶೋಧನೆಗಳನ್ನು ನಡೆಸುವ ಅವಕಾಶವಿರುವ ಸಂಸ್ಥೆಯೊಂದಷ್ಟೇ ವಿಶ್ವವಿದ್ಯಾಲಯವಾಗಬಲ್ಲದು. ಕೇವಲ ಒಂದು ವಿಷಯಕ್ಕೆ ಸೀಮಿತಗೊಂಡಿರುವುದನ್ನು ವಿಶ್ವವಿದ್ಯಾಲಯ ಎನ್ನುವುದೇ ತಪ್ಪು.

ನ್ಯೂಮನ್‌ನ ಮಾತನ್ನೇ ನೆನಪಿಸಿಕೊಳ್ಳುವುದಾದರೆ ವಿಶ್ವವಿದ್ಯಾಲಯ ಸಾಧ್ಯವಿರುವ ಎಲ್ಲಾ ವಿಷಯಗಳಲ್ಲೂ ಯುವ ವಿದ್ಯಾರ್ಥಿಗಳನ್ನು ತರಬೇತುಗೊಳಿಸಬೇಕು. ಆ ಮೂಲಕ ಅವನು ಸರಿಯಾದ ಸದ್ಗೃಹಸ್ಥನಾಗಲು ಸಾಧ್ಯ.

ಆ ಕಾಲದ 'ಸದ್ಗೃಹಸ್ಥ' ಪರಿಕಲ್ಪನೆಯನ್ನು ಈ ಕಾಲಕ್ಕೆ ಪ್ರಸ್ತುತವಲ್ಲ ಎಂದುಕೊಂಡರೂ ವಿಶ್ವವಿದ್ಯಾಲಯ ಎಲ್ಲಾ ಜ್ಞಾನ ಶಾಖೆಗಳಲ್ಲೂ ವಿದ್ಯಾರ್ಥಿಯನ್ನು ತರಬೇತುಗೊಳಿಸಬೇಕು ಎಂಬುದಕ್ಕೆ ಯಾರ ಆಕ್ಷೇಪವೂ ಇರಲಾರದು. ಆದ್ದರಿಂದ ವಿಶ್ವವಿದ್ಯಾಲಯವೊಂದು ಯಾವತ್ತೂ ಎಲ್ಲಾ ಜ್ಞಾನ ಶಾಖೆಗಳ ಕೇಂದ್ರವಾಗಿರಬೇಕು. ಹಾಗೆಂದು ವಿವಿಧ ವಿಷಯಗಳಲ್ಲಿ ತಜ್ಞತೆ ಬೇಡವೇ ಎಂಬ ಪ್ರಶ್ನೆ ಬರುತ್ತದೆ. ಇದನ್ನು ವಿಶ್ವವಿದ್ಯಾಲಯ ನಿರಾಕರಿಸುವುದಿಲ್ಲ.

ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನು, ಕೇಂದ್ರಗಳನ್ನು ಹುಟ್ಟು ಹಾಕಬಹುದು. ಇವೂ ವಿಶ್ವವಿದ್ಯಾಲಯವೆಂಬ ದೊಡ್ಡ ಪರಿಕಲ್ಪನೆಯೊಳಗೇ ಇರಬೇಕು. ಅದರಿಂದ ಭಿನ್ನ ಜ್ಞಾನ ಶಾಖೆಗಳ ನಡುವಣ ಸಂವಹನ ಮತ್ತು ಕೊಡುಕೊಳ್ಳುವಿಕೆ ಸಾಧ್ಯವಾಗುತ್ತದೆ.

ಈಗ ಹುಟ್ಟಿಕೊಳ್ಳುತ್ತಿರುವ ಅಥವಾ ಸರ್ಕಾರ ಜನ್ಮ ನೀಡುತ್ತಿರುವ ಒಂದೇ ವಿಷಯಕ್ಕೆ ಸೀಮಿತಗೊಂಡಿರುವ ವಿಶ್ವವಿದ್ಯಾಲಯಗಳು ನಿಜ ಅರ್ಥದಲ್ಲಿ ವಿಶ್ವವಿದ್ಯಾಲಯಗಳೇ ಅಲ್ಲ. ಇವುಗಳು ಒಂದಷ್ಟು ಜನಕ್ಕೆ ಕೆಲಸ ಕೊಡಬಹುದೇ ಹೊರತು ಬೇರೇನೂ ಸಾಧಿಸಲಾರವು. ಈ ವಿಶ್ವವಿದ್ಯಾಲಯಗಳೂ ಅದರ ಒಂದು ಭಾಗ ಎನಿಸುತ್ತಿದೆ.

ಆದರ್ಶ ಸ್ಥಿತಿಯೊಂದನ್ನು ಕಲ್ಪಿಸಿಕೊಳ್ಳಬಹುದಾದರೆ ಸಂಸ್ಕೃತ, ಭಾರತದ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಇರಬೇಕಾದ ಒಂದು ವಿಷಯ. ಆದರೆ ಅದನ್ನು ಸರ್ಕಾರ ಒಂದು ವಿಶ್ವವಿದ್ಯಾಲಯಕ್ಕೆ ಸೀಮಿತಗೊಳಿಸಿಬಿಟ್ಟಿದೆ. ಹಾಗೆಯೇ ತತ್ವಶಾಸ್ತ್ರವೂ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿರಬೇಕು.

ಈಗ ಸರ್ಕಾರ ಸ್ಥಾಪಿಸುತ್ತಿರುವ ಒಂದೊಂದೇ ವಿಷಯದ ವಿಶ್ವವಿದ್ಯಾಲಯಗಳು ಕುಲಪತಿ, ಕುಲಸಚಿವ, ಪ್ರಾಧ್ಯಾಪಕರ ಹುದ್ದೆಗಳನ್ನು ಸೃಷ್ಟಿಸಬಹುದೇ ಹೊರತು

ಯಾವುದೇ ಉತ್ತಮ ಸಂಶೋಧನೆಗೆ ಕಾರಣವಾಗುವುದಿಲ್ಲ.

ಜ್ಞಾನದ ಪ್ರಸರಣಕ್ಕೂ ಸಹಾಯ ಮಾಡುವುದಿಲ್ಲ. ಜಾನಪದ ವಿಶ್ವವಿದ್ಯಾಲಯವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಅದು ಕೇವಲ ಒಂದು ಜಾನಪದ ಸಂಶೋಧನಾ ಕೇಂದ್ರದಂತೆ ಕೆಲಸ ಮಾಡಬಹುದೇ ಹೊರತು ಒಂದು ವಿಶ್ವವಿದ್ಯಾಲಯದಂತಲ್ಲ. ಅಲ್ಲಿ ಕೆಲವು ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಜಾನಪದ ವಿಷಯದಲ್ಲಿ ರೂಪಿಸಬಹುದು.

ಇಂಥದ್ದನ್ನು ವಿವಿಗಳು ಎಂದು ಕರೆಯುವ ಬದಲಿಗೆ ಸಂಶೋಧನಾ ಸಂಸ್ಥೆಗಳು ಎನ್ನಬಹುದು. ಇವುಗಳನ್ನು ಸಾಧ್ಯವಾದರೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಇರುವಂತೆ ನೋಡಿಕೊಳ್ಳಬೇಕು. ಜಾನಪದದ ವಿದ್ಯಾರ್ಥಿಯೊಬ್ಬನಿಗೆ ಸಮಾಜ ಶಾಸ್ತ್ರ ಮತ್ತು ಮಾನವ ಶಾಸ್ತ್ರದ ಉತ್ತಮ ಪರಿಚಯವಿರಬೇಕು. ಅದನ್ನು ನೀಡದ 'ಜಾನಪದ ವಿಶ್ವವಿದ್ಯಾಲಯ'ದಲ್ಲಿ ಅಧ್ಯಯನ ಮಾಡುವ ಯಾವ ವಿದ್ಯಾರ್ಥಿಯೂ ಎ.ಕೆ.ರಾಮಾನುಜನ್ ಅವರ ಮಟ್ಟದ ಜಾನಪದ ತಜ್ಞನಾಗಲಾರ.

ಜಾನಪದ ಅಧ್ಯಯನವೆಂದರೆ ಅದೊಂದರ ಅಧ್ಯಯನವಷ್ಟೇ ಅಲ್ಲ. ಅದು ಭಾಷೆಯ ಅಧ್ಯಯನ, ಒಂದು ಸಮಾಜದ, ಸಂಸ್ಕೃತಿಯ ಅಧ್ಯಯನ. ಇನ್ನೂ ವಿಸ್ತರಿಸಿ ನೋಡುವುದಾದರೆ ಜಾನಪದ ಮದ್ದು, ಆಚರಣೆ ಇತ್ಯಾದಿಗಳನ್ನು ಅರಿಯಲು ಮನಃಶ್ಶಾಸ್ತ್ರ, ವೈದ್ಯವಿಜ್ಞಾನಗಳ ಅರಿವೂ ಬೇಕಾಗುತ್ತದೆ. ಕೇವಲ ಜಾನಪದಕ್ಕೆ ಸೀಮಿತವಾದ ವಿಶ್ವವಿದ್ಯಾಲಯವೊಂದರಲ್ಲಿ ಇದು ಸಾಧ್ಯವಾಗುವುದಿಲ್ಲ.

ಈಗ ಒಂದರ ಮೇಲೊಂದರಂತೆ ಸರ್ಕಾರ ಸ್ಥಾಪಿಸಲು ಹೊರಟಿರುವ ಒಂದೊಂದು ವಿಷಯದ ವಿಶ್ವವಿದ್ಯಾಲಯಗಳು ವಿಶ್ವದ ಎಲ್ಲ ಜ್ಞಾನವನ್ನು ನೀಡುವ ಸಂಸ್ಥೆ ವಿಶ್ವವಿದ್ಯಾಲಯ ಎಂಬ ಪರಿಕಲ್ಪನೆಗೇ ವಿರುದ್ಧವಾಗಿದೆ. ಸರ್ಕಾರ ಈ ಹುಂಬತನದಿಂದ ದೂರವಿರುವುದು ಜ್ಞಾನದ ಸೃಷ್ಟಿ ಮತ್ತು ಪ್ರಸರಣದ ದೃಷ್ಟಿಯಿಂದ ಒಳಿತು.

– ಡಾ.ಯು.ಆರ್.ಅನಂತಮೂರ್ತಿ

ಒಣ ಜ್ಞಾನದ ಸೃಷ್ಟಿ

ಏಕ ಶಿಸ್ತಿನ ವಿಶ್ವವಿದ್ಯಾಲಯಗಳ ಹೆಚ್ಚಳಕ್ಕೆ ಎರಡು ಮುಖಗಳಿವೆ. ಒಂದು ಅದರ ಕ್ರಿಯಾತ್ಮಕ ಆಯಾಮ. ಮತ್ತೊಂದು ಅದರ ಸಾಂಕೇತಿಕ ಆಯಾಮ. ಸರ್ಕಾರ ಕನ್ನಡ, ಆಯುರ್ವೇದದಂಥ ವಿಷಯಗಳ ಮಹತ್ವವನ್ನು ಪರಿಗಣಿಸಿರುವುದು ರೀತಿಯಲ್ಲಿ ಸಕಾರಾತ್ಮಕ ಅಂಶ.

ಈ ವಿಷಯಗಳಲ್ಲಿ ಅರಿವಿನ ಮಟ್ಟವನ್ನು ಹೆಚ್ಚಿಸುವುದು ಮತ್ತು ಬೋಧನೆಯ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಅದು ಕ್ರಮ ಕೈಗೊಳ್ಳುತ್ತಿದೆ. ಹೀಗೆ ಕ್ರಮ ಕೈಗೊಳ್ಳುವ ಕ್ರಿಯೆಯಲ್ಲಿ ಒಂದು ಸಾಂಕೇತಿಕತೆಯೂ ಇದೆ. ಸರ್ಕಾರ ಒಂದು ಸಂಶೋಧನಾ ಸಂಸ್ಥೆಯನ್ನೋ, ಸಂಶೋಧನಾ ಕೇಂದ್ರವನ್ನೋ ಸ್ಥಾಪಿಸುವಂಥ

'ಸಣ್ಣ ಕ್ರಮ'ಗಳ ಬದಲಿಗೆ ನಿರ್ದಿಷ್ಟ ವಿಷಯದ ಒಂದು ವಿಶ್ವವಿದ್ಯಾಲಯವನ್ನೇ ಸ್ಥಾಪಿಸುತ್ತಿದೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರವಹಿಸುವುದಕ್ಕೆ ಹಲವು ಉನ್ನತ ಶಿಕ್ಷಣ ಸಂಸ್ಥೆಗಳ ಅಗತ್ಯವಿದೆ. ವಿಶ್ವವಿದ್ಯಾಲಯಗಳ ಘೋಷಣೆಯ ಹಿಂದೆ ಬಹುಶಃ ಈಗಾಗಲೇ ಇರುವ ವಿಶ್ವವಿದ್ಯಾಲಯಗಳ ಮಟ್ಟದ ಕುರಿತಂತೆ ಇರುವ ಸರ್ಕಾರದ ನಿಲುವು ಮತ್ತು ವಿವಿಧ ಪ್ರದೇಶಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂಬ ಮನೋಭಾವ ಕಾಣಿಸುತ್ತದೆ.

ಏಕಶಿಸ್ತೀಯ ವಿಶ್ವವಿದ್ಯಾಲಯಗಳ ಸ್ಥಾಪನೆಯ ಈ ಕ್ರಿಯಾತ್ಮಕ ಮತ್ತು ಸಾಂಕೇತಿಕ ಆಯಾಮಗಳೆರಡರಲ್ಲೂ ಕೆಲವು ಸಮಸ್ಯೆಗಳಿವೆ. ಮುಖ್ಯವಾಗಿ 'ವಿಶ್ವವಿದ್ಯಾಲಯ' ಎಂಬುದು ಅದರ ಹೆಸರೇ ಹೇಳುತ್ತಿರುವಂತೆ ಒಂದು ಬಹು ಆಯಾಮ ಮತ್ತು ಬಹು ಶಿಸ್ತಿನಲ್ಲಿ ಜ್ಞಾನವನ್ನು ನೀಡುವ ಸಂಸ್ಥೆಯಾಗಿರಬೇಕು.

ವೈದ್ಯಕೀಯ ವಿದ್ಯಾರ್ಥಿಗಳು ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದ ವಿದ್ಯಾರ್ಥಿಗಳ ಜೊತೆ ಚರ್ಚಿಸಲು ಅವಕಾಶವಿರಬೇಕು. ಇದಿಲ್ಲದೇ ಹೋದರೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ತಮ್ಮ ರೋಗಿಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲೇ ಸಾಧ್ಯವಾಗುವುದಿಲ್ಲ. ಶಿಕ್ಷಕರು ಮತ್ತು ಸಂಶೋಧಕರು ತಮ್ಮ ಆಯ್ಕೆಯ ವಿಷಯಗಳನ್ನು ಅಂತರ್ ಶಿಸ್ತೀಯ ವಿಧಾನದಲ್ಲಿ ಗ್ರಹಿಸಲು ಅವಕಾಶವಿರಬೇಕು.

ಎಂಜಿನಿಯರಿಂಗ್‌ನ ಸಮಸ್ಯೆಗಳು ಕೇವಲ ಎಂಜಿನಿಯರಿಂಗ್‌ನ ಸಮಸ್ಯೆಗಳಷ್ಟೇ ಅಲ್ಲ. ಇವು ಅರ್ಥಶಾಸ್ತ್ರ ಮತ್ತು ಸಾಮಾಜಿಕ ಅಗತ್ಯಗಳ ಸಮಸ್ಯೆಯೂ ಹೌದು. ಇದಕ್ಕಿಂತ ಹೆಚ್ಚಾಗಿ ಸಮಾಜಕ್ಕೆ ಯಾವುದು ಒಳ್ಳೆಯದು, ಯಾವುದು ಕೆಟ್ಟದು, ಈ ಕುರಿತಂತೆ ನಿರ್ಧಾರವನ್ನು ತೆಗೆದುಕೊಳ್ಳುವುದು ಹೇಗೆ ಎಂಬ ತಾತ್ವಿಕ ಪ್ರಶ್ನೆಯೂ ಇಲ್ಲಿದೆ.

ಇದರ ಹೊರತಾಗಿಯೂ ಏಕ ಶಿಸ್ತಿನ ಉನ್ನತ ಶಿಕ್ಷಣಕ್ಕೆ (ಇದನ್ನು ಹೇಗೆ ವಿಶ್ವವಿದ್ಯಾಲಯ ಎನ್ನುವುದು?) ಇನ್ನೂ ಅನೇಕ ಸಮಸ್ಯೆಗಳಿವೆ. ಈ ಬಗೆಯ ಉನ್ನತ ಶಿಕ್ಷಣ ಅರಿವಿನ ಕುರಿತ ಒಂದು ಬಗೆಯ ಹುಸಿ ಶ್ರೇಣೀಕರಣದ ಭ್ರಮೆ ಹುಟ್ಟಿಸುತ್ತದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಬ್ಬರೂ ತಮ್ಮ ಅಧ್ಯಯನದ ಶಿಸ್ತೊಂದೇ ಜಗತ್ತನ್ನು ಅರ್ಥ ಮಾಡಿಕೊಳ್ಳುವ ಮತ್ತು ಪ್ರತಿಕ್ರಿಯಿಸುವ ವಿಧಾನ ಎಂದುಕೊಳ್ಳುತ್ತಾರೆ. ಇದು ಬಹಳ ಅಪಾಯಕಾರಿ.

ವಿಶ್ವವಿದ್ಯಾಲಯಗಳನ್ನು ಒಂದು ವಿಷಯಕ್ಕೆ ಸೀಮಿತಗೊಳಿಸಬಾರದು. ಇದು ನಿಧಾನವಾಗಿ ಆ ವಿಷಯವನ್ನೇ ವಿರೂಪಗೊಳಿಸಿಬಿಡುತ್ತದೆ. ಈಗಾಗಲೇ ಆರಂಭವಾಗಿರುವ ಇಂಥ ವಿಶ್ವವಿದ್ಯಾಲಯಗಳು ಆದಷ್ಟು ಬೇಗ ಇತರ ಅಧ್ಯಯನ ಶಿಸ್ತಿನ ವಿಭಾಗಗಳನ್ನು ಆರಂಭಿಸಬೇಕು. ಉದಾಹರಣೆಗೆ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ತತ್ವಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರದ ವಿಭಾಗಗಳನ್ನು ಆರಂಭಿಸಿ ಈ ಕ್ಷೇತ್ರದಲ್ಲೂ ಅಧ್ಯಯನ ಮತ್ತು ಸಂಶೋಧನೆಯನ್ನು ನಡೆಸಬೇಕು.

ಜೊತೆಗೆ ವೈದ್ಯಕೀಯ ವಿದ್ಯಾರ್ಥಿಗಳೂ ಕೂಡಾ ಈ ಕೋರ್ಸ್‌ಗಳನ್ನು ತೆಗೆದುಕೊಳ್ಳಬೇಕು. ಇದು ಅವರ ವೃತ್ತಿಗೆ ಒಂದು ಪರಿಪೂರ್ಣತೆಯನ್ನು

ಒದಗಿಸುತ್ತದೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದಂಥವು ಚರಿತ್ರೆ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಸಾಂಸ್ಕೃತಿಕ ಅಧ್ಯಯನ, ವ್ಯವಹಾರಾಡಳಿತದಂಥ ವಿಭಾಗಗಳನ್ನೂ ಆರಂಭಿಸಬೇಕು.

ಇಂಥದ್ದನ್ನು ಮಾಡದೇ ಇದ್ದರೆ ದ್ವೀಪಗಳಂತಿರುವ ಸಣ್ಣ 'ವಿಷಯ ವಿದ್ಯಾಲಯ'ಗಳು ದೊಡ್ಡದಾಗಿ ಬೆಳೆಯುವ ಅವಕಾಶ ಕಡಿಮೆ. ಇನ್ನೆಲ್ಲೂ ಪ್ರವೇಶ ಪಡೆಯಲಾಗದವರಿಗೆ ಸೀಟು ಕೊಡುವ ಸಂಸ್ಥೆಗಳಾಗಿ ಇವು ಉಳಿದುಕೊಳ್ಳಬಹುದು. ಮಾತ್ರವಲ್ಲ ಇದು ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸುವ ಕೇಂದ್ರಗಳಾಗಬಹುದು. ಹಾಗೆಯೇ ಇವು ಸೃಷ್ಟಿಸುವ ಪೇಲವ ಮತ್ತು ಒಣ ಜ್ಞಾನವನ್ನು ಸೃಷ್ಟಿಸುವ ಸಂಸ್ಥೆಗಳಾಗಿ ಉಳಿಯುತ್ತವೆ.

ಬಹಳ ದೊಡ್ಡದಾಗಿ ಸ್ಥಾಪಿಸುವ ಸಂಸ್ಥೆಗಳು ಉಳಿದುಕೊಳ್ಳಬಹುದು. ಆದರೆ ಅವಕ್ಕೆ ಮತ್ತೊಂದು ಬಗೆಯ ಅಪಾಯ ಕಾದಿದೆ. ಇಂಥ ಸಂಸ್ಥೆಗಳು ತಮ್ಮ ಅಧ್ಯಯನ ಶಿಸ್ತಿನ ಅರಿವನ್ನು ಬಹಳ ಸಂಕುಚಿತಗೊಳಿಸುವುದರಿಂದ ಭವಿಷ್ಯದಲ್ಲಿ ವಿವರಿಸಲಾಗದಂಥ ಅಪಾಯಗಳು ಸಂಭವಿಸಬಹುದು. ಅಂದರೆ ಮನುಷ್ಯನ ಅಸ್ತಿತ್ವ ಎಂಬುದು ಹಲವು ಅಂತರ ಸಂಪರ್ಕಗಳ ಬಿಡಿಸಲಾಗದ ಹೆಣಿಗೆ ಎಂಬ ಚಾರಿತ್ರಿಕವಾಗಿ ಸಾಬೀತಾಗಿರುವ ಜ್ಞಾನದ ಕುರಿತ ಪರಿಕಲ್ಪನೆಯನ್ನೇ ತಲೆಕೆಳಕಾಗಿಸಬಹುದು.

– ಅಮ್ಮನ್ ಮದನ್

ಅಜೀಮ್ ಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಪ್ರಾಧ್ಯಾಪಕರು.

ಬಾವಿಯೊಳಗಿನ ಜ್ಞಾನದ ಸೃಷ್ಟಿ

ಅರಿವನ್ನು ವಿಭಜಿಸಲು ಸಾಧ್ಯವಿಲ್ಲ. ಅದಕ್ಕೇ ವೇದಗಳು ಅಖಂಡ ಜ್ಞಾನದ ಬಗ್ಗೆ ಹೇಳುತ್ತವೆ. ನಾವು ಕಲಿಯುವ ಮತ್ತು ಅರ್ಥಮಾಡಿಕೊಳ್ಳುವ ವಾಸ್ತವವನ್ನು ಒಡೆಯುತ್ತಾ ಬಂದೆವು. ಈ ಹಾದಿಯಲ್ಲಿ ಬಹಳ ಮುಂದೆ ಸಾಗಿ ನಾವು ನಾವು ಅರ್ಥ ಮಾಡಿಕೊಳ್ಳಲೆಂದು ಮಾಡಿದ ತುಣುಕುಗಳೆಲ್ಲಾ ಅರಿವೆಂಬ ಆಕೃತಿಯ ಅವಿಭಾಜ್ಯ ಭಾಗಗಳು ಎಂಬುದನ್ನು ಮರೆತೇ ಬಿಟ್ಟು ಆ ತುಣುಕುಗಳನ್ನು ಮತ್ತೆ ಜೋಡಿಸಿ ಅರಿವಿನ ಅಖಂಡ ರೂಪವನ್ನು ನೋಡಲಾರದಂತಾಗಿದ್ದೇವೆ.

ಅಸ್ತಿತ್ವದಲ್ಲಿರುವ ಪ್ರತಿಯೊಂದೂ ಒಂದೇ ವಾಸ್ತವದ ಭಿನ್ನ ಸ್ವರೂಪಗಳು. ನಾವು ಅರಿವನ್ನು ಒಡೆಯುವ ಕ್ರಿಯೆಯ ಮೂಲಕ ವ್ಯಕ್ತಿ ಮತ್ತು ಅವನ ಅಸ್ಮಿತೆಯನ್ನು ಬೇರೆ ಬೇರೆಯಾಗಿಸುತ್ತೇವೆ. ಸಂಸ್ಕೃತಿಯನ್ನು ಸಮಾಜದಿಂದ ಭಿನ್ನವಾಗಿಸುತ್ತೇವೆ. ಹೀಗೆ ಒಡೆದುಕೊಂಡ ಮನುಷ್ಯ ಸಮಾಜದ ಏಕತೆಗೇ ಸವಾಲಾಗಿಬಿಡುತ್ತಾನೆ.

ನಮ್ಮ ವಿಶ್ವವಿದ್ಯಾಲಯಗಳು ಆಧುನಿಕ ಕಾಲಘಟ್ಟದಲ್ಲಿ ಈ ವಿಭಜನಾ ಕ್ರಿಯೆಗೆ ತಮ್ಮದೇ ಆದ ಕೊಡುಗೆ ನೀಡಿವೆ. ಆದರೂ ಒಂದೇ ವಿಷಯಕ್ಕೆ ಸೀಮಿತವಾಗಿರುವ ವಿಶ್ವವಿದ್ಯಾಲಯಗಳು 'ವಿಶ್ವವಿದ್ಯಾಲಯ'ದ ಮೂಲ ಪರಿಕಲ್ಪನೆಗೇ ವಿರುದ್ಧವಾದ

ಸಂಸ್ಥೆಗಳು.

ಪ್ರಾಚೀನ ಕಾಲದಿಂದ ಆರಂಭಿಸಿ ರೆನೆಸಾನ್ಸ್‌ನ ತನಕ- ವೇದಗಳಿಂದ ಆರಂಭಿಸಿ ಅರಿಸ್ಟಾಟಲ್ ಗೆಲಿಲಿಯೋ ತನಕವೂ- ಜ್ಞಾನವನ್ನು ಸೃಷ್ಟಿಸುವವರು ಎಲ್ಲವನ್ನೂ ಒಳಗೊಳ್ಳುವ ಒಂದು ಸಮಷ್ಟಿ ದೃಷ್ಟಿಕೋನವುಳ್ಳವರಾಗಿದ್ದರು. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಕಲೆ ಮತ್ತು ಸಾಹಿತ್ಯಗಳೆಲ್ಲವೂ ಈ ಎಲ್ಲರ ಜ್ಞಾನದ ಭಾಗಗಳೇ ಆಗಿದ್ದವು.

ಇಂದು ಕೇವಲ ವಿಷಯಕ್ಕೊಂದು ವಿಶ್ವವಿದ್ಯಾಲಯವಿರುವುದಲ್ಲ, ಉಪ ವಿಷಯಗಳಿಗೂ ಒಂದು ವಿಶ್ವವಿದ್ಯಾಲಯ ಸ್ಥಾಪಿಸುವ ಮಟ್ಟಕ್ಕೆ ನಮ್ಮ 'ಒಡಕಲು ಮನೋಭಾವ' ಬೆಳೆದು ನಿಂತಿದೆ. ತಂತ್ರಜ್ಞಾನಕ್ಕೊಂದು ವಿಶ್ವವಿದ್ಯಾಲಯವಿರುವಾಗಲೇ ಐಐಟಿಗೂ ಒಂದು ವಿಶ್ವವಿದ್ಯಾಲಯದ ಸ್ಥಾನವೇ ಇದೆ.

ವಿಶ್ವವಿದ್ಯಾಲಯಗಳ ಅಖಂಡ ಸ್ವರೂಪವನ್ನು ಪುನರ್‌ಸ್ಥಾಪಿಸಬೇಕಾದ ಸಮಯ ಬಂದಿದೆ. ಕಲೆ, ವಿಜ್ಞಾನ, ವಾಣಿಜ್ಯ, ವೃತ್ತಿಪರ ಮತ್ತು ತಂತ್ರಜ್ಞಾನ ಸಂಬಂಧೀ ಜ್ಞಾನಗಳೆಲ್ಲವೂ ಒಂದೇ ವಿಶ್ವವಿದ್ಯಾಲಯದಲ್ಲಿ ದೊರೆಯವಂಥ ವ್ಯವಸ್ಥೆಯಾಗಬೇಕಾಗಿದೆ.

ಬಹಳ ನಿರ್ದಿಷ್ಟ ಮತ್ತು ಪ್ರತ್ಯೇಕವಾದ ಸ್ವರೂಪದಲ್ಲಿ ಅರಿವನ್ನು ಗಳಿಸುತ್ತಿರುವ ಈ ದಿನಗಳ ಮತ್ತೊಂದು ಅಗತ್ಯ ಎಲ್ಲ ಜ್ಞಾನಶಾಖೆಗಳನ್ನೂ ಒಳಗೊಂಡ ಒಂದು ಕೋರ್ಸ್ ಆದರೂ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಬೇಕು.

ದೊಡ್ಡ ಸಂಖ್ಯೆಯಲ್ಲಿ ಏಕ ವಿಷಯದ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುತ್ತಾ ಹೋಗುವುದು ಭೌತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣದ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಪ್ರತಿಯೊಬ್ಬ 'ತಜ್ಞ'ನೂ ತನ್ನ ಬಾವಿಯೊಳಗಿನ ಜ್ಞಾನವನ್ನಷ್ಟೇ ಇಟ್ಟುಕೊಂಡು ತನ್ನ ಕ್ರಿಯೆಗಳ ಒಟ್ಟಾರೆ ಪರಿಣಾಮವನ್ನು ಅರಿಯದೆ ಕಾರ್ಯನಿರ್ವಹಿಸುತ್ತಾನೆ.

ಇದು ಏಕಮುಖಿ ಅಭಿವೃದ್ಧಿ, ಪ್ರಗತಿಯ ಅಸಮತೋಲನ, ಪರಿಸರ ಮಾಲಿನ್ಯ ಮತ್ತು ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನ ಸೌಹಾರ್ದತೆಯ ನಷ್ಟಕ್ಕೆ ಕಾರಣವಾಗುತ್ತದೆ.

– *ಎಂ.ಎಸ್. ತಿಮ್ಮಪ್ಪ*
ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ

(ಸಾಭಾರ : ಪ್ರಜಾವಾಣಿ)

* * *

ವೇದದಲ್ಲಿಯ ಮುತ್ತುಗಳು

– *ವಿನೋಬಾ*

ಮನುಷ್ಯನ ಹೃದಯದಲ್ಲಿ ದೈವೀ ಮತ್ತು ಅಸುರೀ ವೃತ್ತಿಗಳು ಇರುತ್ತವೆ. ಇವುಗಳ ದ್ವಂದ್ವ ನಡೆಯುತ್ತಿರುತ್ತದೆ. ಇದಕ್ಕೆ ದೈವಾಸರು ಸಂಗ್ರಾಮವೆನ್ನುತ್ತಾರೆ. ಗೀತೆಯ ಹದಿನಾರನೇ ಅಧ್ಯಾಯದಲ್ಲಿ ಇದು ಇದೆ. ಈ ಕಲ್ಪನೆ ವೇದಗಳಿಂದ ಬಂದಿದೆ. ವಸಿಷ್ಠರ ಮಂತ್ರದಲ್ಲಿ–

ಸು ವಿಜ್ಞಾನಂ ಚಿಕಿತುಷೆ ಜನಾಯ ಸಚ್ಚಾಸಚ್ಚ ವಚಸೀ ಪಸ್ಪೃಧಾತೆ
ತಯೋರ್ಯತ್ ಸತ್ಯಂ ಯತರ ದೃಜೀಯಃ ತದಿತ್ ಸೋಮೋವತಿ ಹತ್ಯಾಸತ್

ನಾನು ಹೇಳುತ್ತಿರುವ ಸಂಗತಿ ಜ್ಞಾನಿಗಳಿಗೆ ಗೊತ್ತಿದೆ. ಹೊಸದೇನನ್ನೂ ಹೇಳುತ್ತಿಲ್ಲ. ಸತ್ಯ ಮತ್ತು ಅಸತ್ಯ ವಾಕ್ಯಗಳ ಮಧ್ಯೆ ಜಗಳವಿದೆ. ಅವುಗಳಲ್ಲಿ ಯಾವುದು ಸತ್ಯ ತತ್ವವೊ ಅದರ ಪಾಲನೆಯನ್ನು 'ಸೋಮ' ಅಂದರೆ ಪರಮಾತ್ಮ ಮಾಡುತ್ತಾನೆ. ಹಾಗೂ ಅಸತ್ಯದ ಹನನ ಮಾಡುತ್ತಾನೆ.

* * *

ವಸ್ಯಾಂ ಇಂದ್ರಾಸಿ ಮೆ ಪಿತುಃ ಉತ ಭ್ರಾತುರಭುಂಜತಃ
ಮಾತಾ ಚ ಮೆ ಛದಯಥಃ ಸಮಾ ವಸೊ...

ಹೇ ಇಂದ್ರ! ನೀನು ನಮ್ಮ ತಂದೆಗಿಂತಲೂ ಹೆಚ್ಚಿನವನು. ಹೇ ಈಶ್ವರ! ನೀನು ಮತ್ತು ನನ್ನ ತಾಯಿ. ಇಬ್ಬರೇ ನನ್ನ ಪಾಪಗಳನ್ನು, ಅಪರಾಧಗಳನ್ನು ಮುಚ್ಚುತ್ತೀರಿ. ನೀವಿಬ್ಬರೂ ಸಮಾನರು.

* * *

ಯಂತಿ ಪ್ರಮಾದ ಮತಂದ್ರಾಃ

ಯಂತಿ ಇದು ಯಮ್ ಧಾತುರೂಪ. ಯಮ್ ಎಂದರೆ ಸಂಯಮಿಸುವುದು, ನಿಯಮನ ಮಾಡುವುದು ಅಥವಾ ಓಡಿಸುವುದು.

ಪ್ರಮಾದಗಳ ಕಾರಣದಿಂದ ನಮ್ಮ ಜೀವನದಲ್ಲಿ ಪ್ರಗತಿ ಇರುವುದಿಲ್ಲ, ನಾವು ಕುಂಠಿತಗೊಳ್ಳುತ್ತೇವೆ. ಧರ್ಮ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಂತೂ ಪ್ರಮಾದಗಳು ಮಾರಕವಾಗಿ ಇದ್ದೇಇವೆ. ಆದರೆ ದೈನಂದಿನ ಸಾಧಾರಣ ವ್ಯವಹಾರದಲ್ಲಿ ಕೂಡ ಅದು ಬಹಳಷ್ಟು ಹಾನಿಕಾರಕವಾಗುತ್ತದೆ. ಅದಂತೂ ನಮ್ಮ ಸರ್ವಾಂಗೀಣ ಶತ್ರು. ಆದ್ದರಿಂದ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಪ್ರಮಾದಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಮನುಷ್ಯ ಸ್ವತಂತ್ರ ಸಾಧನೆ ಮಾಡಬೇಕಾಗುತ್ತದೆ. ಭಗವಂತ ಗೀತೆಯಲ್ಲಿ ಕೂಡ ಇದೇ ಶಬ್ದ ಹೇಳಿದ್ದಾನೆ. *ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ* ಒಂದು ವೇಳೆ ನಾನು ಸ್ವತಃ ಅತಂದ್ರಿತನಾಗಿ ಕೆಲಸ ಮಾಡದೆ ಹೋದರೆ ಈ ಎಲ್ಲ ಜನರು ನೀತಿಭ್ರಷ್ಟ, ವಿಚಾರಭ್ರಷ್ಟರಾಗುವರು. ಮತ್ತು ಸೃಷ್ಟಿಯ ವಿನಾಶವಾಗುವುದು. ಆದ್ದರಿಂದ ಜನರ ದೃಷ್ಟಿಯಲ್ಲಿ ನಾನು ಅತಂದ್ರಿತನಾಗಿ ಕೆಲಸ ಮಾಡುತ್ತೇನೆ.

ನಿದ್ರೆ ಮತ್ತು ತಂದ್ರೆಯಲ್ಲಿ ವ್ಯತ್ಯಾಸವಿದೆ. ಆಲಸ್ಯಯುಕ್ತ ನಿದ್ರೆ, ತಂದ್ರಾ. ಮತ್ತು ಸ್ವಪ್ನರಹಿತ ವಿಶ್ರಾಂತಿಯೇ ನಿದ್ರೆ. ಋಗ್ವೇದದ ಮಂತ್ರದ ಈ ಭಾಗವನ್ನು ಯಥಾವತ್ತಾಗಿ ಸಾಮ್ಯ ಸೂತ್ರದಲ್ಲಿ ತೆಗೆದುಕೊಂಡಿದ್ದೇನೆ.

* * *

ವೇದದಲ್ಲಿ ಪರಮೇಶ್ವರನಿಗೆ 'ಚಾರೂ-ನಾಮ' ಹಾಡು ಹೇಳುವ ಎಷ್ಟೋ ಮಂತ್ರಗಳಿವೆ. ಅವುಗಳಲ್ಲಿ ಈ ಕೆಳಗಿನ ಮಂತ್ರ ಭಕ್ತ ಜನರಲ್ಲಿ ವಿಶ್ರೂತ.

* * *

ಮರ್ತಾ ಅಮರ್ತಸ್ಯ ತೆ ಭೂರಿ ನಾಮ ಮನಾಮಹೆ
ವಿಪ್ರಾಸೊ ಜಾತ ವೇದಸಃ

ಹೇ ಪರಮೇಶ್ವರ! ನಾವು ಮರಣ ಧರ್ಮಿಗಳು, ನೀನು ಅಮೃತ ಸ್ವರೂಪ. ನಾವು ಜ್ಞಾನಕ್ಕಾಗಿ ಉತ್ಸುಕರಾದ (ವಿಪ್ರ) ಇದ್ದೇವೆ, ನೀನು ಅರಿಯ ಬೇಕಾದ ಜ್ಞಾನಮಯಿ. ನಾವು (ಅಲ್ಪರು) ನಿನ್ನ ವಿಶಾಲ ನಾಮದ ಮನನ ಮಾಡುತ್ತೇವೆ. 'ಭೂರಿ' ಅಂದರೆ ವಿಶಾಲದ ಹೋಲಿಕೆಯಲ್ಲಿ 'ಅಲ್ಪ' ಶಬ್ದದ ಅಧ್ಯಾಹಾರವೆಂದು ತಿಳಿಯಬೇಕು. ಇದರಲ್ಲಿ ನಾಮದ ಮನನದ ಪ್ರಸ್ತಾಪವಿದೆ, ಕೇವಲ ಅದರ ಉಚ್ಚಾರಣೆಯಲ್ಲ.

* * *

ನಾಮ ಚಿಂತನೆಯ ಈ ಸರ್ವಮಾನ್ಯ ಮಂತ್ರದಲ್ಲಿ ಉಪನಿಷತ್ತಿನ ಸುಪ್ರಸಿದ್ಧ ಪ್ರಾರ್ಥನಾತ್ರಯಿ ಅಡಗಿವೆ.

ಅ ಸತೋಮಾ ಸದ್ಗಮಯಾ ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯಾ

ಯಾವುದು ಅಸತ್ತೊ ಅದೇ ಸಂಕುಚಿತ ಅಥವಾ ಅಲ್ಪ. ಯಾವುದು ಸತ್ತೋ ಅದೇ ಈ ಮಂತ್ರದಲ್ಲಿ ನಿರ್ದಿಷ್ಟ ಭೂರಿ. ಉಳಿದ ಎರಡು ಪ್ರಾರ್ಥನೆಗಳು ಪ್ರಕಟ ಇವೆ.

* * *

ಯದಗ್ನೆ ಸ್ಯಾಮಹಂ ತ್ವಂ ವಾ ಘಾ ಸ್ಯಾ ಅಹಂ
ಸ್ಯುಷ್ಟೇ ಸತ್ಯಾ ಇಹಾಶಿಷಃ

ಹೇ ಅಗ್ನಿ! ನೀನು ನನ್ನೆದುರಿನಲ್ಲಿ ಉರಿಯುತ್ತಿದ್ದೀಯೆ. ನಾನು ನಿನ್ನೆದುರಿನಲ್ಲಿ ನಿಂತಿದ್ದೇನೆ. ನಾನು ನಿನ್ನ ಹಾಗೆ ಜ್ವಲಂತ ಗಟ್ಟಿ ಆಗಲಿ, ಇದು ನನ್ನ ಇಚ್ಛೆ. ನೀನು ನನ್ನಂತೆ ಶಾಂತವಾಗು. ಆಗ ನನಗೆ ಅನುಕೂಲವಾಗುವುದು, ಆಗ ನನ್ನ ಇಚ್ಛೆ ಸಫಲವಾಗುವುದು.

* * *

ಮಾ ನ ಏಕಸ್ಮಿನ್ನಾಗಸಿ ಮಾ ದ್ವಯೋರೊತ ತ್ರಿಷು
ವಧೀರ್‌ಮಾ ಶೂರ ಭೂರಿಷು

ಹೇ ಶೂರ ಪರಮೇಶ್ವರ! ನನ್ನ ಅಪರಾಧಕ್ಕಾಗಿ ನನ್ನನ್ನು ಹೊಡೆಯದಿರು. ನಾನು ಮಾಡಿದ ಎರಡು ಅಪರಾಧಗಳಿಗಾಗಿಯೂ ನನ್ನನ್ನು ಹೊಡೆಯಬೇಡ.

ಮೂರು ಬಾರಿ ಅಪರಾಧ ಮಾಡಿದೆ, ಅಗಲೂ ಕೂಡ ಹೊಡೆಯದಿರು. ಎಷ್ಟೇ ಬಾರಿ ಅಪರಾಧ ಮಾಡಿರಲಿ ಆಗಲೂ ಕೂಡ ಹೊಡೆಯದಿರು. ಹೇ ಪರಮೇಶ್ವರ, ನೀನು ಶೂರನಲ್ಲವೇ.

* * *

ಅ ಪಾಮ ಸೋಮವೃತಾ ಅಭೂಮ

ನಾನು ಸೋಮರಸ ಕುಡಿದೆ ಮತ್ತು ಅಮರನಾದೆ. ವೈದಿಕ ಋಷಿಗಳು ಸೋಮವಲ್ಲಿ ರಸ ಸೇವಿಸುತ್ತಿದ್ದರು. ಎಂಬ ವರ್ಣನೆ ಬರುತ್ತದೆ. ಈ ವಿಶಿಷ್ಟವಲ್ಲಿ ಯಾವುದೆಂಬುದರ ಬಗ್ಗೆ ಇಂದು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಇದನ್ನು ಸಮಸ್ತ ವನಸ್ಪತಿಗಳ ಪ್ರತಿನಿಧಿರೂಪವೆಂದಾಗಿ ಮಾನ್ಯಮಾಡಲಾಗಿದೆ. ಸು ಅಂದರೆ ಹಿಂಡುವುದು. ಈ ಧಾತುವಿನಿಂದ ಸೋಮ ಶಬ್ದ ರಚಿತವಾಗಿದೆ. ಆದ್ದರಿಂದ ಅದು ಯಾವುದೇ ವನಸ್ಪತಿಗೆ ಅನ್ವಯವಾಗಬಹುದು. ಸೋಮಪಾನ ಅಂದರೆ, ಸ್ವಚ್ಛ, ಶುದ್ಧ, ಸಾತ್ವಿಕ, ಸಂಯಮ ಪೂರ್ವಕವಾಗಿ ತೆಗೆದುಕೊಳ್ಳಲಾದ ಆಹಾರ. ಆಹಾರ ಶುದ್ಧಿಯ ಕಾರಣದಿಂದ ವೈದಿಕ ಋಷಿಗಳು ಪವಿತ್ರರಾಗಿದ್ದರು.

ಸೋಮರಸದಲ್ಲಿಯ ರಸ ಕುಡಿಯುವವರು ಬೇರೆ ಯಾವುದನ್ನೂ ತೆಗೆದುಕೊಳ್ಳದೆ ಉಪವಾಸ ಮಾಡುತ್ತಿದ್ದರು. ಅದೊಂದು ವ್ರತವಾಗಿತ್ತು. ಯಾರಿಗೆ ಇಷ್ಟೊಂದು ಮಾಡಲು ಸಾಧ್ಯವಾಗುತ್ತಿರಲಿಲ್ಲವೊ ಅವರು ಸೋಮರಸದೊಂದಿಗೆ ಹಸುವಿನ ಹಾಲು ಕುಡಿಯುತ್ತಿದ್ದರು.

* * *

ಅದ್ಯಾದ್ಯಾಶ್ವಃ ಶ್ವಃ

ಇಂದಿನದು ಇಂದಿಗೆ, ನಾಳೆಯದು ನಾಳೆಗೆ. ಇಂದಿನದನ್ನು ನಾಳೆಗಾಗಿ ಇಡಕೂಡದು. ನಿನ್ನೆ ಆದುದರ ಬಗ್ಗೆ ಏನೂ ನೆನಪಿಲ್ಲ ಮತ್ತು ಭವಿಷ್ಯದ ಚಿಂತೆಯಿಲ್ಲ.

* * *

ಅಹಂ ಚತ್ವಂ ಚ ವೃತ್ರಹನ್ ಸಂ ಯುಜ್ಯಾವ ಸನಿಭ್ಯ ಆ

ಹೇ ಇಂದ್ರ! ನೀನು ಮತ್ತು ನಾನು ಒಟ್ಟಿಗೆ ಸೇರೋಣ. ಇಲ್ಲಿ ಪರಮೇಶ್ವರನಿಗೆ 'ಇಂದ್ರ' ಎಂಬ ಸಂಜ್ಞೆಯನ್ನು ಕೊಟ್ಟಿದೆ. ಇಂದ್ರ ಅಂದರೆ ಇದಂ ದ್ರಷ್ಟಾ. ಭಕ್ತ ಪರಮೇಶ್ವರನಿಗೆ ನಮ್ಮೀರ್ವರ ಜೊತೆಯಾದಲ್ಲಿ ತುಂಬ ಲಾಭವಾಗುವುದು ಎಂದು ಹೇಳುತ್ತಿದ್ದಾನೆ.

ಕರ್ಮಯೋಗದೊಂದಿಗೆ ಭಕ್ತಿಯ ಯೋಗ. ಈ ಮಾತು ಪ್ರಾಚೀನ ಕಾಲದಿಂದ ನಡೆದು ಬಂದಿದೆ. ಆದರೆ ಕರ್ಮಯೋಗದಲ್ಲಿ ಎಷ್ಟೊಂದು ನಮ್ರತೆಯಿರಬೇಕೆಂದರೆ ಅದು ಭಕ್ತಿಗೆ ಶರಣಾಗಿ ಅದರ ಆಶ್ರಯ ಪಡೆಯಬೇಕು. ಭಕ್ತಿ ಎಷ್ಟೊಂದು ವಾತ್ಸಲ್ಯಯುತವಾಗಿರಬೇಕೆಂದರೆ ಅದು ಕರ್ಮಯೋಗಕ್ಕೆ ತನ್ನ ಪೋಷಣೆ ಕೊಡಬೇಕು. ಭಕ್ತಿ ಮಾತೃಸ್ಥಾನದಲ್ಲಿದೆ. ಕರ್ಮಯೋಗ ಮಗ. ತಾಯಿ ಪರಾಕ್ರಮದ ಕೆಲಸವನ್ನು ತನ್ನ ಮಗನ ಮೂಲಕ ಮಾಡಿಸುತ್ತಾಳೆ ಮತ್ತು ಸ್ವಯಂ ಅವನನ್ನು ಪೋಷಿಸುತ್ತಾಳೆ. ಗೀತೆಯಲ್ಲಿ ಇದೇ ಅರ್ಜುನ ಮತ್ತು ಕೃಷ್ಣನ ಸಂಬಂಧದಲ್ಲಿ ಕಾಣುತ್ತದೆ.

ಜೀವಾನ್ ನೊ ಅಭಿ ಧೇತನ ಆದಿತ್ಯಾಸಃ ಪುರಾ ಹಥಾತ್ ಕದ್ದ ಸ್ಥ ಹವನಶ್ರುತಃ
ಯದ್ವಃ ಶ್ರಾಂತಾಯ ಸುನ್ವತೆ ವರೂಥಮಸ್ತಿ ಯಚ್ಛರ್ದಿಃ ತೇನಾ ನೋ ಅಧಿ ವೋಚತ
ಅಸ್ತಿ ದೇವಾ ಅಂಹೋರೂರೂ ಅಸ್ತಿ ರತ್ನಮನಾಗಸಃ ಆದಿತ್ಯಾ ಅದ್ಭುತೈನಸಃ

ಜಾಲಬದ್ಧ ಋಷಿಗಳು ಆದಿತ್ಯ ದೇವತೆಯನ್ನು ಕುರಿತು ಹೀಗೆ ಹಾಡಿದ್ದಾರೆ. ಹೊಡೆಯುವವರ ಕೈಯಿಂದ ಸಾಯದಿರುವಂತೆ ಮಾಡು, ನನಗೆ ಜೀವನ ಕೊಡು. ನೀನು 'ಹವನ ಶ್ರುತ' ಭಕ್ತರ ಆಹ್ವಾನವನ್ನು ಕೇಳುವಂಥವನು, ನಿನ್ನ ಆ ಖ್ಯಾತಿ ಎಲ್ಲಿ ಇದೆ? ಯಾರು ಶ್ರಾಂತ ದಣಿದಂಥವನು ಕಷ್ಟ ಸಹಿಸುವಂಥ ಭಕ್ತರಿಗಾಗಿ ನಿನ್ನ ಬಳಿ ಇರುವ ರಕ್ಷಾಕವಚವನ್ನು ನನಗೆ ತೊಡಿಸು. ಹೇ ಭಗವಂತ! ನಿನ್ನ ಕ್ರಿಯೆ ಅದ್ಭುತ. ನಾನು ಪಾಪಿ. ಆದರೆ ಪಾಪದಿಂದ ಮುಕ್ತಿಯಿದೆಯಲ್ಲವೆ! ಮತ್ತು ಪಾಪಿಗಳಿಗಾಗಿ ನಿನ್ನ ಹೃದಯದಲ್ಲಿ ಕರುಣೆ ಇದ್ದೇ ಇದೆ!

* * *

ಸಿಂಚಂತಿ ನಮಸಾವತಂ ಉಚ್ಚಾಚಕ್ರಂ ಪರಿಜ್ಮಾನಮ್ ನೀಚೀನ ಬಾರಮಕ್ಷಿತಂ

ಮನುಷ್ಯನ ಶರೀರ ಬಾವಿಯಂತಿದೆ. ಅದರ ಒಳಗೆ ನೀರಿದೆ. ಅದನ್ನು ಕೆಳಗಿನಿಂದ ಮೇಲಕ್ಕೆ ತರಬೇಕಿದೆ. ಮನುಷ್ಯನ ಶರೀರದಲ್ಲಿ ನೀರಿದೆ ಮತ್ತು ಬುದ್ಧಿಯಲ್ಲಿ ಅಂದರೆ ಉಚ್ಚ ಸ್ಥಾನದಲ್ಲಿ ಚಕ್ರವಿದೆ ಎಂದು ವೇದ ಉಪಮೆ ಕೊಡುತ್ತದೆ. ಅಲ್ಲಿರುವ ನೀರನ್ನು ಚಕ್ರದಿಂದ ತೆಗೆಯುವುದಿದೆ. 'ಉಚ್ಚಾ ಚಕ್ರ' ಅಂದರೆ ವಿಚಾರ ಚಕ್ರ.

ನನ್ನ ವಿಚಾರದ ಮೇಲೆ ನನಗೆ ಅತ್ಯಂತ ವಿಶ್ವಾಸವಿದೆ. ಬೇರೆ ಪ್ರಕಾರದ ಬೀಜ ಮೊಳೆಯಲಿ ಅಥವಾ ಮೊಳೆಯದಿರಲಿ ವಿಚಾರ ಬೀಜಮಾತ್ರ ಮೊಳೆಯದೆ ಇರುವುದಿಲ್ಲ. ನೀವೇನು ಕೆಲಸ ಮಾಡುತ್ತೀರೆಂದು ಭಗವಾನ್ ಬುದ್ಧನನ್ನು ಕೇಳಲಾಯಿತು. ಆಗ ಅವರು ವ್ಯವಸಾಯ ಮಾಡುತ್ತಿರುವುದಾಗಿ ಉತ್ತರ ಕೊಟ್ಟರು. ಮನುಷ್ಯನ ಮಾನಸರೂಪಿ ಕ್ಷೇತ್ರದಲ್ಲಿ ನಾನು ವಿಚಾರದ ಬೀಜವನ್ನು ಬಿತ್ತುತ್ತಿದ್ದೇನೆ ಮತ್ತು ಅದಕ್ಕೆ ಕರುಣಾರೂಪಿ ನೀರನ್ನು ಹಾಕುತ್ತಿದ್ದೇನೆ.

* * *

ತವೇದಿಂದ್ರಾ ಹಮಾಶಸಾ ಹಸ್ತೇ ದಾತ್ರಂ ಚನಾ ದದೆ
ದಿವಸ್ಯ ವಾ ಮಘವನ್ ಸಂಭೃತಸ್ಯ ವಾ ಪೂರ್ಧಿ ಯವಸ್ಯ ಕಾಶಿನಾ

ಹೇ ಇಂದ್ರ, ನಿನ್ನ ಭರವಸೆಯ ಆಧಾರದ ಮೇಲೆ ನಾನು ಕೈಯಲ್ಲಿ ಗುದ್ದಲಿಯನ್ನು ಹಿಡಿದಿದ್ದೇನೆ. ದೇವರೆ, ನಿನ್ನ ಪ್ರಾಪ್ತಿಗಾಗಿ ಕೈಯಲ್ಲಿ ಗುದ್ದಲಿ ಹಿಡಿದು ಹೊಲದಲ್ಲಿ ಕೆಲಸ ಮಾಡುತ್ತೇನೆ. ನೀನು ಮೇಲಿಂದ ನಿನ್ನ ಕೃಪೆಯ ಮಳೆಯನ್ನು ಸುರಿಸುವಿಯೆಂಬ ಆಸೆಯಿದೆ. ಋಷಿಗಳು ಗುದ್ದಲಿಯನ್ನು ಈಶ್ವರ ಪ್ರಾಪ್ತಿಯ ಸಾಧನವೆಂದು ಹೇಳುತ್ತಾರೆ. ಸಂಸ್ಕೃತ 'ದಾತ್ರ'ದಿಂದ ಗುಜರಾತಿಯ 'ದಾತರಡು' ಶಬ್ದ ರಚಿತವಾಗಿದೆ. ದಾತ್ರನಿಂದ ಇಷ್ಟು ಸರಳ ಪ್ರಾಕೃತ ಶಬ್ದ ಬೇರೆ ಇನ್ನಾವುದೇ ಭಾಷೆಯಲ್ಲಿ ಇಲ್ಲ.

* * *

ಜನಪದ ವ್ಯಕ್ತಿ

ಓಮಿ ಮರಾಠಿ

'ಓಮಿ' ಮನೆಯೊಳಗೊಂದೇ ಅಲ್ಲ, ಮನೆಯ ಹೊರಗೂ ಮೈ-ಮುರಿದು ದುಡಿಯುವ ಸಾಹಸಗಾರ್ತಿ. ಹಾಗಂತ ಅವಳೇನು ಸರ್ಕಾರಿ ನೌಕರಿ ಮಾಡುತ್ತಿಲ್ಲ. ಖಾಸಗಿ ಕಛೇರಿಯಲ್ಲಿಯೂ ಬೆವರು ಸುರಿಸುತ್ತಿಲ್ಲ. ಅವಳು ದೇಶಕ್ಕೆ ಅನ್ನ ನೀಡುವ ಹೊಲದಲ್ಲಿಯೇ ದುಡಿಯುತ್ತಿದ್ದಾಳೆ. ಕೆಸರು ಗದ್ದೆಯಲ್ಲಿಯೇ ಆಕೆಯ ದೈನಂದಿನ ಚಟುವಟಿಕೆ!

ಸಾಮಾನ್ಯವಾಗಿ ಗದ್ದೆಯನ್ನು ಹೂಡುವುದು, ಹಾಳಿ ಕಡಿಯುವುದು... ಇತ್ಯಾದಿ ಕೆಲಸಗಳನ್ನು ಪುರುಷರೇ ನಿರ್ವಹಿಸುತ್ತಾರೆ. ಆದರೆ ಕಲಬಿಗದ್ದೆಯ ಓಮಿ ಮರಾಠಿ ಪುರುಷರಂತೆ ಗದ್ದೆಯನ್ನು ಹೂಡುವುದನ್ನು ನೋಡಿದರೆ ಎಂಥವರಿಗೂ ಆಶ್ಚರ್ಯವಾಗದೇ ಇರದು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ದೇವನಹಳ್ಳಿ ಬೆಣಗಾಂವ ಸನಿಹದ ಕಲಬಿಗದ್ದೆಯ ಓಮಿ ಮರಾಠಿ ಕಳೆದ ೧೫ ವರ್ಷಗಳಿಂದ ಗದ್ದೆ ಕೆಲಸದಲ್ಲಿಯೇ ತೊಡಗಿಕೊಂಡು, ಜೀವನ ನಡೆಸುತ್ತಿದ್ದಾರೆ. ಠಿಕ್ರು ಪುಟ್ಟು ಮರಾಠಿ ಹಾಗೂ ಗೋಪಿ ಮರಾಠಿ ದಂಪತಿಗಳ ಎರಡನೆಯ ಮಗಳಾದ ಓಮಿ ಅಕ್ಷರವನ್ನು ಕಲಿತವಳಲ್ಲ. ಮನೆಯಲ್ಲಿಯೂ ಕಡುಬಡತನ. ತಂದೆ-ತಾಯಿಗಳಿಗೂ ವಯಸ್ಸಾದ ಕಾರಣ ಆಕೆ ಜಮೀನು ಸಾಗುವಳಿ ಮಾಡಲು ಮುಂದಾದಳು. ಜೀವನ ನಡೆಸಬೇಕೆಂಬ ಆಶಯದಿಂದ ಸಂಸಾರದ ನೊಗಕ್ಕೆ ಹೆಗಲೂರಿದ ಓಮಿ ಮರಾಠಿ, ಕೆಸರು ಗದ್ದೆಗಿಳಿದು ದುಡಿಯುವುದು ಅನಿವಾರ್ಯವಾಯಿತು.

ತಂದೆ ಠಿಕ್ರು ಮರಾಠಿ ಸಾಗುವಳಿ ಮಾಡುತ್ತಿದ್ದ ಸುಮಾರು ಮೂರೂವರೆ ಎಕರೆ ಗದ್ದೆಯನ್ನು ನಾಟಿ ಮಾಡಲು ಓಮಿ ಮರಾಠಿ ಮುಂದಾದಳು. ಗದ್ದೆ ಹೂಡಲು, ಹಾಳಿ ಕಡಿಯಲು ಆಳುಗಳನ್ನು ಹಚ್ಚಿ ಮಾಡಲು ಸಾಮರ್ಥ್ಯವಿಲ್ಲದ ಕಾರಣ, ಆ ಕೆಲಸಗಳನ್ನು ತಾನೇ ಮಾಡಲು ಉತ್ಸಾಹ ತೋರಿದಳು. ಓಮಿಯೂ ಕೆಸರು ಗದ್ದೆಗಿಳಿದು ಗಳಿಯವನ್ನು ಕಟ್ಟಿ, ನೇಗಿಲು ಹಿಡಿದು ಹೈ... ಹೈ... ಎಂದಾಗ ಊರಿನವರಿಗೂ ಆಶ್ಚರ್ಯ!! ಅಕ್ಕಪಕ್ಕದಲ್ಲಿ ಗದ್ದೆಯ ಕೆಲಸದಲ್ಲಿ ತೊಡಗಿಕೊಂಡ ಪುರುಷ ರೈತರು ಓಮಿಯ ಸಾಹಸ, ಧೈರ್ಯ, ಛಲಕ್ಕೆ ಮೆಚ್ಚಿ ಪ್ರಶಂಸಿದರು.

ಓಮಿ ಮರಾಠಿಯು ಈಗ ಗದ್ದೆಯ ಹೂಟೆಯ ಕೆಲಸದಲ್ಲಿ ಸಾಕಷ್ಟು ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದಾಳೆ. ಈಕೆ ಮುಂಜಾನೆ ಎಂಟು ಗಂಟೆಗೆ ಗಳಿಯವನ್ನು ಕಟ್ಟಿದರೆ, ಮಧ್ಯಾಹ್ನ ಒಂದು ಗಂಟೆಯವರೆಗೂ ಗದ್ದೆಯನ್ನು ಹೂಡುತ್ತಾಳೆ. ಜತೆಗೆ, ಮಧ್ಯಾಹ್ನದ ಮೇಲೆ ಹಾಳಿಯನ್ನು ಕಡಿಯುವ ಕೆಲಸದಲ್ಲಿ ತಲ್ಲೀನ. ಗದ್ದೆಗೆ ಗೊಬ್ಬರ ಹೊರುವಾಗ, ಅಗೆ ಕೀಳಲು ಹಾಗೂ ನೆಡುವ... ಇತ್ಯಾದಿ ಕೆಲಸಗಳಿಗೆ ಮಾತ್ರ ಮುಯ್ಯಾಳುಗಳನ್ನು ಪಡೆಯುವ ಓಮಿ ಮರಾಠಿ, ಉಳಿದ ಎಲ್ಲಾ ಕೆಲಸಗಳನ್ನು ತಾನೇ ನಿರ್ವಹಿಸುತ್ತಾಳೆ. ತನ್ನ ಜಮೀನಿನಲ್ಲಿ ಶ್ರದ್ಧೆ, ನಿಷ್ಠೆಯಿಂದ ದುಡಿಯುವ ಅವಳು ಸುಮಾರು ೩೦ ಚೀಲ ಭತ್ತ, ಇಳುವರಿಯನ್ನು ಪಡೆಯುತ್ತಾಳೆ. ಕೃಷಿ ಭೂಮಿಯಲ್ಲಿ ದುಡಿಯುವವರೇ ವಿರಳವಾಗುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಸರು ಗದ್ದೆಯಲ್ಲಿಯೇ ಮೈ-ಮುರಿದು ದುಡಿದು, ಸಂಸಾರದ ನೌಕೆಯನ್ನು ಸಾಗಿಸುತ್ತಿರುವ ಓಮಿ ಮರಾಠಿಯ ಸಾಹಸ ಇತರೆ ಮಹಿಳೆಯರಿಗೆ ಪ್ರೇರಣೆಯಾಗಿದೆ.

– ಗಣಪತಿ ಹಾಸ್ಪುರ (ಸಾಭಾರ : ಸಿರಿಸಮೃದ್ಧಿ)

ಶಿಕ್ಷಣ ಕುರಿತು ವಿವಿಧ ದೇಶಗಳ ಅಭಿಪ್ರಾಯಗಳು

"ನಾವೆಲ್ಲರೂ ಒಂದೇ ಪ್ರಪಂಚದ ಪ್ರಜೆಗಳು, ಒಂದೇ ರಕ್ತವನ್ನು ಹಂಚಿಕೊಂಡಿರುವವರು. ಓರ್ವ ವ್ಯಕ್ತಿ ಇನ್ನೊಂದು ದೇಶದಲ್ಲಿ ಜನಿಸಿದ್ದಾನೆ, ಇನ್ನೊಂದು ಭಾಷೆ ಮಾತನಾಡುತ್ತಿದ್ದಾನೆ ಅಥವಾ ವಿಭಿನ್ನ ವಿಚಾರವನ್ನು ಹೊಂದಿದ್ದಾನೆ ಎಂಬ ಕಾರಣಕ್ಕೆ ಅವನನ್ನು ದ್ವೇಷಿಸುವುದು ಅತ್ಯಂತ ದೊಡ್ಡ ತಪ್ಪು... ಇಡೀ ಮಾನವಕುಲದ ಕಲ್ಯಾಣ ನಮ್ಮೆಲರ ಗುರಿಯಾಗಲಿ."

– ***ಜಾನ್ ಅಮೋಸ್ ಕೊಮನಿಯಸ್*** (೧೫೯೨–೧೬೭೦; ಜೆಕ್ ರಿಪಬ್ಲಿಕ್)

"ಮನುಷ್ಯ ಯಾವುದು ಸರಿಯೋ ಅದನ್ನು ಹುಡಕಬೇಕು; ಸಂತೋಷ ತನ್ನಷ್ಟಕ್ಕೆ ತಾನೇ ಬರುತ್ತದೆ."

– ***ಜೋಹಾನ್ ಹೆನ್ರಿಚ್ ಪೆಸ್ಟಲೋಜಿ*** (೧೭೪೬–೧೮೨೭; ಜ್ಯೂರಿಚ್)

"ಮಾನವ ಜಗತ್ತಿನಲ್ಲಿ ಮಗುವಿನ ಮನಸ್ಸು ನಿರಂತರವಾಗಿ ಚಿಮ್ಮುವ ಕಾರಂಜಿಯಾಗಿದೆ."

– ***ಫ್ರೆಡ್ರಿಕ್ ವಿಲ್‌ಹೆಲ್ಮ್ ಆಗಸ್ಟ್ ಫ್ರೋಬೆಲ್*** (೧೭೮೨–೧೮೫೨; ಜರ್ಮನಿ)

"ಶಿಕ್ಷಣವೆಂದೂ ಬಲಪ್ರಯೋಗದಿಂದಾಗಬಾರದು. ಶಿಕ್ಷಕ ಮತ್ತು ವಿದ್ಯಾರ್ಥಿ ಒಟ್ಟಿಗೆ ಕಲಿಯುವ, ಶಿಕ್ಷಕ ವಿದ್ಯಾರ್ಥಿಯ ಅಂತಃಶಕ್ತಿಯನ್ನು ಹೊರಗೆಳೆಯುವ ಮತ್ತು ವಿದ್ಯಾರ್ಥಿ ತನಗಿಂತ ಹೆಚ್ಚಿನದನ್ನು ಸಾಧಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸುವ ಪ್ರಕ್ರಿಯೆಯೇ ಶಿಕ್ಷಣದ ತಿರುಳು."

– ***ಸುನೆಸಾಬುರೊ ಮಕಿಗುಚಿ*** (೧೮೭೧–೧೯೪೪; ಜಪಾನ್)

"ಶಿಕ್ಷಣವೆಂದರೆ ದೀಪವನ್ನು ಬೆಳಗಿಸುವುದೇ ಹೊರತು, ಕೊಡವನ್ನು ತುಂಬುವುದಲ್ಲ."

– ***ಸಾಕ್ರೆಟಿಸ್*** (ಕ್ರಿ.ಪೂ ೪೭೦–೩೯೯; ಅಥೆನ್ಸ್ ಗ್ರೀಸ್)

"ಶಿಕ್ಷಣ ವಿಧಾನ ಸರಿಯದೆ ಎನ್ನಲು ಇರುವ ಒಂದೇ ಒಂದು ಪರೀಕ್ಷೆ ಎಂದರೆ ಮಗುವಿನ ಸಂತೋಷ."

– ***ಡಾ. ಮರಿಯಾ ಮಾಂಟೆಸೊರಿ*** (೧೮೭೦–೧೯೫೨; ಇಟಲಿ)

"ಎಲ್ಲಾ ದೇಶಗಳಿಗೆ ಒಂದೇ ರೀತಿಯ ಶಿಕ್ಷಣವಿರಲು ಸಾಧ್ಯವಿಲ್ಲ. ಪ್ರತಿಯೊಂದು ದೇಶವೂ ತನ್ನದೇ ಆದ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಇತರ ದೇಶಗಳ ಅನುಭವಗಳು ನಮಗೆ ಅಮೂಲ್ಯವಾದ ಪಾಠಗಳಾಗಬಹುದು; ಆದರೆ ಅದನ್ನು ಪ್ರತಿಯೊಂದು ದೇಶ ತಾನೇ ಪ್ರಯತ್ನಿಸದೆ ಇತರ ದೇಶಗಳ ಅತ್ಯುತ್ತಮ ಉದಾಹರಣೆಗಳನ್ನು ಸಹ ಅಂಗೀಕರಿಸಲಾಗದು."

– ***ಕಾನ್ಸ್ಟಂಟಿನ್ ಡಿಮಿಟ್ರವಿಚ್ ಉಶಿನ್‌ಸ್ಕಿ*** (೧೮೨೪–೧೮೭೧; ರಷ್ಯಾ)

"ದೀಪವೊಂದು ತಾನು ಉರಿಯದೆ ಜಗಕೆ ಬೆಳಕನ್ನು ನೀಡಲಾಗುವುದಿಲ್ಲ. ಅಂತೆಯೇ ಶಿಕ್ಷಕನೊಬ್ಬ ತಾನು ಹೊಸ ಹೊಸ ವಿಷಯಗಳನ್ನು ಅರಿತು, ತನ್ನ ವಿದ್ಯಾರ್ಥಿಗಳಿಗೆ ನೀಡದೆ ಹೋದರೆ ಅವನನ್ನು ಶಿಕ್ಷಕನೆನ್ನಲಾಗುವುದಿಲ್ಲ."

– ***ರವೀಂದ್ರನಾಥ ಟಾಗೋರ್*** (೧೮೬೧–೧೯೪೧; ಕಲ್ಕತ್ತಾ)

ಶಿಕ್ಷಕರ ವೃತ್ತಿಯ ಆಸ್ತಿಯೆಂದರೆ ಮಗುವಿನಂತೆ ಇರುವ, ಕ್ರಿಯಾಶೀಲನಾಗಿರುವ, ಸದಾ ಹಸನ್ಮುಖಿಯಾಗಿರುವ ಮತ್ತು ಯಾವುದೇ ಉಪಯುಕ್ತ ಯೋಜನೆಯಲ್ಲಿ ತೊಡಗಲು ಸದಾ ಸಿದ್ಧವಿರುವ ಸಾಮರ್ಥ್ಯವಾಗಿದೆ."

– ***ಆಂಟನ್ ಸೇಮ್ಸ್‌ನೋವಿಚ್ ಮಕರೆಂಕೊ*** (೧೮೮೮–೧೯೩೯; ರಷ್ಯಾ)

"ಹಿಂದಿನ ಜನಾಂಗಗಳಿಂದ ಬೆಳೆದು ಬಂದ ಉನ್ನತ ಆದರ್ಶಗಳು ಮತ್ತು ನೈತಿಕ ಮೌಲ್ಯಗಳ ಆಧಾರದ ಮೇಲೆ ಮಕ್ಕಳಲ್ಲಿ ನಿಜವಾದ ನೈತಿಕ ಮತ್ತು ನಾಗರೀಕ ಸಂಬಂಧಗಳನ್ನು ಬೆಳೆಸುವುದು ಶಾಲಾ ಶಿಕ್ಷಣದ ಕರ್ತವ್ಯವಾಗಿದೆ."

– ***ವ್ಯಾಸಿಲಿ ಅಲೆಕ್ಸಾಂಡ್ರೋವಿಚ್ ಸುಕೋಮಲಿನ್‌ಸ್ಕಿ*** (೧೯೧೮–೧೯೭೦; ರಷ್ಯಾ)

"ಅತ್ಯುತ್ತಮ ಕಲಿಕೆ ಸಾಧ್ಯವಾಗುವುದು ಉತ್ತಮ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ನೇರ ಮತ್ತು ವೈಯಕ್ತಿಕ ಸಂಬಂಧವಿದ್ದಾಗ ಮಾತ್ರ. ಅಂದರೆ ವಿದ್ಯಾರ್ಥಿ ವಿಷಯಗಳ ಬಗ್ಗೆ ಚಿಂತಿಸುವ ಮತ್ತು ಶಿಕ್ಷಕನ ಜೊತೆಗೆ ವಿಚಾರಗಳ ಬಗ್ಗೆ ಚರ್ಚಿಸುವಂತಹ ಪರಿಸ್ಥಿತಿ ಇದ್ದಾಗ ಮಾತ್ರ."

– ***ರಿಚರ್ಡ್ ಪ್ಲೇನ್‌ಮನ್*** (೧೯೧೮–೧೯೮೮; ಅಮೇರಿಕಾ)

"ಏನನ್ನಾದರೂ ಮಾಡಲು ಆರಂಭಿಸಿ ವಿಫಲರಾದರೆ ನಿರಾಶರಾಗಬೇಡಿ. ಪ್ರತಿಬಾರಿ ವಿಫಲರಾಗಲೂ, ಪುನಃ ಮೊದಲಿನಿಂದ ಆರಂಭಿಸಿ. ನೀವು ಸದೃಢರಾಗುವಿರಿ ಮತ್ತು ನಿಮ್ಮ ಉದ್ದೇಶವನ್ನು ಖಚಿತವಾಗಿ ಸಾಧಿಸುವಿರಿ. ನೀವು ಸಾಧಿಸಲು ಹೊರಟ ಗುರಿಯನ್ನೇ ಮುಟ್ಟದಿರಬಹುದು. ಆದರೆ ಜೀವನಾದ್ಯಂತ ಸಂತೋಷದಿಂದ ನೆನೆಪಿಡುವಂತಹದನ್ನು ಸಾಧಿಸಬಹುದು."

– ***ಆನ್ ಸುಲಿವಾನ್*** (೧೮೬೬–೧೯೩೬; ಅಮೇರಿಕಾ)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನ ದಾರಿ ಕೇಂದ್ರವು ವಿಚಾರಗೋಷ್ಠಿಗಳನ್ನು, ಶಿಬಿರಗಳನ್ನು ನಡೆಸಲು ಯೋಗ್ಯವಾದ ಸ್ಥಳವೆಂದು ಅನೇಕ ಸಂಘಸಂಸ್ಥೆಗಳಿಗೆ ಸಂಘಟನೆಗಳಿಗೆ ಅನುಭವಕ್ಕೆ ಬರುತ್ತಿದೆ. ಆದ್ದರಿಂದ ಆಗಾಗ್ಗೆ ಅಲ್ಲಿ ಅಂಥ ಕಾರ್ಯಕ್ರಮಗಳು ನಡೆಯುವುದುಂಟು. ಇತ್ತೀಚಿಗೆ ವಿಶಿಷ್ಟ ವೈಚಾರಿಕ ಕಾರ್ಯಾಗಾರ ನಡೆಯಿತು. ಅದರಲ್ಲಿ ಭಾಗವಹಿಸಿದ್ದವರು ವಿವಿಧ ವ್ಯವಸಾಯೋತ್ಪನ್ನ ಸಹಕಾರ ಸಂಘ ಮತ್ತು ಇತರೆಡೆಯಲ್ಲಿ ಮೂಟೆ ಹೊರುವ ಕೂಲಿ ಕಾರ್ಮಿಕರು. ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಸುಮಾರು ಮೂವತ್ತು ಕಾರ್ಮಿಕರು ಭಾಗವಹಿಸಿ ತಮಗಾಗುತ್ತಿರುವ ಸಾಮಾಜಿಕ ಆರ್ಥಿಕ ಅನ್ಯಾಯಗಳನ್ನು ಕುರಿತು ಆಲೋಚನೆ ಮಾಡಿದರು. ತಮ್ಮ ಸಂಘಟನೆಯನ್ನು ಬಲಪಡಿಸುವ ಬಗ್ಗೆಯೂ ಆಲೋಚಿಸಿದರು. ಈ ಕಾರ್ಮಿಕರು ಬಿಡುವು ಮಾಡಿಕೊಂಡು ಟ್ರಸ್ಟಿನ ಖಾದಿ ಭಂಡಾರಕ್ಕೆ ಭೇಟಿಕೊಟ್ಟು ಖಾದಿ ಖರೀದಿಸಿದರು.

ಟ್ರಸ್ಟಿನ ಅಭಿಮಾನಿಯಾದ ಶ್ರೀ ವಿ.ಎಸ್.ಶ್ರೀಧರ್ ಮತ್ತು ಕುಟುಂಬ ಟ್ರಸ್ಟಿಗೆ ಭೇಟಿ ನೀಡಿದರು.

ಗದುಗಿನ ಹಿರಿಯ ಖಾದಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹೂಗಾರ್‌ರವರು ಭೇಟಿಕೊಟ್ಟರು.

ಆದಿಚುಂಚನಗಿರಿಯ ಬಿ.ಜಿ.ಎಸ್ ಆಸ್ಪತ್ರೆಯ ವೈದ್ಯರುಗಳು ಟ್ರಸ್ಟಿಗೆ ಭೇಟಿಕೊಟ್ಟು ಮಕ್ಕಳ ದತ್ತು ವಿಭಾಗದ ಮಕ್ಕಳನ್ನು ನೋಡಿದರು. ಅದೇ ಆಸ್ಪತ್ರೆಯಿಂದ ಬಂದಿರುವ ಅನಾಥ ಮಗುವನ್ನು ನೋಡಿದರು. ಆ ಮಗುವಿಗೆ ಕಲ್ಯಾಣಿ ಎಂದು ನಾಮಕರಣ ಮಾಡಲಾಗಿದೆ. ಮಗು ಆರೋಗ್ಯವಾಗಿರುವುದನ್ನು ನೋಡಿ ಸಂತೋಷಪಟ್ಟರು.

ರಂಗಭೂಮಿ ಕಲಾವಿದ ಮತ್ತು ಚಿಂತಕ ಶ್ರೀ ಪ್ರಸಾದ್ ರಕ್ಷಿದಿ ಕುಟುಂಬದೊಂದಿಗೆ ಭೇಟಿ ನೀಡಿದರು.

ಟ್ರಸ್ಟಿನ ಅಧ್ಯಕ್ಷರು ಮೈಸೂರಿನ ಕುವೆಂಪು ನಗರದಲ್ಲಿರುವ ಪ್ರಥಮದರ್ಜೆ ಕಾಲೇಜಿನಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿಯನ್ನು ಕುರಿತು ಹಾಗೂ ಮಾನಸ ಗಂಗೋತ್ರಿಯಲ್ಲಿ ಅರ್ಥಶಾಸ್ತ್ರ ಅಧ್ಯಾಪಕರ ಕಾರ್ಯಕ್ರಮದಲ್ಲಿ ಗಾಂಧೀ ಅರ್ಥಶಾಸ್ತ್ರ ಕುರಿತು ಮಾತನಾಡಿದರು. ವಿಜಯ ಕರ್ನಾಟಕ ದಿನಪತ್ರಿಕೆಯ ವಿಶೇಷ ಆಹ್ವಾನದ ಮೇರೆಗೆ ಯುವಕರೊಂದಿಗೆ ಸಂವಾದ ನಡೆಸಿದರು. ಆಗಸ್ಟ್ ೧೫ರಂದು ಬೆಂಗಳೂರಿನ ಕೆಂಗೇರಿಯಲ್ಲಿರುವ ಶೇಷಾದ್ರಿಪುರಂ ಕಾಲೇಜಿನ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಅಣ್ಣಾ ಹಜಾರೆಯವರ ಆಂದೋಲನಕ್ಕೆ ಸಮರ್ಥನೆ ನೀಡುವ ಮಂಡ್ಯ ಮತ್ತು ಮೈಸೂರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಹರಿಹರ ತಾಲ್ಲೂಕಿನ ೫೦ ಜನ ಸಹಜ ಕೃಷಿಕರು ಹೊಸ ಜೀವನ ದಾರಿಗೆ ಭೇಟಿ ನೀಡಿದರು. ಟ್ರಸ್ಟಿನ ಅಧ್ಯಕ್ಷರೊಂದಿಗೆ ಗ್ರಾಮ ಸ್ವರಾಜ್ಯದ ಅಗತ್ಯತೆಯ ಬಗ್ಗೆ ಚರ್ಚೆನಡಸಿದರು.

ದತ್ತು ವಿಭಾಗದಲ್ಲಿ ಸುಮಾರು ಒಂದು ವರ್ಷದಿಂದ ಇದ್ದ ಪ್ರಾರ್ಥನಾ ಎಂಬ ಮಗುವನ್ನು ಶ್ರೀಮತಿ ಉಮಾ ಸಂಡೂರು ಮತ್ತು ಶ್ರೀ ಉದಯ ಸಂಡೂರು ದತ್ತು ಸ್ವೀಕರಿಸಿದರು. ಅಂದಿನ ಸರಳ ಸಮಾರಂಭದಲ್ಲಿ ಈ ಯೋಜನೆಗೆ ಸಹಾಯ ಮಾಡುತ್ತಿರುವ ಮೈಸೂರಿನ ಇನ್ಫೋಸಿಸ್ ಕಂಪನಿಯ ಕೆಲ ಯುವ ಸಿಬ್ಬಂದಿ ಭಾಗವಹಿಸಿದ್ದರು. ಮಂಡ್ಯ ಜಿಲ್ಲಾ ಮಕ್ಕಳ ಕ್ಷೇಮ ಸಮಿತಿಯ ಸದಸ್ಯೆ, ವಕೀಲೆ ಶ್ರೀಮತಿ ಬೃಂದಾ ಸಹ ಬಂದಿದ್ದರು.

ಜನಪದ ನಿಲಯದ ಅಂತರಂಗದಲ್ಲಿ.. ೯೪

– ಸುರೇಂದ್ರ ಕೌಲಗಿ



ನಿಮಗೆ ತಿಳಿದಿರುವಂತೆ 'ಜನಪದ ವಿಚಾರ' ತನ್ನ ಪ್ರಕಟಣೆಯ ಹನ್ನೆರಡನೆ ವರ್ಷಕ್ಕೆ ಕಾಲಿಟ್ಟಿದೆ. ಜನಪದ ವಿಚಾರ ಪ್ರಕಟವಾಗುವ ಮುನ್ನ ಅದು 'ಜನಪದ ಸೇವಾ' ಎಂಬ ಹೆಸರಿನಲ್ಲಿ ದ್ವೈಮಾಸಿಕ ವಾರ್ತಾ ಪತ್ರವಾಗಿ ಪ್ರಕಟವಾಗಿ ಪ್ರಕಟಗೊಳ್ಳುತ್ತಿತ್ತು. ಇದು ೧೯೯೨ರಲ್ಲಿಯ ಸಂಗತಿ. ಅಂದರೆ ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. 'ಜನಪದ ಸೇವಾ' 'ಜನಪದ ವಿಚಾರ'ವಾಗಿ ರೂಪಾಂತರಗೊಂಡ ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ದೇಶ ಹಾಗೂ ಜಗತ್ತಿನಲ್ಲಿ ಬಹಳಷ್ಟು ಏರುಪೇರುಗಳಾಗಿವೆ, ಮಾರ್ಪಾಡುಗಳಾಗಿವೆ. ಅದೇ ರೀತಿ ಟ್ರಸ್ಟಿನ ಬೆಳವಣಿಗೆಯಲ್ಲಿಯೂ ಅನೇಕ ಸ್ಥಿತ್ಯಂತರಗಳಾಗಿವೆ.

ಟ್ರಸ್ಟಿನಲ್ಲಿ ಸಂಭವಿಸಿದ ಕೆಲ ಘಟನೆಗಳು ಜ್ಞಾಪಕಕ್ಕೆ ಬರುವುದಕ್ಕೆ ಆಕಸ್ಮಿಕವಾಗಿ ಸಿಗುವ ಕೆಲವು ಪತ್ರಗಳು ದಾಖಲೆಗಳು ಮತ್ತು ಟ್ರಸ್ಟಿನ ಪ್ರಕಟಣೆಗಳು ಕಾರಣವಾಗುತ್ತವೆ. ಆ ದಾಖಲೆಗಳನ್ನು ನೋಡಿದಾಗ ಗತಿಸಿಹೋದ ಸಂಗತಿಗಳು ಹಾಗೂ ವ್ಯಕ್ತಿಗಳು ಮತ್ತು ಕೆಲ ಘಟನೆಗಳು ನೆನಪಾಗುತ್ತವೆ. ಅವುಗಳಲ್ಲಿ ಕೆಲವು ಕಹಿ ನೆನಪಾದರೆ ಇನ್ನು ಕೆಲವು ಸಿಹಿಯಾಗಿರುತ್ತವೆ. ಅಲ್ಲದೆ ಕೆಲವು ಕಹಿ-ಸಿಹಿ ಮಿಶ್ರಿತ ನೆನಪಾಗಿರುತ್ತವೆ. ಈ ಮಾತುಗಳನ್ನು ಬರೆಯುವುದಕ್ಕೆ ಪ್ರೇರಣೆಯಾದದ್ದು ಇಪ್ಪತ್ತು ವರ್ಷಗಳ ಹಿಂದೆ ಪ್ರಕಟವಾಗಿದ್ದ 'ಜನಪದ ಸೇವಾ'ದ ಒಂದನೇ ಸಂಪುಟದ ಮೂರನೇ ಸಂಚಿಕೆ ಕೈಗೆ ದೊರೆತದ್ದು. ಆ ಪತ್ರಿಕೆ ಕ್ರೌನ್ ಅಷ್ಟಾಕಾರದಲ್ಲಿದೆ. ಭದ್ರಾವತಿಯ ಮೈಸೂರು ಪೇಪರ್ಸ್ ಕಂಪನಿಯಲ್ಲಿ ತಯಾರಾದ ಸಾಮಾನ್ಯ ಕಾಗದದ ಮೇಲೆ ಮುದ್ರಿತವಾಗಿದೆ. ಮುದ್ರಣವಾದದ್ದು ಟ್ರಸ್ಟಿನ ಮುದ್ರಣಾಲಯದಲ್ಲಿ. ಅಕ್ಷರಗಳ ಜೋಡಣೆ ಮುದ್ರಣ ಇತ್ಯಾದಿ ಎಲ್ಲವೂ ಶಾರೀರಿಕ ಶ್ರಮದಿಂದಲೇ ಆದುದು. ಈ ಪತ್ರಿಕೆಯನ್ನು ನೋಡುತ್ತಾ ಇದ್ದ ಹಾಗೆ ಆಗ ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಹನುಮಂತ, ಮಹಾದೇವ, ನಂಜಪ್ಪ, ನಾಗಪ್ಪ, ದೇವಮ್ಮ, ದೇವಕಿ, ಶಕುಂತಲಮ್ಮ ಮತ್ತು ಇನ್ನು ಅನೇಕ ಮಹಿಳಾ ಕಾರ್ಯಕರ್ತರ ನೆನಪಾಗುತ್ತದೆ. ಈ ಮುದ್ರಣಾಲಯದಲ್ಲಿ ತರಬೇತಿ ಮತ್ತು ಅನುಭವ ಪಡೆದ ನಂತರ ಬೇರೆ ಕಡೆ ಕೆಲಸಕ್ಕೆ ಹೋದವರು ಅನೇಕರು. ಮೇಲ್ಕಾಣಿಸಿದ 'ಜನಪದ ಸೇವಾ'ದ ಮುಖಪುಟದಲ್ಲಿ ಕರುಣಾಗೃಹದ ಹಳೆಯ ವಿದ್ಯಾರ್ಥಿ ನಂತರ ಟ್ರಸ್ಟಿನ ಧರ್ಮದರ್ಶಿಯಾಗಿದ್ದ ಶ್ರೀ ಪಿ.ಎಲ್.ಕುಮಾರಸ್ವಾಮಿಯವರ ಚಿತ್ರವಿದೆ. ವೀಲ್‌ಛೇರ್ ಮೇಲೆ ಕಾಲು ಮಡಚಿ ಕುಳಿತಿದ್ದಾರೆ. ಆದರೆ ಎದೆ ಮತ್ತು ಮುಖ ನೇರವಾದ ಭಂಗಿಯಲ್ಲಿ ಇದೆ. ದಿಟ್ಟತನದ

ಛಾಯೆ ಮುಖದಲ್ಲಿದೆ. ಈ ಚಿತ್ರವನ್ನು ನೋಡುತ್ತಿದ್ದಂತೆ ಅವರು ಹತ್ತನೇ ವಯಸ್ಸಿನಲ್ಲಿ ತಮ್ಮ ತಾಯಿಯೊಂದಿಗೆ ಕರುಣಾಗೃಹಕ್ಕೆ ಸೇರಿಕೊಂಡ ಘಟನೆ ಜ್ಞಾಪಕಕ್ಕೆ ಬರುತ್ತದೆ. ಕಲಿಯಬೇಕು, ಕೆಲಸಮಾಡಬೇಕು ಎಂಬ ಉತ್ಸಾಹದ ಮನೋಭಾವ ಪಿ.ಎಲ್. ಕುಮಾರಸ್ವಾಮಿಯವರಲ್ಲಿ ಸಹಜವಾಗಿ ಇದ್ದಿತು. ಆ ಸ್ವಭಾವ ಅವರ ತಾಯಿಯಿಂದ ಬಂದ ಬಳುವಳಿ. ಆದ್ದರಿಂದ ಅಂದಿನ ಕರುಣಾಗೃಹದ ಮನೆ ಮತ್ತು ಅಲ್ಲಿಯ ವ್ಯವಸ್ಥೆ ಅಂಗವಿಕಲ ಕಾರ್ಯಕ್ರಮಕ್ಕೆ ಎಳ್ಳಷ್ಟೂ ಅನುಕೂಲವಾಗಿರಲಿಲ್ಲ. ಪ್ರತಿಯಾಗಿ ಅನಾನುಕೂಲಗಳೇ ಹೆಚ್ಚಾಗಿದ್ದವು. ಆದರೂ ಕೂಡ ಕುಮಾರಸ್ವಾಮಿಯವರಿಗೆ ಕರುಣಾಗೃಹಕ್ಕೆ ಬಂದದ್ದು ಅತೀವ ಸಂತೋಷವನ್ನು ಉಂಟುಮಾಡಿತು. ಇದುವರೆಗೆ ದೊರೆಯದೆ ಇದ್ದ ಅವಕಾಶಗಳು ತನಗೆ ಲಭ್ಯವಾಗಲಿವೆ ಎಂಬ ಮನೋಭಾವ ಅವರಲ್ಲಿ ಮೂಡಿತು. ಈ ಮನೋಭಾವ ಅವರ ಕಣ್ಮಿಂಚಿನಲ್ಲಿ ಎದ್ದು ಕಾಣುತ್ತಿತ್ತು. ಅವರಲ್ಲಿ ನಾಯಕತ್ವದ ಗುಣಗಳು ಇದ್ದುದರಿಂದ ಸಹಜವಾಗಿ ಅಂದಿನ ಕರುಣಾಗೃಹದ ದೈನಂದಿನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಲಾರಂಭಿಸಿದರು. ಬೇರೆಯವರಿಗೆ ಸಹೋದರನಾಗಿ ಮಾರ್ಗದರ್ಶಕನಾಗಿ ಕೆಲಸ ಮಾಡಲು ಆರಂಭಿಸಿದರು. ಅವರಲ್ಲಿ ತೋಟಗಾರಿಕೆ ಬಗ್ಗೆ ಆಸಕ್ತಿಯಿತ್ತು. ಆದ್ದರಿಂದ ಕರುಣಾಗೃಹದ ಹಿತ್ತಲು ವಿವಿಧ ತರಕಾರಿ ಪಾತಿಗಳಿಂದ ಕಂಗೊಳಿಸಲಾರಂಭಿಸಿತು. ಚಿಕ್ಕ ಹಿತ್ತಲಲ್ಲಿ ಅವರು ಮಾಡಿದ ಪರಿಶ್ರಮ ಮತ್ತು ಅನುಭವವೇ ಮುಂದೆ ಟ್ರಸ್ಟಿನ ಈಗಿನ ಹೊಸ ಜೀವನ ದಾರಿ ಕೇಂದ್ರಕ್ಕೆ ಕಾರಣವಾಯಿತು. ಆ ಕೇಂದ್ರ ಪ್ರಾರಂಭವಾದ ಮೇಲೆ ಅಲ್ಲಿ ಕೂಡ ತಮ್ಮ ನಾಯಕತ್ವದ ಗುಣಗಳನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸಿದರು. ಸಾಧ್ಯವಿಲ್ಲವೆಂದು ಅನಿಸುತ್ತಿದ್ದ ಹೊಸ ಜೀವನ ದಾರಿ ಯೋಜನೆ ಕೈಗೂಡಲು ಕುಮಾರಸ್ವಾಮಿ ಬಹಳಷ್ಟು ಕಾರಣರಾದರು. ಜನಪದ ಸೇವಾ ಟ್ರಸ್ಟ್ ತನ್ನ ಐವತ್ತು ವರ್ಷಗಳ ಕಾರ್ಯ ಸಾಧನೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಈ ಸಂದರ್ಭದಲ್ಲಿ ಜನಪದ ಸೇವಾ ವಾರ್ತಾ ಸಂಚಿಕೆಯ ಮೂಲಕ ಕುಮಾರಸ್ವಾಮಿಯವರನ್ನು ಪುನರ್ ಜ್ಞಾಪಿಸಿಕೊಳ್ಳಲು ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷವೆನಿಸುತ್ತದೆ. ಈಗ ಅವರು ನಮ್ಮ ಮಧ್ಯೆ ಇಲ್ಲವಾದರೂ ಅವರ ಜೀವನದ ಎರಡು ಕುಡಿಗಳಾದ ಸಪ್ತಮಿ, ಸಮಾವರ್ತ ಇಂದು ಪ್ರೌಢರಾಗಿದ್ದಾರೆ. ತಂದೆಯ ಸ್ವಭಾವವನ್ನು ಮೈಗೂಡಿಸಿಕೊಂಡಿರುವ ಅವರು ಕೂಡ ತಮ್ಮ ಭವಿಷ್ಯದ ಕಾರ್ಯಕ್ಷೇತ್ರಗದಲ್ಲಿ ಪ್ರಗತಿ ಸಾಧಿಸುವಂಥವರಾಗಿದ್ದಾರೆ. ಅವರ ಪತ್ನಿ ಸುಶೀಲಾ ಬದುಕಿನ ಸಮಸ್ಯೆ ಎದುರಿಸುತ್ತಾ ಮುನ್ನಡೆದಿದ್ದಾರೆ.

ಇದೇ 'ಜನಪದ ಸೇವಾ'ದ ಸಂಚಿಕೆಯಲ್ಲಿ ನಿವೇದನೆ ಎಂಬ ಶೀರ್ಷಿಕೆಯಲ್ಲಿ ಬರೆಯಲಾದ ಈ ಕೆಳಗೆ ಕಾಣಿಸಿದ ಮಾತುಗಳು ಇಂದಿನ ಸಂದರ್ಭದಲ್ಲೂ ಪ್ರಸ್ತುತವಾಗಿವೆ ಎಂಬುದು ತಿಳಿದು ಬರುತ್ತದೆ.

ನಿವೇದನೆ

ಕ್ವಿಟ್ ಇಂಡಿಯಾ ಚಳುವಳಿಯ ಸ್ವರ್ಣಮಹೋತ್ಸವವನ್ನು ದೇಶಾದ್ಯಂತ ಆಚರಿಸಲಾಯಿತು. ಈ ಬಗ್ಗೆ ಟ್ರಸ್ಟ್‌ಗೆ ವಿಶೇಷವಾದ ಹೆಮ್ಮೆ ಅನಿಸುತ್ತದೆ. ಏಕೆಂದರೆ ಈ ಚಳುವಳಿಯ ಮೂಸೆಯಲ್ಲಿ ಬೆಂದ ಕೆಲ ವ್ಯಕ್ತಿಗಳು ಟ್ರಸ್ಟಿನ ಧರ್ಮದರ್ಶಿಗಳಾಗಿದ್ದಾರೆ.

ಅಲ್ಲದೆ ಈ ಚಳುವಳಿಯ ಧ್ಯೇಯವಾಕ್ಯವಾಗಿದ್ದ 'ಮಾಡು ಇಲ್ಲವೆ ಮಡಿ' ಎಂಬುದು ಇಂದಿಗೂ ಟ್ರಸ್ಟಿನ ಕೆಲಸಗಳಿಗೆ ಪ್ರೇರಣೆಯ ಸೋತ್ರವಾಗಿದೆ. ಆದರೆ ಇದು ಕಷ್ಟದ ಸಂಗತಿಯಾಗುತ್ತಿರುವುದು ಖೇದದ ಸಂಗತಿ. ಏಕೆಂದರೆ ಐವತ್ತು ವರ್ಷಗಳ ಹಿಂದೆ ಇದ್ದ ವಿದ್ಯುತ್ ಸದೃಶ್ಯವಾದ ವಾತಾವರಣ ಇಂದಿಲ್ಲ.ಇಂದು ಎಲ್ಲವೂ ತಣ್ಣಗೆ, ನಿಧಾನ. ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಅದು ತಲೆಮಾರಿನ ಅಂತರದ ವಿಷಯಕ್ಕ ಸಂಬಂಧಿಸಿದ್ದು. ಆ ವಿಶಿಷ್ಟ ಚಳುವಳಿಯಲ್ಲಿ ಭಾಗವಹಿಸಿದ್ದ ಅನೇಕರು ಇಂದೂ ಇದ್ದಾರೆ. ಅವರಿಗೆ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಹೊಂದಿಕೊಳ್ಳುವುದು ಕಷ್ಟವಾಗುತ್ತಿದೆ. ಅವರ ಮನೋವೇದನೆ ಯಾರಿಗೂ ಅರ್ಥವಾಗುತ್ತಿಲ್ಲ. ಹೊಸ ತಲೆಮಾರಿನವರ ಜೀವನ ದೃಷ್ಟಿಕೋನಕ್ಕೂ ಹಿಂದಿನವರ ದೃಷ್ಟಿಕೋನಕ್ಕೂ ಬಹಳ ವ್ಯತ್ಯಾಸವಿರುವುದರಿಂದ ತಲೆಮಾರಿನ ಅಂತರ ಸ್ಪಷ್ಟವಾಗಿ ಗೋಚರಿಸುತ್ತಿದೆ. ವ್ಯಕ್ತಿಗಳ ಜೀವನದಲ್ಲಿ ಬರುವ ಸನ್ನಿವೇಶ ರಾಷ್ಟ್ರಗಳ ಜೀವನದಲ್ಲಿಯೂ, ಸಂಸ್ಥೆಗಳ ಜೀವನದಲ್ಲಿಯೂ ಬರುತ್ತದೆ. ಇದು ಪ್ರಕೃತಿಯ ಸಹಜ ನಿಯಮ. ಆದಾಗ್ಯೂ ಇಲ್ಲಿ ಕಾಡುತ್ತಿರುವ ಪ್ರಶ್ನೆ ಮೂಲಭೂತ ಮೌಲ್ಯಗಳಿಗೆ ಸಂಬಂಧಿಸಿದ್ದು. ಅಂದರೆ, ತಲೆಮಾರುಗಳು ಬದಲಾದಂತೆ ಈ ಮೌಲ್ಯಗಳೂ ಬದಲಾಗಬೇಕೆ ಎಂಬುದು. ಮೌಲ್ಯಗಳು ಸ್ಥಿರವೆಂದು ಭಾವಿಸುವುದಾದರೆ ಎರಡು ತಲೆಮಾರುಗಳಲ್ಲಿಯ ಹೊಂದಾಣಿಕೆ ನಿಜವಾಗಿಯೂ ಕಷ್ಟಕರವಾಗಕೂಡದು. ಆದರೆ ಇಂದು ನಮ್ಮ ಸಮಾಜ ಜೀವನದಲ್ಲಿ ಕಾಲ ಉರುಳಿದಂತೆ ಮೌಲ್ಯಗಳೂ ಬದಲಾಗುತ್ತಿರುವುದು ನಮಗೆ ಅನುಭವವಾಗುತ್ತಿದೆ. ಇದೇ ಅತ್ಯಂತ ಆಘಾತಕಾರಿಯಾದ ವಿಷಯವಾಗಿದೆ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ "ಮಾಡು ಇಲ್ಲವೆ ಮಡಿ" ಈ ಉದ್ಘೋಷ ಒಂದೇ ತಾರಕ ಮಂತ್ರವಾಗಿ ಕಾಣುತ್ತಿದೆ. ಮೂಲಭೂತ ಮೌಲ್ಯಗಳಿಗಾಗಿ ಹೋರಾಡುವ ಛಲವನ್ನು ಟ್ರಸ್ಟ್ ಸದಾಕಾಲ ಪಡೆದಿರಲೆಂಬ ಆಶಯ ನಿಮ್ಮದಾಗಿರಲೆಂಬುದು ನಮ್ಮ ನಿವೇದನೆ. (ಮುಂದುವರಿಯುವುದು...)

೨೦೧೧ – ಆಗಸ್ಟ್ ಮಾಹೆಯ ದಾನಿಗಳು

ಶ್ರೀ ಎಚ್.ಆರ್.ಸತ್ಯನಾರಾಯಣ,
ಶ್ರೀ ಎಂ.ಕೆ.ರಾಮಚಂದ್ರಶೆಟ್ಟಿ – ಮೈಸೂರು
ಶ್ರೀಮತಿ ಸೀತಾರತ್ನ,
ಶ್ರೀ ವಿ.ಎಸ್.ಶ್ರೀಧರ್,
ಶ್ರೀಮತಿ ಎಚ್.ಎನ್.ಶಮಂತ್,
ಶ್ರೀಮತಿ ಎಂ.ಕೆ.ಪಾರ್ವತಿದೇವಿ,
ಶ್ರೀ ಉದಯ ಮತ್ತು ಉಮಾ ಸಂಡೂರು – ಬೆಂಗಳೂರು
ಶ್ರೀ ರಮೇಶ್ ಕುಲಾಲ್ – ಮುಂಬಯಿ

ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

* * *

ಸರ್ವೋದಯ ಆಂದೋಲನದ ಮುನ್ನಡೆ

ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ಕಳೆದ ಐದು ತಿಂಗಳುಗಳಿಂದ ಭ್ರಷ್ಟಾಚಾರದ ವಿರುದ್ಧ ದೇಶದಾದ್ಯಂತ ಚಳುವಳಿ ನಡೆಯುತ್ತಿದೆ. ಈ ಚಳುವಳಿಯಲ್ಲಿ ಕರ್ನಾಟಕ ಮಂಡಲ ಅಧ್ಯಕ್ಷರು, ಹಿರಿಯ ನಾಯಕರಾದ ಶ್ರೀ ಹೆಚ್.ಎಸ್. ದೊರೆಸ್ವಾಮಿಯವರು ಮತ್ತು ದಕ್ಷಿಣ ಕನ್ನಡ, ಮಂಗಳೂರು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಗಳ ಸದಸ್ಯರು ಪ್ರತಿಭಟನಾ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಚಳುವಳಿಯ ಬೆಳವಣಿಗೆಯನ್ನು ಗಮನಿಸುತ್ತ ಸೂಕ್ತವಾದ ರೀತಿಯಲ್ಲಿ ಸರ್ವೋದಯ ಕಾರ್ಯಕರ್ತರು ಈ ಚಳುವಳಿಯಲ್ಲಿ ಭಾಗವಹಿಸುವರು. ಅಖಿಲ ಭಾರತ ಸರ್ವೋದಯ ಮಂಡಲಿಯ ಅಧ್ಯಕ್ಷೆಯಾದ ರಾಧಾಭಟ್‌ರವರು ಸಹ ದೆಹಲಿಯಲ್ಲಿ ಉನ್ನತ ಮಟ್ಟದ ಚರ್ಚೆಯಲ್ಲಿ ಭಾಗವಹಿಸಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಕರ್ನಾಟಕದ ಬೇರೆ ಜಿಲ್ಲೆಗಳಲ್ಲಿ ಮತ್ತು ವಿವಿಧ ತಾಲ್ಲೂಕುಗಳಲ್ಲಿ ಸರ್ವೋದಯ ಮಿತ್ರ ಮಂಡಲಿಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಈ ಸಂಬಂಧವಾಗಿ ಒಳ್ಳೆಯ ಸಹಕಾರ ದೊರೆಯುತ್ತಿದೆ.

ಸರ್ವೋದಯ ಪೋಷಕರು

ಸರ್ವೋದಯ ಆಂದೋಲನದ ಪೋಷಕರಾಗಿ ಇದುವರೆಗೆ ಒಂಭತ್ತು ಜನರು ತಲ ಒಂದು ಸಾವಿರ ರುಪಾಯಿ ಕೊಟ್ಟು ಪೋಷಕರಾಗಿದ್ದಾರೆ. ಅವರ ವಿವರಗಳು ಈ ರೀತಿ ಇವೆ.

೧. ಶ್ರೀ ಪಿ.ಟಿ.ಕೃಷ್ಣ ಅಯ್ಯಂಗಾರ್ – ಮೇಲುಕೋಟೆ
೨. ಶ್ರೀ ಕೆ.ಎಸ್.ನಾರಾಯಣ ಅಯ್ಯಂಗಾರ್ – ಮೇಲುಕೋಟೆ
೩. ಶ್ರೀ ಉಮಾಕಾಂತ ಭಟ್ಟರು – ಮೇಲುಕೋಟೆ
೪. ಶ್ರೀ ಸಿ.ಆರ್.ಮಂಜುನಾಥ್ – ಮಂಡ್ಯ
೫. ಡಾ॥ ತಿಮ್ಮಯ್ಯ – ರಾಮನಗರ
೬. ಶ್ರೀ ವೆಂಕಟೇಶ್ – ಬೆಂಗಳೂರು
೭. ಡಾ ॥ ಸಹನಾ – ಬೆಂಗಳೂರು
೮. ಶ್ರೀ ಉದಯ ಸಂಡೂರು – ಬೆಂಗಳೂರು
೯. ನಾಗಮಂಗಲ ಕೃಷ್ಣಮೂರ್ತಿ – ಮಂಡ್ಯ

ನಮ್ಮೆಲ್ಲರಿಗೂ ನಮ್ಮದೇ ಆದ ಪರಿವಾರದ ಚಿಂತೆ ಮತ್ತು ಜವಾಬ್ದಾರಿಗಳು ಇದ್ದೇ ಇರುತ್ತವೆ. ಆದರೆ ನಮ್ಮ ಕುಟುಂಬದ ಆಚೆಗೆ ವಿಸ್ತಾರವಾದ ಸಮಾಜವಿದೆ. ಈ ವಿಸ್ತಾರ ಸಮಾಜದ ಹಿತದಲ್ಲಿಯೇ ನಮ್ಮ ಕುಟುಂಬದ ಹಿತವೂ ಅಡಗಿದೆ. ಒಟ್ಟು ಸಮಾಜದ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಸರ್ವೋದಯ ಸಮಾಜ ರಚನೆಯ

ಕ್ರಾಂತಿಗಾಗಿ ನೀವು ಸಹ ನಿಮ್ಮ ಆತ್ಮೀಯರ ಹೆಸರಿನಲ್ಲಿ ಪೋಷಕರಾಗಿ, ನಿಮ್ಮ ಕುಟುಂಬದ ಹಿತವನ್ನು ಸಮಾಜದ ಹಿತದೊಂದಿಗೆ ಸಂಯೋಜಿಸಿಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗಾಗಿ ಸುರೇಂದ್ರ ಕೌಲಗಿ – ೦೮೨೩೬ ೩೧೬೩೪೪ ಮತ್ತು ಎಲ್.ನರಸಿಂಹಯ್ಯ – ೯೮೮೦೮೮೭೧೯೪ ಇವರನ್ನು ಸಂಪರ್ಕಿಸಬೇಕಾಗಿ ವಿನಂತಿ.

ಸರ್ವೋದಯ ಮಿತ್ರರು

ಜಿಲ್ಲಾ ಸರ್ವೋದಯ ಮಿತ್ರಮಂಡಲಿಗಳ ರಚನೆಯ ಅಂಗವಾಗಿ ರಚಿತವಾಗಿರುವ ಜಿಲ್ಲೆ ಮತ್ತು ಅಲ್ಲಿಯ ಸರ್ವೋದಯ ಮಿತ್ರರ ಸಂಖ್ಯೆ ಈ ರೀತಿ ಇದೆ.

೧. ಮಂಡ್ಯ ಜಿಲ್ಲೆ ಸರ್ವೋದಯ ಮಿತ್ರರ ಸಂಖ್ಯೆ – ೧೩
ಅಧ್ಯಕ್ಷರು – ಎಂ.ಬಿ.ಬೋರೇಗೌಡ – ಮಲ್ಲನಾಯಕನ ಕಟ್ಟೆ
ಸಂಚಾಲಕರು – ಕೆ. ನಾಗಾನಂದ – ಮಂಡ್ಯ

೧. ಉಡುಪಿ ಮಂಗಳೂರು ಸರ್ವೋದಯ ಮಿತ್ರರ ಸಂಖ್ಯೆ – ೨೦
ಅಧ್ಯಕ್ಷರು – ಹರಿಕೃಷ್ಣ ಪುನರೂರು – ಮುಲ್ಕಿ
ಸಂಚಾಲಕರು – ಕೆ. ಯಶವಂತ – ಮಂಗಳೂರು

೧. ಹಾಸನ ಜಿಲ್ಲೆ ಸರ್ವೋದಯ ಮಿತ್ರರ ಸಂಖ್ಯೆ – ೧೨
ಅಧ್ಯಕ್ಷರು – ಕೃಷ್ಣಸ್ವಾಮಿ – ಹಾಸನ
ಸಂಚಾಲಕರು – ಎಚ್.ಆರ್.ಮಂಜಪ್ಪಗೌಡ,
ಡಾ.ವೈ.ಎಸ್.ವೀರಭದ್ರಪ್ಪ – ಹಾಸನ

ಜನಪದ ವಿಚಾರ

ಕರ್ನಾಟಕ ರಾಜ್ಯದಲ್ಲಿಯ ಸರ್ವೋದಯ ಆಂದೋಲನ ಮತ್ತು ಗಾಂಧೀ ವಿಚಾರದ ಪತ್ರಿಕೆಯಾಗಿ ಜನಪದ ವಿಚಾರ ಮಾಸ ಪತ್ರಿಕೆ ಕಳೆದ ಹನ್ನೆರಡು ವರ್ಷಗಳಿಂದ ಪ್ರಕಟವಾಗುತ್ತಿದೆ. ಪ್ರತಿ ತಿಂಗಳೂ ಗಾಂಧೀ ವಿಚಾರ ಪ್ರೇಮಿ ಮತ್ತು ಸರ್ವೋದಯ ಸಿದ್ಧಾಂತದಲ್ಲಿ ಆಸಕ್ತಿಯಿರುವ ೪೦೦ ಜನ ಅಭಿಮಾನಿಗಳ ಕೈ ಸೇರುತ್ತಿದೆ. ನೀವು ಸಹ ಒಂದು ನೂರು ರುಪಾಯಿ ಕೊಟ್ಟು ಚಂದಾದಾರರಾಗಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗೆ,

ಜನಪದ ವಿಚಾರ
ಜನಪದ ಸೇವಾ ಟ್ರಸ್ಟ್
ಮೇಲುಕೋಟೆ – ೫೭೧೪೩೧
ಮಂಡ್ಯ ಜಿಲ್ಲೆ
ಮತ್ತು ದೂರವಾಣಿ ೦೮೨೩೬ – ೩೧೬೩೪೪/೨೯೯೮೫೪
ರಲ್ಲಿ ಸಂಪರ್ಕಿಸಿ.

* * *

ಖಾದಿ ವಿಚಾರ

ಗದಗ್ ಜಿಲ್ಲೆಯ ರೋಣದಲ್ಲಿ 'ಖಾದಿ ವರ್ಕರ್ಸ್ ಕೊ-ಆಪರೇಟಿವ್ ಪ್ರೊಡ್ಯೂಸರ್ಸ್ ಸೊಸೈಟಿ ಲಿಮಿಟೆಡ್,. ರೋಣ', ಇದು ೧೯೫೩ರಲ್ಲಿ ಸ್ಥಾಪಿತವಾಯಿತು. ೫೮ ವರ್ಷದಿಂದ ಖಾದಿ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಈ ಸಂಸ್ಥೆಯು ಗದಗ, ಮುನಿಗೇರಿ ಮುಂತಾದ ಊರುಗಳಲ್ಲಿ ಖಾದಿ ನೂಲಿನ ಉತ್ಪಾದನೆ ಮಾಡುತ್ತದೆ. ಸುಮಾರು ೮೦ಲಕ್ಷ ರುಪಾಯಿಗಳಿಂದ ಪ್ರಾರಂಭವಾದ ಈ ಸಂಸ್ಥೆಯಲ್ಲಿ ೧೫೦ ಜನ ನೂಲುಗಾರರು, ೫೦ ಜನ ನೇಕಾರರು, ಇತರ ಕೆಲಸಗಳಲ್ಲಿ ೧೦ ಜನರು, ಕಛೇರಿಯಲ್ಲಿ ೧೦ ಜನರು ಈ ರೀತಿ ೩೩೦ ಜನರು ಉದ್ಯೋಗ ಪಡೆದಿದ್ದಾರೆ. ಈಗ ಸಂಸ್ಥೆಯ ವಾರ್ಷಿಕ ಉತ್ಪಾದನೆ ಒಂದು ಕೋಟಿ ರುಪಾಯಿ ಮುಟ್ಟಿದೆ. ಈ ಸಂಸ್ಥೆಯು ಖಾದಿ ಲುಂಗಿ, ಟವೆಲ್, ಕರವಸ್ತ್ರ, ಜಮಖಾನ, ಖಾದಿಬಟ್ಟೆ ಇತ್ಯಾದಿ ಉತ್ಪನ್ನಗಳನ್ನು ತಯಾರಿಸುತ್ತಿದೆ. ಕಾರ್ಮಿಕರ ಕ್ಷೇಮನಿಧಿಯೆಂದು ಎಂಟು ಲಕ್ಷ ರುಪಾಯಿಗಳನ್ನು ಜಮಾ ಮಾಡುತ್ತಿದೆ. ಗದಗ್ ಮತ್ತು ರೋಣಗಳಲ್ಲಿ ಖಾದಿ ಭಂಡಾರವನ್ನು ಹೊಂದಿದೆ. ಈ ಸಂಸ್ಥೆಯ ಅಧ್ಯಕ್ಷರಾಗಿ ಆರ್.ವೈ.ಹೂಗಾರ್‌ರವರು ಕಳೆದ ೫೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರು ತಮ್ಮ ಇಪ್ಪತ್ತನೇ ವಯಸ್ಸಿನಲ್ಲೇ ಖಾದಿ ಕ್ಷೇತ್ರಕ್ಕೆ ಬಂದವರು.

* * *

ಗಾಂಧೀಜಿಯವರು ಕೇವಲ ಪಶ್ಚಿಮದ ಸಂಸ್ಕೃತಿಯ ವಿರುದ್ಧವಷ್ಟೆ ಇರಲಿಲ್ಲ. ಇಡೀ ಜಗತ್ತಿನ ಮೇಲೆ ಹೇರಲಾಗುತ್ತಿರುವ ಅಭಿವೃದ್ಧಿ ಸಿದ್ಧಾಂತಗಳ ವಿರುದ್ಧವೂ ನಿಂತಿದ್ದರು. ಹತ್ತೊಂಭತ್ತನೇ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಜಗತ್ತಿನಲ್ಲಿ ನಾಲ್ಕೂ ಕಡೆಗೆ ಆಧುನಿಕ ಅಭಿವೃದ್ಧಿಯ ಬಾವುಟ ಹಾರುತ್ತಿತ್ತು. ಪಶ್ಚಿಮದ ಔದ್ಯೋಗಿಕ ಕ್ರಾಂತಿಯ ನಂತರ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮಾಧ್ಯಮದಿಂದ ಜಗತ್ತಿನಲ್ಲಿ ವಸಾಹತುವಾದದ ಅಲೆಯೇ ಎದ್ದಿತು. ಅದರಲ್ಲಿ ಹಿಂದೂಸ್ತಾನದೊಂದಿಗೆ ಜಗತ್ತಿನ ಎಲ್ಲ ದೇಶಗಳ ಮೇಲೆ ಪಶ್ಚಿಮದ ದೇಶಗಳು ತಮ್ಮ ಹಿಡಿತವನ್ನು ಸಾಧಿಸಿದ್ದವು. ಇಂಥ ಪರಿಸ್ಥಿತಿಯಲ್ಲಿ ಭಾರತದಲ್ಲಷ್ಟೇಯಲ್ಲ, ಇಡೀ ಜಗತ್ತಿನಲ್ಲಿ ಆಧುನಿಕ ಅಭಿವೃದ್ಧಿಯ ಹೊಸ ಪರಿಭಾಷೆಗಳು ಸ್ಥಾಪಿತಗೊಂಡಿದ್ದವು. ಯಾರೂ ಕೂಡ ಇದನ್ನು ವಿರೋಧಿಸುವ ಸಾಹಸ ಮಾಡುವಂತೆ ಕಾಣುತ್ತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿ ಆಧುನಿಕ ನಾಗರೀಕತೆ ಮತ್ತು ವಿಜ್ಞಾನದ ಎಲ್ಲ ಸಾಧನಗಳನ್ನು ಹಾಗೂ ಹಂತಗಳನ್ನು ನಿರಾಕರಿಸುವ ಧೈರ್ಯ ಮಾಡುತ್ತಿದುದು ಕಂಡು ಬರುತ್ತದೆ. ಇದು ಅಪ್ಪರ ಮಟ್ಟಿಗೆ ಬಹುದೊಡ್ಡ ಮಾತು. ನಮಗೆ ಇಂದು ಪಶ್ಚಿಮದ ಸಭ್ಯತೆ ಮತ್ತು ಅಭಿವೃದ್ಧಿಯ ಸಂಕಟ ಕಂಡು ಬರುತ್ತಿವೆ. ಆದರೆ ಗಾಂಧೀಜಿಯವರಿಗಂತೂ ಈ ಸಂಕಟ ನೂರು ವರ್ಷ ಮೊದಲೇ ಕಂಡು ಬರುತ್ತಿದ್ದವು. ಆದ್ದರಿಂದ ಅವರು ಹಿಂದ್ ಸ್ವರಾಜ್‌ನಲ್ಲಿ

ಈ ಪಾಶವಿಕ ಸಭ್ಯತೆಯ ಬಗ್ಗೆ ಬರೆದರು. ನಿಸ್ಸಂದೇಹವಾಗಿ ಗಾಂಧೀಯವರ ಮೇರುದಂಡ ಭಾರತೀಯ ಸಭ್ಯತೆಯೇ ಆಗಿತ್ತು. ಆಧುನಿಕ ಅಭಿವೃದ್ಧಿ ಮತ್ತು ಅದರ ಅಳತೆಗಳನ್ನು ಪೂರ್ಣತಃ ನಿರಾಕರಿಸುತ್ತಾರೆ. ಅವು ಪಶ್ಚಿಮ ದೇಶಗಳದು ಎಂಬ ಕಾರಣಕ್ಕಾಗಿ ಅಲ್ಲ, ಅವು ಶೋಷಣೆಯ ಮೂಲಗಳಾಗಿವೆ ಎಂಬ ಕಾರಣಕ್ಕಾಗಿ. ಅವರು ಸಿದ್ಧಪಡಿಸಿದ ಸಾಧನ ಸುಸಂಸ್ಕೃತವಾಗಿದ್ದವು.

ಅನೇಕ ಸಾಮ್ಯವಾದಿಗಳು ಗಾಂಧೀಜಿಯವರ ಖಾದಿ ಆಂದೋಲನದ ಟೀಕೆಯನ್ನು ಮಾಡಿದ್ದಾರೆ. ರೈತನಿಗೆ ಸಿಗುವ ಬಿಡುವಿನ ಸಮಯ ಅವನಿಗೆ ಅವಶ್ಯಕ ಎಂದೂ ಅವರು ಭಾವಿಸುತ್ತಾರೆ. ಏಕೆಂದರೆ ಎಂಟು ತಿಂಗಳು ಒಂದೇ ಸಮನೆ ಸೊಂಟ ಮುರಿದುಕೊಂಡು ಕಷ್ಟ ಪಡುತ್ತಾನೆ, ಆದರೆ ಬಿಡುವಿನ ವೇಳೆಯಲ್ಲಿ ಚರಕಾ ನಡೆಸಬಹುದೆಂದು ಗಾಂಧೀಜಿ ಹೇಳುತ್ತಾರೆ. ಏಕೆಂದರೆ ಚರಕಾದಿಂದ ಮಾನಸಿಕ ಶಾಂತಿ ಕೂಡ ದೊರೆಯುತ್ತದೆ ಹಾಗೂ ತನ್ನ ಸಮಯದ ಉಪಯೋಗವನ್ನು ಕೂಡ ಮಾಡಿಕೊಳ್ಳಬಲ್ಲ. ಈ ಬಿಡುವಿನ ಸಮಯದ ಉಪಯೋಗ ರಾಷ್ಟ್ರಕ್ಕಾಗಿ ಆಗಬೇಕೆಂದು ಗಾಂಧೀಜಿ ಹೇಳುತ್ತಾರೆ. ಔದ್ಯೋಗಿಕರಣ ಮತ್ತು ಪಶ್ಚಿಮ ದೇಶಗಳ ಭೌತಿಕ ಸಭ್ಯತೆಯ ಬಗ್ಗೆ ಇರುವ ಗಾಂಧೀಜಿಯವರ ದೃಷ್ಟಿಯನ್ನು ಆಧುನಿಕ ಜನರು ಸ್ವೀಕರಿಸುವುದಿಲ್ಲ. ಅಲಹಾಬಾದ್‌ನ 'ಲೀಡರ್' ಪತ್ರಿಕೆ ಗಾಂಧೀಜಿಯವರ ಖಾದಿ ಅಭಿವೃದ್ಧಿಯ ಸಿದ್ಧಾಂತವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆಂಬುದಾಗಿ ಬರೆದಿದೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಂ.ಕೆ.ನಾರಾಯಣ, ಶ್ರೀ ವಿ.ಜಿ.ಜೋಷಿ – ಬೆಂಗಳೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಪ್ರೊ।।ಎಚ್.ಆರ್.ಮಂಜಪ್ಪಗೌಡ, ಶ್ರೀಮತಿ ಕೆ.ಟಿ.ಭ್ರಮರಾಂಬ,
ಶ್ರೀ ಎಚ್.ಕೃಷ್ಣೇಗೌಡ – ಹಾಸನ
ಶ್ರೀ ಕೆ.ಪಿ.ನೀಲಕಂಠಮೂರ್ತಿ – ನಂದಿಹಳ್ಳಿ
ಶ್ರೀ ವಿ.ಎಸ್.ಶ್ರೀಧರ್, ಪ್ರೊ।।ಜಯರಾಮ್, ಪ್ರೊ।।ಜಿ.ರಾಧಾಕೃಷ್ಣ,
ಶ್ರೀ ಮಂಗ್ಳೂರು ವಿಜಯ – ಬೆಂಗಳೂರು
ಖಾದಿ ಗ್ರಾಮೋದ್ಯೋಗ ಭಂಡಾರ – ತಿಪಟೂರು
ಶ್ರೀ ಚನ್ನಪ್ಪ, ಶ್ರೀ ಬಾದಲ್ ನಂಜುಂಡಸ್ವಾಮಿ,
ಶ್ರೀ ಕುಂದೂರು ಉಮೇಶಭಟ್ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

Cognignt . Poane

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.